ಸಾಹಿತ್ಯ ದಾಸೋಹ – 245

ಸಂಚಿಕೆ 69 – ಫೆಬ್ರವರಿ 2026 – 10.01.2026 ದಾಸೋಹದ ಬರಹಗಳ ಸಂಕಲನ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

೧೦ನೆಯ ಜನವರಿ ೨೦೨೬ರಂದು ನಡೆದ ೨೪೫ನೆಯ ದಾಸೋಹದಲ್ಲಿ ಪ್ರಸ್ತುತ ಪಡಿಸಿದ ಬರಹಗಳನ್ನೊಳಗೊಂಡ ಸಂಚಿಕೆ ಇಲ್ಲಿದೆ.

ಇತ್ತೀಚಿನ ದಾಸೋಹಗಳಲ್ಲಿ ಕವನಗಳ ಸಂಖ್ಯೆ ಕಡಿಮೆಯಾಗುತ್ತಿರುವ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಇದಕ್ಕೆ ಕೆಲವು ಸದಸ್ಯರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ಕಾರಣ, ೨೪೫ನೆಯ ದಾಸೋಹದಲ್ಲಿ ಸಾಕಷ್ಟು ಕವನಗಳು ಮೂಡಿಬಂದಿರುವುದು ಹೆಮ್ಮೆಯ ವಿಷಯ. ಮುಂದಿನ ದಿನಗಳಲ್ಲೂ, ಹೆಚ್ಚು ಸಂಖ್ಯೆಯ ಸದಸ್ಯರು ದಾಸೋಹ ಗಳಲ್ಲಿ ಭಾಗವಹಿಸಿ ಕತೆ, ಕವನ, ಪ್ರಬಂಧ, ವಿಡಂಬನೆ ಮುಂತಾದ ವೈವಿಧ್ಯಮಯ ಬರಹಗಳನ್ನು ಪ್ರಸ್ತುತಪಡಿಸಲಿ ಎಂಬುದೇ ನಮ್ಮ ಆಶಯ.

೨೪೫ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿ ಎಲ್ಲ ಪ್ರಸ್ತುತಿಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ದಾಖಲಿಸಿದ ಶ್ರೀಮತಿ ಸುಜಾತಾ ರವೀಶ್ ಅವರಿಗೂ, ಎಲ್ಲಾ ದಾಸೋಹಿಗಳಿಗೂ, ಕವಿಮನ ಅಂಕಣಕ್ಕೆ ಸ್ಪಂದಿಸಿದ ಕವಿಮಿತ್ರರಿಗೂ, ೨೩ನೆಯ ತಿಂಗಳ ಬೆಳಕು ಕಾರ್ಯಕ್ರಮದಲ್ಲಿ ಜನಸಾಮಾನ್ಯರಿಗೆ ಅಷ್ಟೇನೂ ಮಾಹಿತಿಯಿಲ್ಲದ ಬಾಹ್ಯಾಕಾಶ ವ್ಯವಸ್ಥೆ ಮತ್ತು ಅದರ ಅದ್ಭುತ ತಂತ್ರಜ್ಞಾನದ ಬಗ್ಗೆ ಮನಮುಟ್ಟುವಂತೆ ವಿವರಣೆ ನೀಡಿದ ಶ್ರೀ ವಿನೋದ ಚಿಪ್ಪಲಕಟ್ಟಿಯವರಿಗೂ ಮತ್ತು ನಮ್ಮ ಎಲ್ಲಾ ಕಾರ್ಯಕ್ರಮಗಳನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿದ ತಾಂತ್ರಿಕ ತಂಡಕ್ಕೂ ನಮ್ಮ ಕೃತಜ್ಞತೆಗಳು.

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ ೧೦ ಫೆಬ್ರವರಿ ೨೦೨೬

ದಾಸೋಹದ ಪುಟಗಳಲ್ಲಿ...

01	ಸಾಹಿತ್ಯ ದಾಸೋಹ 245 – ಕಾರ್ಯಕ್ರಮ ವರದಿ	ರಾಧಿಕಾ ವಿ. ಗುಜ್ಜರ್	4
02	ತಿಂಗಳ ಬೆಳಕು 23– 'ಇಂದಿನ ಜಗತ್ತಿನಲ್ಲಿ ಬಾಹ್ಯಾಕಾಶ ವ್ಯವಸ್ಥೆಗಳ ಪಾತ್ರ'-ವರದಿ	ಹು.ವಾ. ಶ್ರೀಪ್ರಕಾಶ್	6
03	'ಕವಿ ಮನ' – ನಾಲ್ಕು ಕವನಗಳು	ವಿವಿಧ ಕವಿಗಳು	9
04	ಬಣ್ಣರಹಿತ ಭಾನು	ಸಿಂಧು ಹರಿತಸ್	12
05	ಡೈರಿಯ ಪುಟ (ಕವನ)	ರಾಧಿಕಾ ಗುಜ್ಜರ್	14
06	'ಪಾತಜ್ಜಿ – ಪ್ರೀತಿ ಹಂಚುವ ಅಜ್ಜಿ'	ಸುಷುಮಾ ಸುರೇಶ್	15
07	ಮನದ ಕವನ, ಮಸ್ತಿಷ್ಕದಲಿ ಯಂತ್ರ (ಎರಡು ಕವನಗಳು)	ಮಾಲತಿ ಶ್ರೀನಿವಾಸನ್	18
08	ಸಂಸ್ಕೃತ ವ್ಯಂಜನ ಸಂಧಿಗಳು	ಗಣಪತಿ ಹೆಗಡೆ	19
09	'ವಸಂತ ಕಾಲ'	ವಿಠ್ಠಲ ಇಜೇರಿ	22
10	ಬೇಗ ಬಾ ಕೃಷ್ಣ (ಕವನ)	ಎಂ..ಆರ್. ರಘುನಾಥ್	23
11	ನಾನು–ನಮ್ಮವರು	ರೇಣುಕಾ ದೇಸಾಯಿ	24
12	ಬರಲಿ ಹೊಸತೆ (ಕವನ)	ಪೋರ	25
13	ಲೇಡೀಸ್ ಪಬ್	ನಾಗರತ್ನ ಚಂದ್ರಶೇಖರ	26
14	ಕವಲ್ವಟ್ಟೆ (ಕವನ)	ಪೂರ್ಣಿಮ ಭಗವಾನ್	28
15	ಹೋಟಲಲ್ಲಿ ಗುಂಡ, ಸೈನಿಕರಾಗುವೆವು, ಪಾಠ ಕಲಿತ ಗುಂಡ (ಮಕ್ಕಳ ಕವನಗಳು)	ಶೀಲಾ ಅರಕಲಗೂಡು	29
16	ನನ್ನ ಮಗಳಿನ್ನೂ ಮಗುವೆ	ಗೋಪಿನಾಥ್	30
17	ಶಾಂತ ಬೀರಿದ ಕಾಂತಿ, ಅರುಣ ಕಿರಣ (ಎರಡು ಕವನಗಳು)	ಪೂರ್ಣಿಮ ಭಗವಾನ್	33
18	ಮೋಜಿನ ಪ್ರಸಂಗಗಳು	ಗಾಯತ್ರಿ ಮೂರ್ತಿ	34
19	ಮಂಕಣಿ (ಕವನ)	ಪೂರ್ಣಿಮ ಭಗವಾನ್	36
20	'ಡಾ.ರಾಜ್ ಚಿತ್ರಗೀತೆಗಳಲ್ಲಿ ಬಾಂಧವ್ಯದ ನೆಲೆಗಳು'	ಮಹಾಬಲ	37
21	ನಡುಮನೆ, ಧೂಳಿಪಟ (ಎರಡು ಕವನಗಳು)	ಪೂರ್ಣಿಮ ಭಗವಾನ್	38
22	'ವಿಜ್ಞಾನದ ಜಾಡು ಬದಲಿಸಿದ ಜಾಣೆಯರು'	ಜಿ.ವಿ. ನಿರ್ಮಲ	39
23	ಗುನ್ನಂಪಟ್ಟಿ, ಇಂತೇದಿಸು (ಎರಡು ಕವನಗಳು)	ಪೂರ್ಣಿಮ ಭಗವಾನ್	41
24	ಸಾಹಿತ್ಯ ದಾಸೋಹ – 245 – ಅಧ್ಯಕ್ಷರ ಅನಿಸಿಕೆಗಳು	ಸುಜಾತಾ ರವೀಶ್	42

ಮುಖಚಿತ್ರ: 'ಬಾರೆಲೆ ಹಕ್ಕಿ, ಬಣ್ಣದ ಹಕ್ಕಿ' (ಚಿತ್ರ ಕೃಪೆ–ಅಂತರ್ಜಾಲ)
(ರಾಷ್ಟ್ರೀಯ ಹಕ್ಕಿಗಳ ದಿನಾಚರಣೆ 05.01.2026)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 245

ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

೧೦ನೆಯ ಜನವರಿ ೨೦೨೬ರ ಶನಿವಾರದಂದು ಸಂಜೆಯ ಮೊದಲ ಹೊರಳು, ೩.೩೦ ಗಂಟೆಗೆ ನಿಗದಿಯಾಗಿದ್ದ ಜನವರಿ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಸಮಯಕ್ಕೆ ಸರಿಯಾಗಿ ಆರಂಭವಾಯಿತು.

ಸಾಹಿತ್ಯ ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್.ಮಹಾಬಲ ಅವರು ಎಲ್ಲರಿಗೂ ಔಪಚಾರಿಕ ಸ್ವಾಗತ ಕೋರಿ, ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀಮತಿ ಸಿಂಧು ಹರಿತಸ್ ಅವರು ಸಭಾಧ್ಯಕ್ಷರು, ಸಂಚಾಲಕ ಸಮಿತಿ ಸದಸ್ಯರು ಮತ್ತು ಸಾಹಿತ್ಯ ದಾಸೋಹಿ ಮಿತ್ರರನ್ನು ಸ್ವಾಗತಿಸಿ, ಸಾಹಿತ್ಯ ದಾಸೋಹ–೨೪೫ರ ಅಧ್ಯಕ್ಷತೆ ವಹಿಸಿದ ಶ್ರೀಮತಿ ಸುಜಾತ ರವೀಶ್ ಅವರನ್ನು ಪರಿಚಯಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಪ್ರಾಸ್ತಾವಿಕ ನುಡಿಗಳನ್ನು ದಾಖಲಿಸಿದ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಪ್ರಥಮವಾಗಿ ಎಲ್ಲರಿಗೂ ೨೦೨೬ ಹೊಸ ವರ್ಷದ ಹಾಗೂ ಮುಂಬರಲಿರುವ ಸಂಕ್ರಾಂತಿ ಹಬ್ಬದ ಶುಭಾಶಯಗಳನ್ನು ಕೋರಿದರು. ೨೦೨೫ನೆಯ ವರ್ಷವು ಸುಖ–ದುಃಖಗಳ ಮಿಶ್ರಣವಾದ ಬಗ್ಗೆ ಪ್ರಸ್ತಾಪಿಸಿದರು. ವೇದಿಕೆಯ ಸದಸ್ಯರು ಹಾಗೂ ಗೋಕಾಕ್ ಚಳವಳಿ ಕುರಿತಾದ ಹೋರಾಟದ ಒಂದೇ ಒಂದು ಅದ್ಭುತ ಐತಿಹಾಸಿಕ ಸಾಕ್ಷಚಿತ್ರ ನಿರ್ಮಿಸಿದ ಶ್ರೀ ಬಿ.ಎಸ್.ಮನೋಹರ ಅವರು ದಿನಾಂಕ ೨೩.೧೨.೨೦೨೫ರಂದು ನಿಧನರಾದ ಬಗ್ಗೆ ತಿಳಿಸಿ, ಸಂತಾಪ ವ್ಯಕ್ತಪಡಿಸಿ, ಶ್ರದ್ಧಾಂಜಲಿ ಸೂಚಿಸಿದರು. ಅಲ್ಲದೆ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡವನ್ನು ಬಳಸುವ ಹಾಗೂ ಬೆಳೆಸುವ ಕಾರ್ಯವನ್ನು ಐದು ದಶಕಗಳು ವ್ರತದಂತೆ ನಡೆಸಿದ, ಸಮನ್ವಯ ಸಮಿತಿಯ ಮುಂದಾಳತ್ವ ವಹಿಸಿ ಎಲ್ಲರನ್ನೂ ಒಗ್ಗೂಡಿಸಿ, ಪ್ರಾ.ಎಚ್ಚೆಸ್ಕೆಯವರ ನೇತೃತ್ವದಲ್ಲಿ ಕನ್ನಡ ಬ್ಯಾಂಕಿಂಗ್ ಕಮ್ಮಟ ನಡೆಸಿದ ಮತ್ತು ಬ್ಯಾಂಕಿಂಗ್ ನಿಘಂಟು ತರುವಲ್ಲಿ ಅವಿರತ ಶ್ರಮಿಸಿದ ಶ್ರೀ ಪಾ.ರಾಜಗೋಪಾಲರು ೩೧.೧೨.೨೦೨೫ರಂದು ನಿಧನರಾದ ಬಗ್ಗೆ ವೇದಿಕೆಯ ಪರವಾಗಿ ಸಂತಾಪವನ್ನು ವ್ಯಕ್ತಪಡಿಸಿದರು, ಈ ಸಂಬಂಧ ಕ ೧೨.೦೧.೨೦೨೬ರಂದು ಸಂಜೆ ೪:೩೦ಕ್ಕೆ ಬಿ.ಎಂ.ಶ್ರೀ ಕಲಾಭವನದಲ್ಲಿ ಹಮ್ಮಿಕೊಳ್ಳಲಾಗಿರುವ ಶ್ರದ್ಧಾಂಜಲಿ ಸಭೆಯ ಬಗ್ಗೆ ಮಾಹಿತಿಯನ್ನು ನೀಡಿ ಸದಸ್ಯರೆಲ್ಲರೂ ಭಾಗವಹಿಸಲು ಕರೆ ನೀಡಿದರು. ಇತ್ತೀಚೆಗೆ ಅಕಾಲಿಕ ಮರಣ ಹೊಂದಿದ ಸಾಹಿತಿ ಹಾಗೂ ಪ್ರಕಾಶಕಿ ಶ್ರೀಮತಿ ಆಶಾ ರಘು ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತಾ, ಸಾಹಿತ್ಯ ಅಭ್ಯಾಸಿಗಳಾದ ನಾವು ಎಂತಹ ಸಂಕಷ್ಟಗಳಲ್ಲಿಯೂ ಬದುಕಿನಲ್ಲಿ ಮನೋಧೈರ್ಯ ಕಳೆದುಕೊಳ್ಳಬಾರದೆಂದು ಕಿವಿಮಾತು ಹೇಳಿ, ಆಶಾ ರಘು ಅವರಿಗೂ ಸಂತಾಪ ಸೂಚಿಸಿದರು.



ಸಮನ್ವಯ ಸಮಿತಿಯ ವೇದಿಕೆಯ ಅನೇಕ ಸದಸ್ಯರ ಪುಸ್ತಕಗಳು ಮೈಸೂರಿನ ಶ್ರೀ ಸಂಸ್ಕೃತಿ ಸುಬ್ರಹ್ಮಣ್ಯ ಅವರ ಪ್ರಕಾಶನದ ಮೂಲಕ ಬಿಡುಗಡೆಯಾಗಿರುವುದನ್ನು ಶ್ಲಾಘಿಸಿದ ಶ್ರೀ ರವೀಂದ್ರ ಅವರು, ಎಲ್ಲ ಕೃತಿಕಾರರನ್ನೂ ಅಭಿನಂದಿಸಿದರು. ಶ್ರೀಯುತ ಎಂ.ಎಸ್.ನರಸಿಂಹಮೂರ್ತಿ, ಕೆ.ಆರ್.ಎಸ್.ಮೂರ್ತಿ, ಬಿ.ಎಸ್.ಚಂದ್ರಶೇಖರ್ ಹಾಗೂ ಶ್ರೀಮತಿ ಪ್ರಮೋದಾ ಮೂರ್ತಿ ಮತ್ತು ಶ್ರೀಮತಿ ಸಿಂಧು ಹರಿತಸ್ ಅವರ ಪುಸ್ತಕಗಳ ಕುರಿತು ಮಾಹಿತಿಯನ್ನು ನೀಡಿ ಸದಸ್ಯರುಗಳೆಲ್ಲರೂ ಈ ಪುಸ್ತಕಗಳನ್ನು ಕೊಂಡು, ಓದಿ, ಪ್ರೋತ್ಸಾಹಿಸಲು ಕರೆ ನೀಡಿದರು.

ವೇದಿಕೆಯ ಹಿರಿಯ ಸದಸ್ಯರಾದ ಶ್ರೀ ಎಚ್.ಎಲ್.ಗುರುಪ್ರಸಾದ್ ಅವರು ಕಳೆದ ೨೦ ವರ್ಷಗಳಿಂದ ದೇಶ ವಿದೇಶಗಳಲ್ಲಿನ ಸುಮಾರು ೭೦-೮೦ ಚಾರಣ ಪ್ರವಾಸಗಳನ್ನು ಕೈಗೊಂಡು ಸಾಧನೆ ಮಾಡಿರುವುದರ ಬಗ್ಗೆ ಮಾಹಿತಿ ನೀಡಿದ ಶ್ರೀ ರವೀಂದ್ರರು, ಅವರ ಈ ಚಾರಣಾನುಭವ ಲೇಖನಗಳ ಸಂಕಲನ "ಚಾರಣ ಸವಿ ಹೂರಣ" ಕೃತಿ ಬಿಡುಗಡೆಯಾಗಿದ್ದು, ವೇದಿಕೆಯ ಸದಸ್ಯರು ಈ ಕೃತಿಯನ್ನು ಕೊಂಡು, ಓದಿ, ಪ್ರೋತ್ಸಾಹಿಸಬೇಕೆಂದು ಕರೆ ನೀಡಿದರು.

೨೦೨೬ರ ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾಪಿಸಿದ ಶ್ರೀ ರವೀಂದ್ರ ಅವರು, ಈಗಾಗಲೇ ವೇದಿಕೆಯ ಯೋಜನೆಗಳು ಸರದಿಯಲ್ಲಿ ನಿಂತಿದ್ದು, ಶ್ರಾವಣ ಪುಟ್ಟ ಕಥಾ ಸಂಕಲನ ಶೀಘ್ರದಲ್ಲಿಯೇ ಬರಲಿದೆ ಎಂದು ನುಡಿದರು. ಮಾಸಿಕ ಸಾಹಿತ್ಯ ದಾಸೋಹ ಸಹ ೨೫೦ರ ಸಂಖ್ಯೆಯ ಹತ್ತಿರವಿದ್ದು ಇದರ ಆಚರಣೆಯು ಸಹ ವಿಶೇಷವಾಗಲಿದೆ ಎಂದು ಸೂಚನೆ ನೀಡಿದರು. .

ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ಸದಸ್ಯರಿಂದ ಲೇಖನಗಳ ವಾಚನವು ಆರಂಭವಾಯಿತು. ಹದಿನೇಳು ಸದಸ್ಯರು ಪ್ರಸ್ತುತಿಗಾಗಿ ಹೆಸರು ನೋಂದಾಯಿಸಿದ್ದು, ಹದಿನಾರು ಬರಹಗಳು ವಾಚಿಸಲ್ಪಟ್ಟವು.

ಸಾಹಿತ್ಯ ದಾಸೋಹ-೨೪೫ರ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಸುಜಾತ ರವೀಶ್ ಅವರು ವೇದಿಕೆಗೆ ಹಾಗೂ ಸಾಹಿತ್ಯ ದಾಸೋಹದ ಅಧ್ಯಕ್ಷ ಸ್ಥಾನಕ್ಕಾಗಿ ಅವಕಾಶ ನೀಡಿದ ಸಂಚಾಲಕ ಮಂಡಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದರು. ನಂತರ ದಾಸೋಹದಲ್ಲಿ ಪ್ರಸ್ತುತಿಪಡಿಸಲಾದ ಎಲ್ಲ ಬರಹಗಳ ಬಗ್ಗೆ ವಿಶ್ಲೇಷಣೆಯನ್ನು ಆರಂಭಿಸಿ ಅತ್ಯಂತ ಶ್ರದ್ಧೆ ಹಾಗೂ ಪ್ರೀತಿಯಿಂದ ಪ್ರತಿ ಪ್ರಸ್ತುತಿಯ ಬಗ್ಗೆ ವಿವರಗಳನ್ನು ಮತ್ತು ಆ ಪ್ರಸ್ತುತಿಗಳಲ್ಲಿ ಕಂಡುಬಂದ ಭಾಷೆ ಹಾಗೂ ಸಾಹಿತ್ಯಕ ವಿಶೇಷತೆಗಳನ್ನು ವಿವರಿಸಿದರು. ಸ್ವತಃ ನುರಿತ ಬರಹಗಾರ್ತಿಯಾದ ಅವರ ವಿಶ್ಲೇಷಣಾ ಸಾರವು ಅತ್ಯಂತ ಮೌಲಿಕ ನುಡಿಗಳು ಎನಿಸಿದವು. ಪ್ರಸ್ತುತಿಗೊಳಿಸಿದ ಸದಸ್ಯರಲ್ಲಿ ತಮ್ಮ ತಮ್ಮ ಪ್ರಸ್ತುತಿಯ ಬಗ್ಗೆ ಒಂದು ವಿಶೇಷ ಒಳನೋಟ ದೊರಕಿದ ಸಮಾಧಾನ ನೀಡಿದವು.

ಕೊನೆಯಲ್ಲಿ ಶ್ರೀ ಕೆ.ಎನ್.ಮಹಾಬಲ ಅವರು ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ ಜನವರಿ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಸಮಾಪ್ತವಾಯಿತು.

ಸಾಹಿತ್ಯ ದಾಸೋಹದ ಸಂಚಾಲಕತ್ವ : ಶ್ರೀ ಕೆ.ಎನ್.ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ.ವಿ. ಗುಜ್ಜರ್
ವಿಡಿಯೋ ಸಂಸ್ಕರಣೆ : ಶ್ರೀಮತಿ ರೇಣುಕಾ ದೇಸಾಯಿ
ದಾಸೋಹದ ಸಂಚಿಕೆ ತಯಾರಕರು : ಶ್ರೀ ಶೃಂಗೇಶ್ವರ ಶರ್ಮ

***

ತಿಂಗಳ ಬೆಳಕು - 23

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

"ಇಂದಿನ ಜಗತ್ತಿನಲ್ಲಿ ಬಾಹ್ಯಕಾಶ ವ್ಯವಸ್ಥೆಗಳ ಪಾತ್ರ"

ಉಪನ್ಯಾಸಕರು: ಶ್ರೀ ವಿನೋದ ಚಿಪ್ಪಲಕಟ್ಟಿ

ಕಾರ್ಯಕ್ರಮ ವರದಿ: ಹ.ವಾ. ಶ್ರೀಪ್ರಕಾಶ್

ದಿನಾಂಕ 24.01.2026ರಂದು ಶನಿವಾರ ಸಂಜೆ 5:30 ಗಂಟೆಗೆ 'ತಿಂಗಳ ಬೆಳಕು–23' ಕಾರ್ಯಕ್ರಮದಲ್ಲಿ "ಇಂದಿನ ಜಗತ್ತಿನಲ್ಲಿ ಬಾಹ್ಯಾಕಾಶ ವ್ಯವಸ್ಥೆಗಳ ಪಾತ್ರ "ಎಂಬ ಬಗ್ಗೆ ಶ್ರೀ ವಿನೋದ್ ಚಿಪ್ಪಲಕಟ್ಟಿಯವರು ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಅಂತರ್ಜಾಲ ಗೂಗಲ್ ಮೀಟ್ ಮುಖೇನ ಮಾತನಾಡಿದರು.

ಶ್ರೀ ರವಿಕುಸುಬಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿದ ನಂತರ ಶ್ರೀ ವಿಠಲ ಇಜೇರಿಯವರು ಎಲ್ಲರನ್ನೂ ಸ್ವಾಗತಿಸಿ, ಅತಿಥಿಗಳಾದ ವಿನೋದ್ ಚಿಪ್ಪಲಕಟ್ಟಿಯವರನ್ನು ಪರಿಚಯಿಸಿದರು.

ನಂತರ ಶ್ರೀ ವಿನೋದ್ ಚಿಪ್ಪಲಕಟ್ಟಿಯವರು, 'ನಮ್ಮ ದೈನಂದಿನ ಆಗುಹೋಗುಗಳಲ್ಲಿ ಬಾಹ್ಯಾಕಾಶದ ಕೊಡುಗೆ ಇದ್ದೇ ಇರುತ್ತದೆ ಕಠಿಣವಾದ ಬಾಹ್ಯಾಕಾಶ ಯಾನದ ಅಗತ್ಯವೇನು? ಜನ ಅಲ್ಲಿ ಹೋಗಿ ಏಕೆ ಕಷ್ಟಪಡುತ್ತಾರೆ? ಅದರಿಂದ ಸಮಾಜಕ್ಕೆ ಏನು ಉಪಯೋಗ ಎಂಬೆಲ್ಲ ಬಗ್ಗೆ ನಾವು ತಿಳಿಯುವುದು ಅಗತ್ಯ' ಎಂದು ತಮ್ಮ ಮಾತುಗಳನ್ನು ಆರಂಭಿಸಿ, ಉಪನ್ಯಾಸದುದ್ದಕ್ಕೂ ಬಾಹ್ಯಾಕಾಶ ಯಾನಕ್ಕೆ ಸಂಬಂಧಿಸಿದಂತೆ ಹಲವು ಉಪಯುಕ್ತ ಮಾಹಿತಿಗಳನ್ನು ನೀಡಿದರು. ಅವರ ಉಪನ್ಯಾಸದ ಕೆಲವು ಮುಖ್ಯ ಅಂಶಗಳು ಹೀಗಿವೆ:

ಮೇಲಕ್ಕೆ ಎಸೆದ ಚೆಂಡು ಹಾರಿ ಬೀಳುತ್ತದೆ. ಡ್ರೋಣ್‌ಗಳು ಸುಮಾರು 120 ಮೀಟರ್ ಎತ್ತರದಲ್ಲಿ ಹಾರಿ ಚಿತ್ರಗಳ ಸೆರೆಹಿಡಿಯುತ್ತವೆ. ಮೌಂಟ್ ಎವರೆಸ್ಟ್ ಎತ್ತರ ಸುಮಾರು ಒಂಬತ್ತು ಕಿಲೋಮೀಟರ್. ವಿಮಾನಗಳು ಸುಮಾರು 10 ಕಿ.ಮೀ ಮೇಲೆ ಓಡಾಡುತ್ತವೆ. ಹೊರಗಿನ ಹವಾಮಾನ ಮೈನಸ್ 20, ಮೈನಸ್ 30 ಹೀಗೆಲ್ಲ ಇರುತ್ತದೆ. ಫೈಟರ್ ವಿಮಾನಗಳು 15–20 ಕಿ.ಮೀ. ಎತ್ತರದಲ್ಲಿ ಮೇಲೆ ಹಾರಾಡುತ್ತವೆ. .ಸುಮಾರು 500 ಕಿಲೋಮೀಟರ್ ಮೇಲೆ ಹೋದಾಗ ಅಲ್ಲಿ ಗಾಳಿ ಇರುವುದಿಲ್ಲ ಅಲ್ಲಿ ವ್ಯಾಕ್ಯೂಮ್ ಸೃಷ್ಟಿಯಾಗುತ್ತದೆ. ಸುಮಾರು 36,000 ಕಿಲೋ ಮೀಟರಿಗೂ ಮೇಲಕ್ಕೆ ಹೋಗುವ ಉಪಗ್ರಹದ ಎತ್ತರವನ್ನು ನೀವೇ ಊಹಿಸಿ.

ಸಮುದ್ರದಲ್ಲಿ ಮುನ್ನೂರು ಮೀಟರ್ ಕೆಳಗೆ ಸಬ್‌ಮರೀನ್ ಇರುತ್ತವೆ. ಕೆಳಗೆ ಹೋದಂತೆಲ್ಲಾ ಒತ್ತಡ ಜಾಸ್ತಿ. ಸಬ್‌ಮರೀನ್ ಒಳಗೆ ಒತ್ತಡ ಕಡಿಮೆ ಮಾಡುವ ವ್ಯವಸ್ಥೆ ಇರುತ್ತದೆ. ವಿಮಾನದ ಹೊರಗೆ ಮೈನಸ್ 40° ತಾಪಮಾನ ಇದ್ದಾಗ ಒಳಗೆ ಸುಮಾರು 20 ಡಿಗ್ರಿಯಲ್ಲಿ ಹವಾಮಾನ ನಿಯಂತ್ರಣ ಮಾಡಿರುತ್ತಾರೆ ಹೀಗೆ 500 ಕಿಲೋಮೀಟರ್ ಮೇಲೆ ಹೋದಾಗ ವ್ಯಾಕ್ಯೂಮ್ ಇದ್ದು ಸುಮಾರು ಮೈನಸ್ 120 ಡಿಗ್ರಿ ತಾಪಮಾನ ಇರುತ್ತದೆ, ಗುರುತ್ವಾಕರ್ಷಣ ಶಕ್ತಿ ಇರುವುದಿಲ್ಲ. .ಅಲ್ಲಿ

ಗಗನಯಾತ್ರಿಗಳು ತೇಲುವುದನ್ನು ಕಾಣಬಹುದು. ಗಾಳಿಯೇ ಇಲ್ಲದಿರುವುದರಿಂದ ಶಬ್ದ ಕೇಳುವುದಿಲ್ಲ. ಚಂದ್ರನ ಕಡೆಗಿರುವ ಭಾಗ ಪ್ಲಸ್ 125 ಡಿಗ್ರಿ ಇರುತ್ತದೆ. ವಿರುದ್ಧ ದಿಕ್ಕಿನಲ್ಲಿ ಮೈನಸ್ 125 ಡಿಗ್ರಿ ಇರುತ್ತದೆ. ಅಂತಹ ಡೆಲ್ಟಾ ಡಿಫರೆನ್ಸ್ ಇರುವುದರಿಂದ ಉಪಗ್ರಹ ತಯಾರುಮಾಡುವಾಗ ಉಪಕರಣಗಳು ಉಪಯೋಗಕ್ಕೆ ಬರುವಂತೆ ನೋಡಿಕೊಳ್ಳಬೇಕಾಗುತ್ತದೆ. ಹೀಗಾಗಿ ಬಾಹ್ಯಾಕಾಶ ಉಡ್ಡಯನ ಅತಿ ಖರ್ಚಿನದ್ದಾಗಿದೆ. ಗಗನಯಾತ್ರಿ ಧರಿಸುವ ಉಡುಪು ಮತ್ತು ಉಪಕರಣಗಳು ಕೋಟ್ಯಾಂತರ ರೂಪಾಯಿ ಬೆಲೆ ಬಾಳುತ್ತವೆ.

ಹೀಗೆ ಹಾರಿಸಿದ ಉಪಗ್ರಹಗಳು 10ರಿಂದ 20 ವರ್ಷಗಳ ಕಾಲ ಕೆಲಸ ಮಾಡುತ್ತವೆ. ರಾಡರ್ ಕ್ಯಾಮೆರಾಗಳ ಬೆಲೆ ಇಲ್ಲಿ 15,000 ಇದ್ದರೆ, ಬಾಹ್ಯಾಕಾಶದಲ್ಲಿ 400 ಕೋಟಿಯಾಗುತ್ತದೆ. ಸೌರ ವಿಕಿರಣ ಅತಿ ಕಠಿಣ, ಕಠೋರ. ಅಲ್ಲಿ ಅತಿಯಾದ ವಿಕಿರಣವಿರುತ್ತದೆ. ಎಲ್ಲವನ್ನೂ ಉಪಕರಣಗಳು ತಡೆಯಬೇಕು. ಪ್ರತಿಯೊಂದು ಚಿಪ್ಪನ್ನೂ ಹಾಗೆಯೇ ತಯಾರಿಸಲಾಗಿರುತ್ತದೆ. ಬಾಹ್ಯಾಕಾಶ ನೌಕೆಯಲ್ಲಿ ಶೂನ್ಯ ಗ್ರಾವಿಟಿ ಇರುವುದರಿಂದ ನೀರು ಕುಡಿಯುವುದಾಗಲಿ, ಆಹಾರ ತಿನ್ನುವುದಾಗಲಿ ಎಲ್ಲವೂ ಕಷ್ಟವೇ. ಅಲ್ಲೇನೂ ಅನಿಯಮಿತ ನೀರು ಸರಬರಾಜು ಇರುವುದಿಲ್ಲ. ಉಪಯೋಗಿಸಿದ್ದನ್ನೇ ಫಿಲ್ಟರ್ ಮಾಡಿಕೊಂಡು ಮತ್ತೆ ಉಪಯೋಗಿಸಬೇಕು. ಇದರಿಂದ ದೇಹದ ಮೇಲೆ ಪರಿಣಾಮವಾಗುತ್ತದೆ. ಎಲುಬು ದುರ್ಬಲವಾಗುವುದು, ತಲೆ ತಿರುಗುವುದು ಮುಂತಾದ ಸಮಸ್ಯೆ ಎದುರಿಸಬೇಕಾಗುತ್ತದೆ. ಅಲ್ಲಿ ಪ್ರತಿಯೊಂದನ್ನೂ ರಿಸೈಕಲ್ ಮಾಡಿ ಬಳಸಬೇಕಾಗುತ್ತದೆ. ಬಾಹ್ಯಾಕಾಶದಲ್ಲಿ ಸುಮಾರು 500ರಿಂದ 800 ಮಿಲಿಯನ್ ಡಾಲರ್ ಬಿಜಿನೆಸ್ ಇದೆ. ಒಂದು ಬಿಲಿಯನ್ ಡಾಲರು ಎಂದರೆ 9000 ಕೋಟಿ ರೂ.ಗಳು. ನಾವು ತಂತ್ರಜ್ಞಾನದಲ್ಲಿ ಮುಂದುವರೆದಿದ್ದರೂ ಬಾಹ್ಯಾಕಾಶದ ಎಕಾನಮಿಯಲ್ಲಿ ಶೇಕಡ ಎರಡರಷ್ಟು ಮಾತ್ರ ನಮ್ಮದಿದೆ. ನಾವು ಸಂವಹನ ಉಪಗ್ರಹಗಳನ್ನು ನಮ್ಮ ಬಜೆಟ್‌ಗೆ ತಕ್ಕಂತೆ ಮಾಡುತ್ತಿದ್ದೇವೆ. ಚೈನಾ ಬಳಿ 400 ಉಪಗ್ರಹವಿದ್ದರೆ ನಮ್ಮ ದೇಶದ ಉಪಗ್ರಹಗಳ ಸಂಖ್ಯೆ ಐವತ್ತು ಮಾತ್ರ.

ಬಾಹ್ಯಾಕಾಶ (ಸ್ಪೇಸ್) ಎಲ್ಲರಿಗೂ ಸೇರಿದ್ದು. ಹೀಗಾಗಿ ಎಲ್ಲರೂ ಇದನ್ನು ಸ್ಪರ್ಧಾತ್ಮಕವಾಗಿ ಮೊದಲು ತಮ್ಮದಾಗಿಸಿಕೊಳ್ಳುವ ತವಕದಲ್ಲಿದ್ದಾರೆ. ನಾವು ಚಂದ್ರಯಾನದವರೆಗೂ ಪ್ರಗತಿ ಸಾಧಿಸಿದ್ದೇವೆ. ಸ್ಪೇಸ್ ಎಕಾನಮಿ ಹೆಚ್ಚು ಮಾಡುವುದು ಅಗತ್ಯವಿದೆ. ಎಲಾನ್ ಮಸ್ಕ್‌ನಂತಹವರು ನಮ್ಮಲ್ಲೂ ಬೇಕಾಗಿದ್ದಾರೆ. ಬಾಹ್ಯಾಕಾಶದಲ್ಲಿ ದೊರೆಯುವ ರಿಸೋರ್ಸ್ ಪಡೆಯುವ ಸಾಮರ್ಥ್ಯ ಬೆಳೆಸಬೇಕಾಗಿದೆ. ಲಾಂಚ್ ಸೆಗ್‌ಮೆಂಟ್ ಉಡ್ಡಯನಕ್ಕೆ ಅಗತ್ಯ, ಅದಕ್ಕೆ ಕಮಾಂಡ್ ಕೊಡಲು ಅರ್ಥ್ ಸ್ಟೇಷನ್ ಬೇಕು. ಸ್ಪೇಸ್ ಸೆಗ್‌ಮೆಂಟಿನಲ್ಲಿ ಉಪಗ್ರಹಗಳಿರುತ್ತವೆ. ಮೇಲಿಂದಲೇ ಆಪರೇಟ್ ಮಾಡುವ ತಂತ್ರಜ್ಞಾನವಿರುತ್ತದೆ. ಇಸ್ರೋನಲ್ಲಿ ಉಪಗ್ರಹ ತಯಾರಾದರೂ ಹಲವು ಉಪಕರಣಗಳು ಬೇರೆ ಬೇರೆ ಕಡೆ ತಯಾರಾಗುತ್ತವೆ. ಈ ಉಪಗ್ರಹವನ್ನು ಲಾಂಚರ್ ಮೇಲೆ ಇಟ್ಟು ಕಳಿಸುವ ವ್ಯವಸ್ಥೆಗೆ ಅಪ್ ಸ್ಟ್ರೀಮ್ ಎನ್ನುತ್ತಾರೆ. ಉಪಗ್ರಹ ಲಾಂಚ್ ಮಾಡುವುದು ಕೇವಲ 10 ಹತ್ತು ರೂಪಾಯಿಯ ಪಾತ್ರವಾದರೆ ಉಳಿದ 90 ರೂಪಾಯಿಯ ಪಾತ್ರ ನಂತರದ್ದು. ಅಲ್ಲಿಂದ ಮಾಡುವ ಭೂ ವೀಕ್ಷಣೆ ಹಲವು ಸಂಗತಿಗಳನ್ನು ಗಮನಿಸಲು ಅನುವುಮಾಡುತ್ತದೆ. ಸೆಟಲೈಟ್ ಟಿವಿ, ಜಿಪಿಎಸ್ ವೆದರ್ ಮಾನಿಟರಿಂಗ್, ಅಗ್ರಿಕಲ್ಚರ್ ಮಾನಿಟರಿಂಗ್, ಜಿಯೋ ಸ್ಪೇಸ್ ಮಾನಿಟರಿಂಗ್ ಹೀಗೆ ಏನೆಲ್ಲ ಮಾಡಬಹುದು.

ಉದಾಹರಣೆಗೆ ಓಲಾ ಎಂಬುದು ಸೆಟಲೈಟ್ ಮುಖಾಂತರ ಜಿಪಿಎಸ್ ಬಳಸಿಕೊಂಡ ಒಂದು ಅಪ್ಲಿಕೇಶನ್. ಇಂತಹವು ಎಷ್ಟೋ ಇವೆ. ಹೀಗೆ 90 ಭಾಗ ಈ ತರಹದ ಅಪ್ಲಿಕೇಶನ್‌ಗಳೇ ಇರುತ್ತವೆ. ಅದನ್ನು ಬಾಹ್ಯಾಕಾಶ ಎಕಾನಮಿ ಅನ್ನುತ್ತೇವೆ. ಇದರಲ್ಲಿ ನಮ್ಮ ಭಾಗ ಕೇವಲ ಶೇಕಡ ಎರಡರಷ್ಟು ಮಾತ್ರ, ಬೆಳೆಯ ಮುನ್ನೋಟ ಪಡೆದು ಪ್ರೀಮಿಯಂ ನಿರ್ಧರಿಸಬಹುದು. ಇಂತಹ ಹಲವು ಆಪ್‌ಗಳಿವೆ. ಇವನ್ನು ಡೌನ್‌ಸ್ಟ್ರೀಮ್ ಆಪ್ಲಿಕೇಶನ್ ಎನ್ನುತ್ತೇವೆ. ಭೂ ವೀಕ್ಷಣೆಯಿಂದ ಕಾಡು ಕಡಿಮೆಯಾಗುವುದು, ಸಮುದ್ರಮಟ್ಟ ಹೀಗೆ ಎಲ್ಲವನ್ನೂ ಗಮನಿಸಬಹುದು. ಡಿಸಾಸ್ಟರ್ ಮ್ಯಾನೇಜ್ಮೆಂಟಿಗೂ ಅನುಕೂಲ. ಭೂ ವೀಕ್ಷಣೆಯಿಂದಾಗಿ ವಿಮಾನ ನಿಲ್ದಾಣ ಅಥವಾ ಮತ್ತಿತರ ಯೋಜನೆಗಳಿಗೆ ಇನ್‌ಫ್ರಾಸ್ಟ್ರಕ್ಚರ್ ಪ್ಲಾನಿಂಗ್ ಅಂಡ್ ಡೆವಲಪ್ಮೆಂಟ್ ಮಾಡಲು ಸಹಾಯವಾಗುತ್ತದೆ.

ಉಪಗ್ರಹ ಕಳಿಸುವ ಚಿತ್ರಗಳು ಬಹಳ ಉಪಯೋಗಕ್ಕೆ ಬರುತ್ತವೆ. ಸಂವಹನದ ಕೊಡುಗೆ ಅಪಾರ. ದೂರದರ್ಶನ, ನೆಟ್ ಬ್ಯಾಂಕಿಂಗ್ ಇತ್ಯಾದಿ ಸೆಟಲೈಟ್ ಮುಖಾಂತರ ಆಗುತ್ತಿವೆ. ನುಸುಳುಕೋರರನ್ನು ಪತ್ತೆಹಚ್ಚಲು ಯಾವ ಬೋಟ್‌ಗಳು ಎಲ್ಲಿಂದ

ಪ್ರವೇಶಿಸುತ್ತಿವೆ ಇತ್ಯಾದಿ ಎಲ್ಲವನ್ನೂ ಗಮನಿಸಿ ಪತ್ತೆಹಚ್ಚಬಹುದು. ನೌಕಾದಳಕ್ಕೋಸ್ಕರ ನಾವು ಆರು ಸೆಟಲೈಟ್ ಮಾಡಿದ್ದೇವೆ. ಈಗ ಸೆಟಲೈಟ್ ಮುಖಾಂತರ ವಿಮಾನದಲ್ಲೂ ಇಂಟರ್ನೆಟ್ ಸೇವೆ ಬಂದಿದೆ. .ಕೇಂದ್ರ ಸರ್ಕಾರವು ತನ್ನ ಎಲ್ಲ ಇಲಾಖೆಗಳಿಗೂ ಬಾಹ್ಯಾಕಾಶ ತಂತ್ರಜ್ಞಾನ ಉಪಯೋಗಿಸಿಕೊಳ್ಳುವಂತೆ ಸಲಹೆ ನೀಡಿದೆ. ಹಲವಾರು ಆ್ಯಪ್(ಅಪ್ಲಿಕೇಶನ್)ಗಳು ಬಳಕೆಗೆ ಬರುತ್ತಿವೆ. ಇದಕ್ಕೆ ಬೇಕಾದ ಡಾಟಾ ತಯಾರಿಸಲಾಗುತ್ತಿದೆ. ಈಗ ಅನೇಕ ಅಪ್ಲಿಕೇಶನ್‌ಗಳನ್ನು ಹೆಚ್ಚು ಖರ್ಚಿಲ್ಲದೆ ಬುದ್ಧಿವಂತಿಕೆಯಿಂದ ಮಾಡುತ್ತಾರೆ. ದಿನನಿತ್ಯವೂ ಹೊಸ ಹೊಸ ಅಪ್ಲಿಕೇಶನ್‌ಗಳು ಬರುತ್ತಿವೆ.

ಬಾಹ್ಯಾಕಾಶ ಪ್ರವಾಸೋದ್ಯಮವು ಮುಂದೆ ಹೆಚ್ಚಬಹುದು. ಇಂದು ಜಾಗತಿಕ ಸಂವಹನ ಸುಲಭಸಾಧ್ಯವಾಗಿದೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ನಡೆಯುವ ಕಾರ್ಯಕ್ರಮವನ್ನು ನೇರಪ್ರಸಾರದಲ್ಲಿ ನೋಡಬಹುದು. ಮಂಗಳ ಗ್ರಹ ವಾಸಿಸಲು ಯೋಗ್ಯವಾಗಿದೆ. ಅಂದರೆ ಮೊದಲು ಅಲ್ಲಿ ಜಾಗ ಹಿಡಿಯಲು ಬೇಕಾದ ತಯಾರಿ ಮಾಡಿಕೊಳ್ಳಬೇಕು. ವಾಸಯೋಗ್ಯತೆ ಬಗ್ಗೆ ಚಿಂತಿಸಬೇಕು. ಇಂದಿನ ಕನಸು ಮುಂದೆ ನನಸಾದೀತು. ಶ್ರೀಹರಿಕೋಟ ಮುಂತಾದೆಡೆ ಲಾಂಚಿಂಗ್ ಸ್ಟೇಶನ್‌ಗಳಿವೆ. ಸೆಟಲೈಟ್ ಗಳು ಬೇರೆ ಬೇರೆ ತರಹ ಇರುತ್ತವೆ. ಯಾವ ಕೆಲಸಕ್ಕೆ ಎಂಬುದನ್ನು ಆಧರಿಸಿ ಅವನ್ನು ವಿಶೇಷವಾಗಿ ನಿರ್ಮಿಸಿರುತ್ತಾರೆ. ಆರ್ಬಿಟಲ್ ಸರ್ವಿಸಿಂಗ್ ಎಂಬುದು ಹೋಗುತ್ತಿರುವಾಗ ರಿಪೇರಿ ಮಾಡುವ ವ್ಯವಸ್ಥೆ. ಒಂದು ಚಿಕ್ಕ ಸೆಟಲೈಟ್ ತಯಾರು ಮಾಡಲು 100ರಿಂದ 150 ಕೋಟಿ ರೂಪಾಯಿಗಳು ಬೇಕು, ನೂರಾರು ತಂತ್ರಜ್ಞರು ಬೇಕು. ಭೂಮಿಯಿಂದ ಕಂಟ್ರೋಲ್ ಮಾಡಲು ಹಲವು ವಿಜ್ಞಾನಿಗಳು ಬೇಕು. ಸೆಟಲೈಟ್ ಮೇಲೆ ಬಹಳ ಡಿಪೆಂಡೆನ್ಸ್ ಇರುತ್ತದೆ. ವಿವಿಧ ಕ್ಷೇತ್ರಗಳಲ್ಲಿ ನುರಿತ ಎಲ್ಲರೂ ಈ ವ್ಯವಸ್ಥೆಗೆ ಅಗತ್ಯ.

ಮಿಲಿಟರಿಯಲ್ಲಿ ಈಗ ಸೆಟಲೈಟ್‌ಗಳ ಅಗತ್ಯ ಬಹಳಷ್ಟಿದೆ. ರಾಡಾರ್ ಕ್ಯಾಮರಾಗಳು ರಾತ್ರಿಯೂ ಕಾರ್ಯನಿರ್ವಹಿಸುತ್ತವೆ. ಫೋಟೋಗಳನ್ನು ತೆಗೆದು ಕಳುಹಿಸುತ್ತವೆ. ಇದರ ಮೂಲಕ ಭೂಮಿಯ ಮೇಲಿನ ಎಲ್ಲ ಚಲನವಲನಗಳನ್ನೂ ನೋಡಬಹುದು. ಆಪರೇಷನ್ ಸಿಂಧೂರ್ ಕಾರ್ಯಾಚರಣೆಯಲ್ಲಿ ಸೆಟಲೈಟ್‌ಗಳ ಪಾತ್ರ ಮಹತ್ತರವಾಗಿತ್ತು. ರಾಡರ್, ಪ್ಲೇನ್ ಇತ್ಯಾದಿ ನೆಟ್ ವರ್ಕ್‌ನ್ನು ಯಾರೋ ಎಲ್ಲೋ ಕುಳಿತು ಕಂಟ್ರೋಲ್ ಮಾಡುತ್ತಾರೆ. ಸಿಗ್ನಲ್ ನಮ್ಮವರಿಂದಲೋ ಅಥವಾ ವೈರಿಯಿಂದಲೂ ಎಂಬುದನ್ನು ಗಮನಿಸಬೇಕು. ಮುಂದಿನ ದಿನಗಳಲ್ಲಿ ಹ್ಯಾಕ್ ಮಾಡುವುದು, ಜಿಪಿಎಸ್ ಜಾಮ್ ಮಾಡುವುದು ಮುಂತಾದ ಎಲೆಕ್ಟ್ರಾನಿಕ್ ವಾರ್ ನಡೆಯಬಹುದು. ವೈರಸ್ ಜೊತೆಗೇ ಆಂಟಿವೈರಸ್ ಬರುತ್ತದೆ ನಮ್ಮ ಸಿಸ್ಟಮ್‌ಗಳು ಹಾಳಾಗದಂತೆ, ಸುರಕ್ಷಿತವಾಗಿರುವಂತೆ ಎಚ್ಚರಿಕೆ ವಹಿಸುವುದರ ಜೊತೆಗೆ ವೈರಿಯ ಮೇಲೆ ದಾಳಿ ಹೇಗೆ ಮಾಡಬಹುದೆಂಬ ಯೋಜನೆಯೂ ಅಗತ್ಯ. ಬಾಹ್ಯಾಕಾಶ ವ್ಯವಸ್ಥೆಯಲ್ಲಿ ಸ್ಪೇಸ್ ಟೆಕ್ನಾಲಜಿ, ಸ್ಪೇಸ್ ಬಯಾಲಜಿ, ಥರ್ಮಲ್ ಇಂಜಿನಿಯರ್, ಮೆಕಾನಿಕಲ್ ಇಂಜಿನಿಯರ್, ಅಗ್ರಿಕಲ್ಚರಲ್ ಸೈಂಟಿಸ್ಟ್ ಹೀಗೆ ಎಲ್ಲ ಕ್ಷೇತ್ರದ ಪರಿಣಿತರಿಗೆ ಅವಕಾಶವಿದೆ. ಗಗನಯಾತ್ರಿಯಾಗಿಯೂ ಹೋಗಬಹುದು, ಟೆಕ್ನಿಷಿಯನ್‌ಗಳಾಗಿಯೂ ಕೆಲಸ ಮಾಡಬಹುದು. ಜಗತ್ತಿನಲ್ಲಿ ಈಗ ಸ್ಪೇಸ್ ರೇಸ್ ಹೆಚ್ಚುತ್ತಿರುವುದರಿಂದ ಸ್ಪೇಸ್ ಡೆಬ್ರೀಸ್ ಹೆಚ್ಚುತ್ತಿದೆ. ಇದು ಕೂಡ ಇಂದಿನ ದೊಡ್ಡ ಸಮಸ್ಯೆಯಾಗಿದೆ.

ನಮ್ಮಲ್ಲಿ ಎರಡು ಪಿಎಸ್‌ಎಲ್‌ವಿಗಳು ವಿಫಲವಾಗಿದ್ದು, ಇದಕ್ಕೆ ಕಾರಣ ಇನ್ನೂ ಸರಿಯಾಗಿ ತಿಳಿದುಬಂದಿಲ್ಲ. ಅನೇಕ ದೇಶಗಳ ಸೆಟಲೈಟ್‌ಗಳು ತಂದಿಟ್ಟಿರುವುದರಿಂದ ಇನ್ಸೂರೆನ್ಸ್ ಪ್ರೀಮಿಯಂ ಅತಿ ಹೆಚ್ಚಾಗುತ್ತದೆ. ಕೋಟ್ಯಂತರ ರೂಪಾಯಿ ಹಾನಿಯೂ ಆಗಬಹುದು. ಇದರಿಂದಾಗಿ ಬೇರೆಕಡೆ ಹೋಗುವ ಸಂಭವವೂ ಇರುತ್ತದೆ. ಆದುದರಿಂದ ಬಾಹ್ಯಾಕಾಶ ವ್ಯವಸ್ಥೆಯಲ್ಲಿ ಬೇರೆ ದೇಶದ ಸಹಕಾರ ಅಗತ್ಯ. ಎಂದ ಶ್ರೀ ವಿನೋದ್ ಚಿಪ್ಪಲಕಟ್ಟಿಯವರು ಬಾಹ್ಯಾಕಾಶ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವೀಕ್ಷಕರಲ್ಲಿ ಕುತೂಹಲ ಹುಟ್ಟಿಸಿದಂತಹ ಸಾಕಷ್ಟು ಮಾಹಿತಿಯುಕ್ತ ಉಪನ್ಯಾಸವನ್ನು ಮುಕ್ತಾಯ ಗೊಳಿಸಿದರು.

ಕೊನೆಯಲ್ಲಿ ರವಿ ಕುಸುಬಿಯವರು ವಂದನಾರ್ಪಣೆ ಮಾಡಿದರು. (ಇಡೀ ಕಾರ್ಯಕ್ರಮವನ್ನು ವೇದಿಕೆಯ ಜಾಲತಾಣ ಹಾಗೂ ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು.

***

ಕವಿಮನ

ಸಂಗಾತಿ

ತಂಗಾಳಿ ಬೀಸಿದರೇನು
ತಿಂಗಳ ಬೆಳಕಿರಲೇನು
ಸಂಗಾತಿ ಜೊತೆಯಿರದ ಬಾಳೇನು
ಶೃಂಗಾರಗಳಿಗೆ ಅರ್ಥವೇನು
ಹೊಂಗನಸುಗಳು ವ್ಯರ್ಥವಿನ್ನು

ಕರೆದಾಗ ತಾನು ಹರೆಯ
ಜೊತೆಯನ್ನು ಬಯಸಿತು ಹೃದಯ
ಮರೆಯದೇ ನೀನು ಜೊತೆಯಾಗು
ಬಂಧುಗಳು ಮರೆಯಾಗುವರು
ಬಂದೀತು ಒಂಟಿತನವು
ನೊಂದಂತೆ ತೋರುವುದು ನಿನ್ನ ಬಾಳು
ಹೊಂದುವಳು ಇದ್ದರೆ ಹರುಷ ಕೇಳು

ಶೃಂಗಾರ ಮಾತುಗಳೆಲ್ಲ
ಬಂಗಾರ ಭಾಷೆಗಳೆಲ್ಲ
ಸಂಗೀತದಾ ಇಂಪು ಸೊಂಪೆಲ್ಲ
ಹಿತವನ್ನು ಮನಸಿಗೆ ಕೊಡವು
ಗತವನ್ನು ಕಾಡುತಲಿಹವು
ವ್ಯಥೆಯಾಗಿ ಕಾಣುವುದು ನಿನ್ನ ಬಾಳು
ಜೊತೆಗೊಬ್ಬರು ಇದ್ದರೆ ಹರುಷ ಕೇಳು

– ಜಯಶ್ರೀ ಆಲೂರು
07.01.2026

ತೊಳಲಾಟ

ಸಾಕೆನಿಸಿತು ಹೆತ್ತವರಿಗೆ ವಿಡಿಯೋ, ದೂರವಾಣಿ ಕರೆ
ಬೇಕೆನಿಸಿತು ಕರುಳಕುಡಿಯ ಕುಟುಂಬ ಸೇರುವ ಬಯಕೆ
ವೃತ್ತಪತ್ರಿಕೆ, ಕೇಬಲ್ ದೂರವಾಣಿ ಸ್ಥಗಿತಗೊಳಿಸಿ
ಭಾರಿ ಗಾತ್ರದ ಸೂಟುಕೇಸುಗಳ ಅಟ್ಟದಿಂದ ಕೆಳಗಿಳಿಸಿ
ಮೂರು ತಿಂಗಳ ಲಗೇಜು ಲಗುಬಗೆಯಲಿ ಅಣಿಗೊಳಿಸಿ
ಕಾಯುತ್ತಿದ್ದಾರೆ ಪ್ರಯಾಣದ ದಿನವ ಚಾತಕದ ರೀತಿ.

ಇಡೀ ಕುಟುಂಬವೇ ಹಾಜರು ಇವರ ಸ್ವಾಗತಿಸಲು
ಅಬ್ಬ ಅವರ ಮೊಗದಲಿ ಎಂಥ ಸಂತಸದ ಹೊನಲು!
ಗಾಢ ಮೌನದ್ದೇ ದರ್ಬಾರು ಅಲ್ಲಿ ಮನೆಯ ಆದ್ಯಂತ.
ಕುಟುಂಬವೆಲ್ಲ ಅನವರತ ತಮ್ಮ ಕಾಯಕದಲೆ ನಿರತ
ವಾರಾಂತ್ಯದವರೆಗೆ ಬಂದಿ ನಾಲ್ಕು ಗೋಡೆಯ ಒಳಗೆ
ಇದು ಯಾರೊಂದಿಗೂ ಹಂಚಿಕೊಳ್ಳಲಾಗದ ಬೇಗೆ

ಅಂತೂ ಗಡುವು ತೀರಿತು, ಬಂತು ವಾಪಸಾಗುವ ದಿನ
ಅದಾಗಲೇ ಹಾರಿ ಮನೆ ತಲುಪಿದೆ ಹಿರಿಯರ ಮನ.

– ಕೆ.ಎನ್.ಮಹಾಬಲ
28.01.2026

ಕವಿಮನ

ಗೂಬೆ ಕಂಡಾಕ್ಷಣ

ನಮ್ಮ ವಠಾರದ ಮುಂದೆ
ಯಾರೋ ನಿಲ್ಲಿಸಿದ್ದಾರೆ
ಹಿಂಬಾಗಿಲ ಬಿಳೀ ವಾಹನ
ಅಂತಿಮ ಯಾತ್ರೆಗೆ ಅಹ್ವಾನ !

ಯಾರಿಗೆಂದಿರಬಹುದು
ಇದ ಕರೆದವರು ಯಾರು?
ಕೆಕ್ಕರಿಸುತ್ತಿದೆ ಅಪಶಕುನ
ಒಳಗಿದೆ ಖಾಲಿ ಶಯನ !

ಕಿಟಕಿಯಿಂದಲೇ ನೋಡಿ
ಹೊರಬಂದು ಅಕ್ಕಪಕ್ಕದ
ಮನೆ, ಬೀದಿಯ ಇಣುಕಿದೆ
ಸದ್ದಿಲ್ಲ, ಗದ್ದಲವೂ ಇಲ್ಲ !

ಬೀದಿಯಲಿ ಹೊಗೆ ಕಂಡಿಲ್ಲ
ಬಂದು ಹೋಗುವವರಿಲ್ಲ
ಅಳು ಆಕ್ರಂದನ ಕೇಳಿಲ್ಲ
ಬಿಳಿ ಬಟ್ಟೆ ತೊಟ್ಟವರಿಲ್ಲ

ಹೊರಟವರು ಯಾರೆಂದು
ಕೇಳುವುದು ಸರಿಯಲ್ಲ
ಸುಮ್ಮನೆ ಕೂರಲೂ ಸಲ್ಲ
ಎದೆಯಲ್ಲಿ ಬರೀ ಕಂಪನ

ಕಿಟಕಿ ರಪ್ಪನೆ ಮುಚ್ಚಿದರೆ
ಮನದ ಕಿಟಕಿ ತೆರೆದು
ಅನುರಣಿಸಿದೆ ಹಿಂದೆ
ಯಾರೋ ಹೇಳಿದ್ದ ಕಣಿ

ನಿಜವಾದಂತೆ ಕಾಣುತ್ತಿದೆ
ಪೋನು ಕರೆ ಬಂದಂತೆನಿಸಿ
ತಪಾಸಣೆ ತಡಮಾಡಬೇಡಿ
ಎಂದಿದ್ದ ವೈದ್ಯರ ನುಡಿ !

ಗಾಡಿ ಚಾಲನೆಯಾದ ಶಬ್ದ
ಬಗ್ಗಿ ನೋಡಲು ಹೊರಟಿದೆ
ಹೊಗೆ ಕಾರುತ್ತಾ ಘೀಳಿಟ್ಟು
ರಿಪೇರಿಗೆ ನಿಂತಿದ್ದ ಪ್ರಾರಬ್ಧ !

ಬದುಕೇ ಹೀಗೆ ತಲ್ಲಣ
ಭಯ ಬೇಗೆಗಳ ಕಣ
ಗೂಬೆ ಕಂಡಾಕ್ಷಣ
ಜಪ ತಪ ಯಕ್ಷಗಾನ

– ಪೋರ
14.01.2026

ಕವಿಮನ

ಅಂತಿಮ ಹಂತ

ಇಬ್ಬರೇ ಇರುವಾಗ ನಿಶ್ಶಬ್ದವೇ ಕ್ರೂರ
ಇಂದಿನ ಆಟದಲ್ಲಿ ಎಲೆಗಳೇಕೋ ಭಾರ
ಹೊರಗೆ ಇಸ್ಪೀಟು ಎಲೆಗಳ ಜೋಡಣೆ
ಒಳಗೆ ಸಾಗಿದೆ ನಿರ್ಧಾರದ ಕ್ಷಣ-ಗಣನೆ

ಅವಳು ಎತ್ತಿದ ಎಲೆ 'ಹೃದಯದ ಅರಸ'
ನುಸುಳಿತ್ತು ತುಟಿಯಲ್ಲಿ ವ್ಯಂಗ್ಯ
ಎದುರಲ್ಲಿ ಕುಳಿತವ ವಂಚನೆಯ ಅರಸ !
ಬೇಡ ಈ "ಕಿಂಗ್ ಆಫ್ ಹಾರ್ಟ್ಸ್"!

ಅವನ ಮುಖವಾಡದ ಹಿಂದೆ ಏನಿದೆ?
ಅವಳಿಗದು ಚಂದವಾಗಿಯೇ ತಿಳಿದಿದೆ
ಗುಟ್ಟಿನ ಆಟದ ನಡುವೆ, ನಗುವಿಗಿಲ್ಲ ಎಡೆ
ಸತ್ಯವನ್ನರಿತ ಹೆಣ್ಣಿನದು ನೋವಿನ ಎದೆ

ಮುಗ್ಧ ಒಲವಿನ ಜೊತೆಯ ಜೂಜಾಟ,
ಇಂದು ನಂಬಿಕೆಯ ಸೌಧದಲ್ಲಿ ಬಿರುಕು
ಮುಗಿಯಬೇಕು ಸುಳ್ಳಿನ ಕಂತೆಯ ಕಾಟ
ಪಾಪಪ್ರಜ್ಞೆಗೆ ಬೆಂದು ಅವನಾಗಿ ಕರಕು

ಅವನೀಗ ಎತ್ತಿದ್ದು ಕ್ವೀನ್- ಡೈಮಂಡ್
ಎಸೆದು ಹಾಕಿದ್ದ ಬೇಕಿಲ್ಲದ ಮೊದಲಿದ್ದ ಕ್ವೀನನ್ನು
ಅದೊ... ಖತಮ್ ನಂಬಿಕೆಯ ಮೇಲಿಟ್ಟ ಪಣ
ನ್ಯಾಯದ ಅಂಗಳದಲ್ಲೀಗ ನಿರ್ಣಯದ ಕ್ಷಣ.

ಹೊಸ ಅರಸಿ ಯಾರು? ಗೊತ್ತೆಂದು ಅವಳಂದು
ಎಸೆದಳೆಲ್ಲ ಎಲೆಗಳನು... ಎದ್ದು ನಿಂದು
ಹರಡಿದೆಲೆಗಳು ಅಲ್ಲಿ... ಪತನಕ್ಕೆ ಸಾಕ್ಷಿ
ಸಾಂತ್ವನವನರಸಿ ಹೊರಟಿತ್ತು ಒಲವನೆರೆದಿದ್ದ ಹಕ್ಕಿ

– ಕೆ.ಆರ್.ಎಸ್. ಮೂರ್ತಿ
21.01.2026

ಬಣ್ಣರಹಿತ ಭಾನು

– ಸಿಂಧು ಹರಿತಸ್

ಬಾನನ್ನು ಬರಡುಮಾಡಿ, ಸೂರ್ಯ ದಿಗಂತಕ್ಕೆ ಜಾರುತ್ತಿದ್ದ. ಅಮಾವಾಸ್ಯೆಯ ಕಗ್ಗತ್ತಲು ಕವಿಯಲಾರಂಭಿಸಿತ್ತು. ಸೇಡಿನ ಜ್ವಾಲೆ ಎಲ್ಲವನ್ನೂ ಕರಕಲಾಗಿಸಿತ್ತು. ಶೂನ್ಯ ಮಾಸದ ಕಡುಗಾಳಿಯಿಂದ ಉರಿಯುತ್ತಿದ್ದ ದೀಪಗಳೂ ಚಂಚಲವಾಗಿದ್ದವು. ಅರಮನೆಯಲ್ಲಿ ನೀರವ ಮೌನ. ಶೋಕದ ಛಾಯೆ ಎಲ್ಲೆಡೆ ಹರಡಿತ್ತು.

ಭಾನುಮತಿ ಪಲ್ಲಂಗದ ಮೇಲೆ ಕಂಗೆಟ್ಟು ಕುಳಿತಿದ್ದಳು. ಅವಳ ಎದೆಯಲ್ಲಿ ಅಪ್ಪಳಿಸುತ್ತಿದ್ದ ದುಃಖ ಕಣ್ಣೀರಿನ ರೂಪ ತಾಳಿತ್ತು. ನಯನಗಳು ಬಾಗಿಲ ಕಡೆ ಸ್ಥಿರವಾಗಿದ್ದವು. ಸತ್ಯದ ಅರಿವಿದ್ದರೂ ಮನಸ್ಸಿನ ಯಾವುದೋ ಒಂದು ಮೂಲೆ ಪತಿರಾಯರ ಆಗಮನವನ್ನು ಹಾತೊರೆಯುತ್ತಿತ್ತು. ಆಕೆಗೆ ಅವನ ಆಲಿಂಗನದ ಆಶ್ರಯ ಬೇಕಿತ್ತು. ಆ ಆಕರ್ಷಕ ಮೈಕಟ್ಟು, ಯಾರನ್ನಾದರೂ ಸೆಣಸಬಲ್ಲ ತಾಕತ್ತು, ಬಲಿಷ್ಠವಾದ ಕಾಯ ಈಗ ನಿತ್ರಾಣವಾಗಿ ಅಗ್ನಿಸ್ಪರ್ಶಕ್ಕಾಗಿ ಕಾದಿತ್ತು. ಅಗ್ನಿಯಿಡಬೇಕಿದ್ದ ಮಗನ ಚಿತೆ ಇನ್ನೂ ಆರಿರಲಿಲ್ಲ, ಸೂತಕ ಕಳೆದಿರಲಿಲ್ಲ! ಕೇವಲ ಹದಿನೆಂಟು ದಿನಗಳಲ್ಲಿ ಬಯಲಾದ ಹಣೆಬರಹವನ್ನು ಸ್ವೀಕರಿಸಲು ಮನಸ್ಸಾಗದೆ, ಬದಲಾಯಿಸಲೂ ಸಾಧ್ಯವಾಗದೆ ಬಾಧಿಸುತ್ತಿದ್ದಳು ಭಾನುಮತಿ.

ಅಂತಃಪುರದ ಬಾಗಿಲ ಪರದೆ ಸರಿಯಿತು. ಭಾನುಮತಿಯ ಎದೆ ಝಲ್ಲೆಂದಿತು. ಮಂಚದಿಂದ ಚಕ್ಕನೆ ಎದ್ದಳು. ಪ್ರವೇಶಿಸಿದ್ದು... ಅವಳ ಕಂಬನಿಗೆ ಕಾರಣವಾದ ಅದೇ ಕೇಶರಾಶಿ! ಕಾರ್ಮೋಡದಂತೆ ದಟ್ಟಗೆ, ಕೆದರಿದ್ದ ಆ ಕೂದಲು ಇಂದು ಬಾಚಿ ಹೆಣೆದಿತ್ತು. ಹೆಜ್ಜೆ ಹೆಜ್ಜೆಗೂ ಸೊಂಟದ ಆ ಬದಿಯಿಂದ ಈ ಬದಿಗೆ ಅಲುಗುತ್ತ, ನಿನ್ನ ಗಂಡನ ಸೊಂಟ ಮುರಿಸಿದೆ ಎಂದು ಸೊಕ್ಕಿನಿಂದ ಸಾರಿದಂತೆ ಭಾಸವಾಗುತ್ತಿತ್ತು.

ದ್ರೌಪದಿ ಭಾನುಮತಿಯ ಬಳಿ ಬಂದಳು. ಬಿಗುಮಾನದ ಗೋಡೆ ಇಬ್ಬರ ಸಾಮೀಪ್ಯವನ್ನು ತಡೆಯಿತು. ಇಬ್ಬರೂ ಒಬ್ಬರನ್ನೊಬ್ಬರು ನೋಡುತ್ತ ಶಿಲೆಯಂತೆ ನಿಂತುಬಿಟ್ಟರು. ಮಾತು ಬರದಂತಾಯಿತು. ಯಾರು ಯಾರನ್ನು ಸಂತೈಸಿಯಾರು? ಏನೆಂದು ಹೇಳಿಯಾರು? ಇಬ್ಬರೂ ಸಂತ್ರಸ್ತರೇ! ಇಬ್ಬರೂ ಸಾಕಷ್ಟು ಕಳೆದುಕೊಂಡಿದ್ದರು. ಬಾಷ್ಪಗಳೇ ಅವರಿಬ್ಬರ ಮನದ ಭಾಷೆಗಳಾಗಿ ಭಾವನೆಗಳನ್ನು ತೋಡಿಕೊಂಡವು. ಭಾನುಮತಿಯನ್ನು ತಬ್ಬಿ ಸಮಾಧಾನಪಡಿಸಲು ದ್ರೌಪದಿಗೆ ಮನಸ್ಸಾಯಿತು, ಆದರೆ ಅವಳ ನೋವಿಗೆ ನಾನೇ ಕಾರಣವೆಂಬ ಪಾಪಪ್ರಜ್ಞೆಯ ಭಾರ ಹೆಚ್ಚಾಗಿ ದ್ರೌಪದಿ ಅಲ್ಲಿಂದ ನಿಷ್ಕ್ರಮಿಸಿದಳು.

ಕೋಣೆಯಲ್ಲಿ ಮತ್ತೆ ಒಂಟಿಯಾಗಿದ್ದ ಭಾನುಮತಿಯ ಮನದಲ್ಲಿ ನಾನಾ ವಿಚಾರಗಳು ಬರತೊಡಗಿದವು. ಈ ದುರ್ವಿಧಿಗೆ ದ್ರೌಪದಿಯನ್ನು ದೂಷಿಸುವುದೇ? ಪಾಪ, ಕಾಪಾಡಬೇಕಿದ್ದ ಅವಳ ಪುರುಷರೇ ಪಗಡೆಯಾಟದಲ್ಲಿ ಅವಳನ್ನು ಪಣಕ್ಕಿಟ್ಟು ಸೋತು ಅವಳನ್ನು ಪರರ ಪಾಲು ಮಾಡಿದ್ದರು. ದುರ್ಯೋಧನ ದುಶ್ಶಾಸನರ ದಾಸಿಯಾದಳು. ಅವರು ಅವಳ ಕೂದಲೆಳೆದು ತಂದು ತುಂಬಿದ ಸಭೆಯಲ್ಲಿ ನಿರ್ವಸ್ತ್ರಗೊಳಿಸಿದ್ದು ಸರಿಯೆ? ಅದೇ ಕೂದಲು ಅವಳ ಮೈಮುಚ್ಚಿತಾದರೂ, ಅವಳ ಮರ್ಯಾದೆ ಕಾಪಾಡಲು ಮಾಧವನೇ ಬರಬೇಕಾಯಿತು. ಅವಳ ಆಕ್ರಂದನದ ಅಗ್ನಿ ಕೌರವರ ಆಹುತಿ ಬಯಸಿದ್ದರಲ್ಲಿ ತಪ್ಪೇ ಇಲ್ಲ!

ಹಿರಿಯರಾದ ಭೀಷ್ಮ ಪಿತಾಮಹರು ಪಾಂಡವ ಕೌರವರ ನಡುವಿನ ದ್ವೇಷವನ್ನು ಮೊಳಕೆಯಲ್ಲೇ ಚಿವುಟದೆ ಬೆಳೆಯಲು ಬಿಟ್ಟಿದ್ದು ಸರಿಯೇ? ಸಿಂಹಾಸನದೆಡೆಗಿದ್ದ ಅವರ ನಿಷ್ಠೆಯೇ ಅವರ ಕೈಕಟ್ಟಿಹಾಕಿತೇ?

ಸುಯೋಧನನನ್ನು ದುರ್ಮಾರ್ಗಕ್ಕೆಳೆದ ಶಕುನಿ ಮಾಮನನ್ನು ದೂರಬೇಕೆ? ಬಲವಂತದಿಂದ ತನ್ನ ಅಕ್ಕನನ್ನು ಕರೆತಂದು ಕುರುಡನಿಗೆ ಕಟ್ಟಿ, ತನ್ನ ಮನೆಯ ಮಿಕ್ಕವರನ್ನು ಕಾರಾಗೃಹಕ್ಕೆ ಅಟ್ಟಿದ ಕುರುವಂಶದ ಬಗ್ಗೆ ಅವರಿಗೆ ಕರುಣೆಯೇಕೆ ಬಂದೀತು! ಬದಲಿಗೆ ಆ ವಂಶಕ್ಕೆ ಕೆಡುಕು ಬಯಸಿದ್ದು ಸಮಂಜಸವೇ. ಕಡೆಗೆ ಅವರ ರೋಷಾಗ್ನಿಯಲ್ಲಿ ಅವರ ಅಕ್ಕ ಕೂಡ ಬೆಂದು ಹೋಗಿದ್ದಷ್ಟೆ ಸತ್ಯ.

ಕಣ್ಣಿಲ್ಲದೆ ತಂದೆ, ಕಣ್ಣು ಕಟ್ಟಿಕೊಂಡು ತಾಯಿ ಕುರುಡಾಗಿದ್ದಿದ್ದು ಒಂದೆಡೆಯಾದರೆ, ಪುತ್ರವಾತ್ಸಲ್ಯದಲ್ಲಿ ಅಂಧರಾಗಿ, ಮಗನನ್ನು ಹೋದ ದಾರಿಗೆ ಬಿಟ್ಟಿದ್ದು ಸರಿಯೇ? ತಮಗೆ ಸಿಗದ ರಾಜಗದ್ದುಗೆ ಅವನಿಗಾದರೂ ಸಿಗಲಿ ಎಂಬ ದುರಾಸೆ ಧರ್ಮವೇ?

ಪಾಂಚಾಲಿಯ ಮಾನ ಕಾಪಾಡಲು ಬಂದ ಕೃಷ್ಣ ಇಂದು ನನ್ನ ಮಾಂಗಲ್ಯ ಉಳಿಸಲಿಲ್ಲವೇಕೆ? ತನ್ನ ಶಕ್ತಿಯನ್ನೆಲ್ಲಾ ನಯನ ಗಳಲ್ಲಿ ಕೇಂದ್ರೀಕರಿಸಿ, ಮಗನನ್ನು ನಗ್ನವಾಗಿ ನೋಡಿ ಅಕ್ಷರನನ್ನಾಗಿ ಮಾಡಲು ರಾಜಮಾತೆ ಗಾಂಧಾರಿ ಮುಂದಾದಾಗ, ಅದಕ್ಕೆ ಅಡ್ಡಗಟ್ಟಿ ಕೌಪೀನ ಧರಿಸಲು ಸೂಚಿಸಿದ್ದು ಕೃಷ್ಣನ ಕಪಟವಲ್ಲವೇ! ಇರಲಿ. ಕಾಲಜ್ಞಾನವಿದ್ದ ಕೃಷ್ಣ ತನ್ನ ಸೋದರಳಿಯ ಅಭಿಮನ್ಯುವನ್ನೇ ಕಾಪಾಡಲಿಲ್ಲ, ಇನ್ನು ನನ್ನ ಕುಂಕುಮವನ್ನು ಉಳಿಸುವುದು ನಡೆಯದ ವಿಷಯ!

ಎಲ್ಲರೂ ಹಾಗಿರಲಿ, ತನ್ನಲ್ಲಿ ದುರ್ವಿಚಾರಗಳನ್ನೇ ತುಂಬುತ್ತಿದ್ದುದರ ಹಿಂದೆ ತನ್ನ ಸೋದರ ಮಾವನ ದುರುದ್ದೇಶವಿರಬಹುದು ಎಂದು ಒಮ್ಮೆಯೂ ಯೋಚಿಸದೆ ಪೂರ್ಣವಾಗಿ ಅವರನ್ನು ನಂಬಿದ್ದು ದುರ್ಯೋಧನನ ತಪ್ಪೇ ಅಲ್ಲವೆ? ಮಗ, ಸ್ನೇಹಿತ, ಪತಿ, ತಂದೆ, ಈ ಎಲ್ಲಾ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದ ದುರ್ಯೋಧನನ ಮನಸ್ಸು ಹಿಡಿತದಲ್ಲಿದ್ದಿದ್ದರೆ...

ಎಲ್ಲರೂ ವಿಧಿಯ ಕೈಗೊಂಬೆಗಳಷ್ಟೆ! ಎಷ್ಟು ಯೋಚಿಸಿದರೂ ಬಿಡಿಸಲಾಗದ ಗೋಜಲಿದು. ತಪ್ಪು ಸರಿಗಳ ನಡುವೆ ಇರುವುದೊಂದೆ ಸತ್ಯ... ಕುರುವಂಶದ ಪತಾಕೆ ಇಳಿಯುವುದರ ಜೊತೆಗೆ ತನ್ನ ಹಣೆಯ ಮೇಲಿನ ರವಿಯೂ ಮುಳುಗಿದ್ದಾನೆ ಎನ್ನುವ ವಾಸ್ತವವನ್ನು ಸ್ವೀಕರಿಸಿ ನಿರ್ವರ್ಣ ವಸ್ತ್ರವನ್ನುಟ್ಟು ಖಾಲಿ ಬಾನನ್ನೇ ನೋಡುತ್ತ ಕುಳಿತುಬಿಟ್ಟಳು ಭಾನುಮತಿ.

***

ಡೈರಿಯ ಪುಟ

– ರಾಧಿಕಾ ವಿ ಗುಜ್ಜರ್

ಪುಸ್ತಕಗಳ ಸಾಲು ಓರಣಗೊಳಿಸುವ ನಡುವೆ
ಆರಾಮದಿ ಹಿಂದಕ್ಕೊರಗಿದ ಡೈರಿ ಸೆಳೆಯಿತು
ಮುಖಪುಟದ ಗೀಚುಗಳು ಪರಿಚಿತವೆ
ಮುಂದಕ್ಕೆಳೆದು ಒದರಿ ನೋಡಿದೆನು ತೆರೆದು

ಅದರರ್ಧ ಅಡುಗೆಯ ವಿಧಾನ ವಿವರ
ಭಾಗ ಮಾಡಿದ ಪುಟದ ಮೇಲಂಟಿಸಿದ
ಮಕ್ಕಳ ಅಡುಗೆ ಆಟದ ರೇಖಾಚಿತ್ರ
ಅಲ್ಲಲ್ಲಿ ಅರಿಸಿನ ಎಣ್ಣೆ ಕರೆ ತಾಗಿದ ಪುಟ

ವಿಳಾಸದ ಪುಟಕೆ ಎ ಟು ಝಡ್ ವಿಳಾಸಗಳು
ಫೋನ್ ನಂಬರ್ ಪುಟವಂತೂ ಫುಲ್ ಜಾಮು
ಟೈಲರ್ ಚೀಟಿ, ಗ್ಯಾಸ್ ಬಿಲ್ಲು, ಕಾರ್ಬನ್ ಪೇಪರು
ಗೆಳತಿಯ ಗೃಹಪ್ರವೇಶದ ಕರೆಯೋಲೆಯು

ಹೊಲಿಗೆ ಕಾಣುವ ಮಧ್ಯದ ಪುಟದಲಿ
ಕಂಡಿತು ಇಬ್ಬರು ಮಕ್ಕಳ, ಇವರ, ನನ್ನ
ಹಸ್ತಗಳ ಊರಿ ಬರೆದ ಹೊರ ರೇಖಾಕೃತಿ
ಅಳತೆಯನ್ವಯ ಸಾಲಾಗಿ ಕುಳಿತ ಪಂಕ್ತಿ

ಕೇವಲ ಒಂದು ಪೆನ್ನಿನ ಗೆರೆಗಳಿಗಿಳಿದ
ನನ್ನ ಸಂಸಾರದ ವರ್ತಮಾನದ ಪ್ರತಿ
ಮುಖಪುಟದ ರಟ್ಟಿನಿಂದಾದ ಆರಂಭಕೂ
ಕಾಲದ ಕತೆಯ ಪಾತ್ರಗಳಿಗೂ ಪುಟಗಳೇ ಮಿತಿ

ಖಾಲಿ ಹಸ್ತಗಳು ಖಾಲಿಯಿವೆಯೇ ಈಗ?
ಬರೆದರೂ, ಏನ ಬರೆದು ತುಂಬಲಿ ಈಗ?
ಡೈರಿಯ ಗೆರೆಗಳ ಮುದ್ರಿಸಿಕೊಂಡ ಕರದಿ
ಅಷ್ಟೇ ನೇರವಿದ್ದವೇನೋ ಒಳದನಿ ಆಗ!

ಅಳಿಯ ಪಂಕ್ತಿಯಿಂದೀಗೊಂದು ಅಳಿದಿದೆ
ಮಕ್ಕಳಿಬ್ಬರ ಕರಗಳು ದಾಟಿ ಬೆಳೆದಿವೆ
ಅವರವರ ಅಳಿಯ ಕರಗಳೀಗ ಸೇರಿವೆ
ಇರುವಂತುಳಿದ ನಾ ಕರುಳ ಕೊಂಡಿಯಾಗಿಹೆ

ಗಳಿಗೆ ಗಳಿಗೆಗೂ ಬದಲಾಗುವ ಹೊರಗಲಿ
ದಿನಚರಿಯ ಅಚಲ ಪುಟ ನಾವು ನಾವೇ
ಸಾಧಕ ಬಾಧಕಗಳಾವುವೂ ಮುಳುಗಿಸದ
ಸಂಸಾರವೆಂಬ ಗಟ್ಟಿ ಚೌಕಟ್ಟಿನ ನಾವೆ

ಪುಟವ ಸವರಿ ನೆನಪುಗಳ ಶೃತಿ ಮೀಟಿ
ನಿತ್ಯ ಹೊಸ ಸಾಲೊಂದ ಗುನುಗುತ್ತೇನೆ
ಅವಸರದ ದಿನಚರಿಯ ನೆನ್ನೆಗಳಲಿ
ಕಳೆಯದೆ ಉಳಿದ ರಾಗಕೆ ಹಾಡಾಗುತ್ತೇನೆ

***

"ಪಾತಜ್ಜಿ – ಪ್ರೀತಿ ಹಂಚುವ ಅಜ್ಜಿ"

ಕಥಾಮಾಲಿಕೆಯ ಎರಡು ಪುಷ್ಪಗಳು!!!

– ಸುಷುಮಾ ಸುರೇಶ್, ಕುಣಿಗಲ್

ಮಡಿಲು

"ಅಜ್ಜೀ... ಅಜ್ಜೀ..." ಅಳುತ್ತಾ..... ಓ.....ಡಿ ಬಂತು ಮಗು.

ಹಿಂದೆ ಕಡ್ಡಿ ಹಿಡಿದು ಬಂದಳು, ಸಿಟ್ಟಿನಿಂದ ತಾಯಿ. ಮಮತೆಯೇ ಮೂರ್ತಿವೆತ್ತಂತಿದ್ದ ಪಾತಜ್ಜಿ ಮಗುವನ್ನು ಬರಸೆಳೆದಪ್ಪಿ ತಾಯಿಯತ್ತ ದುರುಗುಟ್ಟಿ ನೋಡಿತು. ಮಗು ಬಿಕ್ಕಳಿಸುತ್ತಾ ಅಜ್ಜಿಯನ್ನು ಇನ್ನೂ ಬಿಗಿಯಾಗಿ ಅಪ್ಪಿ ಹಿಡಿಯಿತು.

"ಬಿಡು ಪಾತಜ್ಜಿ... .ಬಾರುಸ್ಬುಡ್ತೀನಿ ಇದ್ದರೆಷ್ಟು..... ಹೋದರೆಷ್ಟು...". ಪಾತಜ್ಜಿ ಮಗುವಿನ ಕಣ್ಣೊರೆಸಿ ಎತ್ತಿ ಕಂಕುಳಿಗಿಟ್ಟುಕೊಂಡು ಅಡುಗೆ ಮನೆಯತ್ತ ನಡೆಯಿತು.

ಇನ್ನು ಮುಗಿಯಿತು... ಎಂಬಂತೆ ತಾಯಿ, ಕಡ್ಡಿಯನ್ನತ್ತ ಎಸೆದು.ಸುಸ್ತಾಗಿ ಕುಳಿತಳು. ಯಾಕೆಂದರೆ.. ಪಾತಜ್ಜಿಯ ಅಡುಗೆಮನೆಗೆ ಕಂದಮ್ಮಗಳಿಗೆ ಮಾ.....ತ್ರ ಪ್ರವೇಶ....!! ನಿಧಾನವಾಗಿ ಮಗುವಿನ ಬಿಕ್ಕಳಿಕೆ ನಿಂತು, ಮಗು ಅಜ್ಜಿಯ ಜೊತೆ ತೊದಲನಾಡುತ್ತಾ, ಮಧ್ಯೆ ಮಧ್ಯೆ ಅಜ್ಜಿಯ ಕಚಗುಳಿಗೆ ನಗುತ್ತಾ... ಕೊನೆಗೆ ಅಜ್ಜಿಯ ಕೈ ಹಿಡಿದು ಆಚೆ ಬಂತು. ಅಜ್ಜಿಯ ಕೈಯಲ್ಲಿ ಹಾಲು ತುಂಬಿದ ಲೋಟ! ನಿಧಾನವಾಗಿ ಕೈ ಊರಿ ಕುಳಿತ ಪಾತಜ್ಜಿ ಆಪ್ಯಾಯತೆಯಿಂದ ಮಗುವನ್ನ ತೊಡೆಯ ಮೇಲೆ ಕೂಡಿಸಿಕೊಂಡಿತು. ದೊಡ್ಡ ಲೋಟದಲ್ಲಿದ್ದ ಹಾಲನ್ನ ಸ್ವಲ್ಪ ಸ್ವಲ್ಪವೇ ಪುಟ್ಟ ಲೋಟಕ್ಕೆ ಬಗ್ಗಿಸಿ, ಮಗುವಿನ ತಲೆ ಸವರುತ್ತಾ.... ಕುಡಿಸಲಾರಂಭಿಸಿತು.

ಹಸಿದಿದ್ದ ಮಗು, ಗಟಗಟನೆ ಹಾಲು ಕುಡಿಯುತ್ತಿತ್ತು. ಕೊನೆಯ ಬಾರಿ ಬಗ್ಗಿಸಿದ ಹಾಲು ಮುಗಿಯುವ ಮುನ್ನ ಅತ್ತು ಅತ್ತು ಸುಸ್ತಾಗಿದ್ದ ಮಗು, ಅಜ್ಜಿಯ ಮಡಿಲಲ್ಲೇ ನಿದ್ದೆಗೆ ಜಾರಿತು. ತಾಯಿಯ ಕಂಗಳು ಕೊಳಗಳಾದವು....!!!

"ಅಲ್ವೇ ತಾಯಿ.... ಹಸಿದಿರೋ ಮಗೂನಾ ಹೊಡೀತಿದ್ರೆ.... ರಚ್ಚೆ ಜಾಸ್ತಿ ಮಾಡತ್ತೆ ಹೊರ್ತು... ಮಾತು ಕೇಳುತ್ಯೇ...ನೇ...?"

" ಅಜ್ಜಿ... ಅದೂ... ನಂಗೂ ಟೆನ್ಷನ್ನಿತ್ತೂ.."

"ನಿಮ್ಮ ಟೆನ್ಷನ್ನಿಗೆ ಬೆಂಕಿಬಿತ್ತು... ಇರುತ್ತೆ.... ಮನೆ ಅಂದ್ಮೇಲೆ ನೂರೆಂಟು ಇರತ್ತೆ. 'ತಾಯಿ' ನೀನು, ತಾಳ್ಮೆ ತೊಗೋಬೇಕು!! ಮಗು... ಭಯ್ವಾದಾಗ... ಹಸ್ವಾದಾಗ... ನೋವಾದಾಗ... 'ಅಮ್ಮಾ!!!' ಅಂತ ಬರ್ಬೇಕು.. ಅದು ಬಿಟ್ಟು, ನೀವೇ ರಾಕ್ಷಸೀರ ಥರ ಆಡುದ್ರೆ... ಮಗು, ನಿ...ಮ್ಮ..ನ್ನ ನೋಡೇ ಹೆದರತ್ತೆ! ಅಲ್ವೆ ತಾಯಿ, ನಿನ್ನ ಮನೆ ನೊರೆಹಾಲು ಬಿಟ್ಟು... ನನ್ನ ಮನೆ ನೀರು ಹಾಲು ಕುಡಿದು.. ಹೆಂಗೆ ಸಂತೃಪ್ತಿಯಿಂದ ಮಲುಗ್ತು ನೋಡು ಕಂದ...". ತಾಯಿ ಸುಮ್ನೆ ಅಜ್ಜಿಯ ಮಡಿಲಲ್ಲಿ ಮಲಗಿದ್ದ ಮಗುವನ್ನೇ ನೋಡ್ತಿದ್ಲು.

"ಎತ್ಕೊ ತಾಯಿ... ಅಯ್ಯ.... ಕಾಲು.. ಕಾಲು ಹಿಡ್ಕತು"

ಮಗುವಿಗೆ ಎಚ್ಚರವಾಗದಂತೆ.. ಪಾತಜ್ಜಿ... ಅಕ್ಕರೆಯಿಂದ ಮಗುವನ್ನ ತಾಯಿಯ ಮಡಿಲಿಗೆ ವರ್ಗಾಯಿಸ್ತು..

ಹೊರಗಡೆ ಏನೋ ಗಲಾಟೆ.... ಪಾತಜ್ಜಿ ಧಡಕ್ಕನೆದ್ದು ಆಚೆ ಬಂತು..

***

ಮೂರ್ಖ ಮೇಷ್ಟ್ರು

ನಡಿ ಆಚೆಗೆ.... ಉಸ್ರು... ಉಸ್ರು ಬಿಟ್ರೆ ಬಾರುಸ್ತೀನಿ.. ಪೂರ್ತಿ ಬಾಯಿಪಾಠ ಮಾಡೋವರ್ಗೂ... ಮನೆ ಒಳಗೆ ಕಾಲಿಡಬೇಡ" ಆಚೆ ಮನೆ ಮೇಷ್ಟ್ರ ಕೂಗಾಟ!!!

ಅಜ್ಜಿ ಗೊಣಗಿತು... "ಈ ಮೇಷ್ಟ್ರಿಗ್ ಶುರುವಾಯ್ತು... ಕಿರುಚೋ ಕಾಯಿಲೆ" ಹಾಗೆನ್ನುತ್ತಲೇ ಆಚೆ ಬಂತು.

ಬೈಯ್ಯುತ್ತಲೇ ಮಗನನ್ನು ಆಚೆ ತಳ್ಳಿ ಮೇಷ್ಟ್ರು ಧಡ್ ಎಂದು ಬಾಗಿಲು ಮುಚ್ಚಿಕೊಂಡರು.

ಅಕ್ಕಪಕ್ಕದವರು ನೋಡಿದರೆ ಅವಮಾನ. ಅಪ್ಪನ ಅನಾದರ... ಮಗು ಹಿಡಿಯಷ್ಟಾಗಿತ್ತು.

ಅಜ್ಜಿ ನಿಧಾನವಾಗಿ ಹುಡುಗನ ಹತ್ರ ಬಂತು. ಹುಡುಗ ಅಜ್ಜಿಯ ಕಡೆ ನೋ..ಡಿದ, ಅಳು ಒತ್ತರಿಸಿ ಬಂತು. ಬಿಕ್ಕಿ.. ಬಿಕ್ಕಿ ಅಳೋಕೆ ಶುರು ಮಾಡ್ದ. ಅಜ್ಜಿ ಏನೂ ಮಾತಾಡದೆ... ಅವನ ಕೈ ಹಿಡಿದು ತನ್ನ ಮನೆಯತ್ತ ನಡೀತು....

ಹೆದರುತ್ತಾ.. ಮಧ್ಯೆ ಮಧ್ಯೆ ಮುಚ್ಚಿದ ತನ್ನ ಮನೆಯ ಬಾಗಿಲ ಕಡೆ ನೋಡುತ್ತಾ.... ಅಜ್ಜಿಯನ್ನು ಹಿಂಬಾಲಿಸಿತು ಹುಡುಗ. ಅಜ್ಜಿ, ತನ್ನ ಮನೆಯ (ಹಾಲು, ವರಾಂಡ, ಮಲಗುವ ಕೋಣೆ ಎಲ್ಲವೂ ಒಂದೇ ಆಗಿದ್ದ) ಪುಟ್ಟ ಕೋಣೆಯ ಮಧ್ಯ ಚಾಪೆ ಹಾಸಿ, ತಾನೂ ಕೂತು ಹುಡುಗನನ್ನೂ ತನ್ನ ಹತ್ತಿರ ಕೂಡಿಸಿಕೊಂಡಿತು. ಬೆನ್ನಿನ ಮೇಲೆ ಕೈಯಾಡಿಸುತ್ತಾ... ಕೇಳಿತು

"ಈಗ ಹೇಳು ಮಗ ಏನಾತು?"

ಹುಡುಗ ಬಿಕ್ಕುತ್ತಾ ಹೇಳಿದ. "ಅಜ್ಜಿ..., ಸ್ಕೂಲಲ್ಲಿ ವಿವೇಕಾನಂದರ ಬಗ್ಗೆ ಭಾಷಣ ಇದೆ. ಎಷ್ಟು ಬಾಯಿಪಾಠ ಮಾಡಿದ್ರೂ ನೆನಪಾಗ್ತಿಲ್ಲ. ಅದಕ್ಕೆ ಅಪ್ಪ..." ಪೆಟ್ಟಿನ ನೆನಪಾಗಿ ಹುಡುಗ ಅಳಲು ಪ್ರಾರಂಭಿಸಿದ. ಅಜ್ಜಿ ಅವನ ಕೈಯಲ್ಲಿದ್ದ ಚೀಟಿ ಕಸಿದುಕೊಂಡು, ಚೂರುಚೂರಾಗಿ ಹರಿದು ನೀರೊಲೆಯತ್ತ ಎಸೆಯಿತು. ಹುಡುಗ ಹೌಹಾರಿದ. "ಅಜ್ಜಿ.. .ಅಜ್ಜಿ..., ಏನ್ಮಾಡ್ತಿದೀಯಾ? ಅದು ನನ್ನ ಭಾಷಣದ ಚೀಟಿ... ಅಜ್ಜೀ... ಆಯ್ತು, ಅಪ್ಪ ನನ್ನ ಕೊಂದೇ ಹಾಕ್ಬಿಡ್ತಾರೆ... ಅಷ್ಟೇ..." ಭಯದಿಂದ ಕಂಗಾಲಾದ.

ಅಜ್ಜಿ ನಸುನಗುತ್ತಾ...,"ಅಲ್ಲಾ, ವಿವೇಕಾನಂದರೇನು ನಮ್ಮ ದೇಶದ ಪ್ರಧಾನೀನಾ? ಅಧ್ಯಕ್ಷರಾ? ಮುಖ್ಯಮಂತ್ರೀನಾ? ಅವರ ಬಗ್ಗೆ ಯಾಕೆ ಭಾಷಣ?"

ಹುಡುಗ ತಕ್ಷಣ ಅಂದ... "ಇದ್ಯಾವುದೂ ಅಲ್ಲ ಅಜ್ಜಿ, ಆದ್ರೆ ಅವರು... ನಮ್ಮ ಭಾರತ ಕಟ್ಟಿದ ವೀರ ಸನ್ಯಾಸಿ"

"ಸನ್ಯಾಸಿ ಅಂದ್ರೆ... ರೋಷ, ದ್ವೇಷ, ಸಿಟ್ಟು ಸೆಡವು ಬಿಟ್ಟೋರು ಅಂತ. 'ವೀ...ರ ಅಂತೀಯಲ್ಲ ಮಗ!!?"

ಹುಡುಗ ಸಿಟ್ಟಾದ.. "ಅಜ್ಜಿ ಅವರು, ಕತ್ತಿ ಹಿಡಿದು ಹೋರಾಡಿದ ವೀರ ಅಲ್ಲ.. ನಮ್ಮನ್ನಾಳ್ತಾಯಿದ್ದ ಬ್ರಿಟೀಷರ ನಾಡಿನಲ್ಲಿ ನಿಂತು, 'ನನ್ನ ಭಾರತ ಶ್ರೇಷ್ಠ... ನೀವೆಲ್ಲ ಯಾಂತ್ರಿಕವಾಗಿ ಬದುಕ್ತಿದ್ದೀರಿ... ನನ್ನ ಭಾರತದ ಆಧ್ಯಾತ್ಮವನ್ನ ಮೈಗೂಡಿಸಿಕೊಂಡು ಉದ್ಧಾರವಾಗಿ' ಅಂತ ಹೆಂಗ್ ಎದೆಯುಬ್ಬಿಸಿ ಹೇಳ್ತಾರೆ ಗೊತ್ತಾ? ನಮ್ಮ ಟೀಚರ್ ಹೇಳಿದ್ರು"

"ಹೌದಾ?"

"ಹೌದಜ್ಜಿ" ಹುಡುಗನ ಉತ್ಸಾಹ ಹೆಚ್ಚಾಯ್ತು.

"ಅಂತ ಪುಣ್ಯಾತ್ಮನ್ನ ಹೆತ್ತ ತಂದೆ-ತಾಯಿ ಯಾರೋ?" ಅಜ್ಜಿ ಕೇಣಕಿತು!!!

"ತಂದೆ ವಿಶ್ವನಾಥ ದತ್ತರು, ತಾಯಿ ಭುವನೇಶ್ವರೀ ದೇವಿ ಅಜ್ಜಿ"

"ಒಳ್ಳೆ ಗುರು ಸಿಕ್ರೆ ಮಕ್ಕಳು ಒಳ್ಳೆಯವರಾಗೇ ಬೆಳೀತಾರೆ ಬಿಡು"

"ಕರೆಕ್ಟ್ ಅಜ್ಜಿ, ಅವರ ಗುರುಗಳು ಶ್ರೀ ರಾಮಕೃಷ್ಣ ಪರಮಹಂಸರು ಅಂತ, ಅವರ ಧರ್ಮ ಪತ್ನಿ ಶ್ರೀಮಾತೆ ಶಾರದಾದೇವಿ"

"ಅಬ್ಬಾ! ನಂಗಿದೆಲ್ಲಾ ಗೊತ್ತೇ ಇರಲಿಲ್ಲ ಮಗ..."

ಹುಡುಗನ ಮುಖದಲ್ಲಿ ತಾನು ಬುದ್ಧಿವಂತನೆಂಬ ಹೆಮ್ಮೆ...!!

"ಸರಿ ಅವರು ಈಗ ಎಲ್ಲಿದಾರ್ ಮಗ, ವಯಸ್ಸಾಗಿರಬೇಕಲ್ವಾ?" ಹುಡುಗ ಜೋ.....ರಾಗಿ ನಕ್ಕುಬಿಟ್ಟ!!!

"ನಿಂಗೆ ಲೆಕ್ಕಾನೇ ಬರಲ್ವ ಅಜ್ಜಿ.., ಅವರು ಹುಟ್ಟಿದ್ದು 1863 ಜನವರಿ 12ನೇ ತಾರೀಖು ಇವಾಗ 2026. ನೂರ ಅರವತ್ಮೂರು ವರ್ಷ ಯಾರಾದ್ರೂ ಬದುಕಿರ್ತಾರೇನಜ್ಜಿ..." ಅಜ್ಜಿಯ ಪೆದ್ದು ತನಕ್ಕೆ ಹುಡುಗ ಬಿದ್ದೂಬಿದ್ದೂ ನಕ್ಕ. ಅಜ್ಜಿ ತಾನೂ ನಕ್ಕು.. ಕೇಳಿದಳು.

"ಎಷ್ಟು ತಿಳ್ಕೊಂಡಿದೀಯಾ ಮಗ... ಸರಿ, ಆ ಮಹಾನುಭಾವ ತೀರ್ಕೊಂಡಿದ್ದ್ ಯಾವಾಗ್ಲೊ ನಂಗ್ ಗೊತ್ತಾಗ್ಲೇ ಇಲ್ಲ!!?"

ಹುಡುಗ ಸಪ್ಪೆ ಮುಖ ಮಾಡಿಕೊಂಡು ಹೇಳಿದ. "ತುಂಬಾ ಬೇಗ ಅಜ್ಜಿ.. ತಮ್ಮ 39ನೇ ವಯಸ್ಸಲ್ಲಿ ಅಂದ್ರೆ.. 1902 ಜುಲೈ 4ನೇ ತಾರೀಖು".

ಅಜ್ಜಿ ಮೇಲೇಳುತ್ತಾ... ಹೇಳಿತು. "ಭೇಷ್ ಕಂದ... ಇದಿಷ್ಟನ್ನೂ ನನಗೆ ಹೇಳಿದ ಹಾಗೆ ನಾಳೆ ಸ್ಕೂಲಲ್ಲಿ ಹೇಳು ನಿಂಗೇ ಫಸ್ಟ್ ಪ್ರೈಜ್ ಬರುತ್ತೆ"

ಹುಡುಗ ಅವಾಕ್ಕಾದ. "ಅಜ್ಜೀ..." ಒಮ್ಮೇಲೇ ಹಾ....ರಿ ಅಜ್ಜಿಯನ್ನು ಬಾಚಿ ತಬ್ಬಿದ. "ಅಜ್ಜಿ.... ನೀನು ಗ್ರೇಟ್ ಅಜ್ಜಿ.... ಅಪ್ಪ ಬರ್ಕೊಟ್ಟಿದ್ದು ಇದೇ. ಆದ್ರೆ ನಂಗೆ ಇಷ್ಟೂ ಹೇಗೆ ನೆನಪಾಯ್ತಜ್ಜಿ...?"

ಅಜ್ಜಿ ನಕ್ಕು, ಡಬ್ಬಿಯಲ್ಲಿದ್ದ ಬಿಸ್ಕತ್ತನ್ನ ಹುಡುಗನ ಕೈಯಲ್ಲಿಟ್ಟು, "ಬಾ ಮನೇಗ್ ಬಿಟ್ಬರ್ತೀನಿ" ಅಂತ ಕರ್ಕೊಂಡ್ ಹೋಗಿ ಬಾಗಿಲು ಬಡೀತು... ಸಿಡಿಮಿಡಿಯಿಂದಲೇ ಬಾಗಿಲು ತೆಗೆದ ಮೇಷ್ಟ್ರು, ಅಜ್ಜಿಯನ್ನ ನೋಡಿ ಮೆತ್ತಗಾದರು... ಮೇಷ್ಟ್ರನ್ನೊಮ್ಮೆ ಅಸಡ್ಡೆಯಿಂದ ನೋಡಿದ ಅಜ್ಜಿ, "ಮೂರ್ಖ ಮೇಷ್ಟ್ರು ತೊಗೊಂಬಂದು..." ಎಂದು ಗೊಣಗುತ್ತಾ ಮನೆಯತ್ತ ನಡೀತು.

ಅಜ್ಜಿಯ ಟ್ರಂಕಿನಲ್ಲಿದ್ದ "ಸ್ವಾಮಿ ವಿವೇಕಾನಂದ" ಪುಸ್ತಕ ಸದ್ದಿಲ್ಲದೆ ನಗುತ್ತಿತ್ತು..!!!!!

***

ಮನದ ಕವನ

– ಮಾಲತಿ ಶ್ರೀನಿವಾಸನ್

ಅನುಭವದ ಗಡಿಗೆ ತುಂಬಿ ಅನುಭಾವಿಸಿ
ಏರಿಳಿತದ ಹಾದಿಯಲ್ಲಿ ಪಯಣ ಸಾಗಿದರೆ
ಹೊರಹೊಮ್ಮುವುದು ಮನದ ಕವನ.
ಸುತ್ತೆಲ್ಲ ನೂರಾರು ರಸಾನುಭವದ ಹೊನಲು
ಹೆಜ್ಜೆ ಹೆಜ್ಜೆಗೂ ಮನದಲ್ಲಿ ಆತ್ಮಾವಲೋಕನ
ನೆನಪುಗಳ ಘಮಲು.

ಮಸ್ತಿಷ್ಕದ ಮಂಥನದಲಿ ಹಾಲಾಹಲವ ಹೊರದೂಡಿ
ಹರಿಯಲಿ ಅಮೃತದಾರೆ ನಿನ್ನ ಪದಗಳ ಸರಮಾಲೆಯಲಿ
ಮಾಡಿದ ಒಳಿತನೆಲ್ಲ ದಾಖಲಿಸು ನೀನಿಲ್ಲಿ.
ಸ್ವಪ್ರಶಂಸೆ ಎಂದು ಬೇಸರಿಸದಿರು, ನೀತಿಪಾಠವದು,
ದಾರಿದೀಪ ನಿನ್ನ ಅನುಭವದ ನುಡಿಗಳು
ಮುಂದಿನ ಪೀಳಿಗೆಗೆ.

ಎಣಿಸಲಾರದಷ್ಟು ದಿಗ್ಗಜರು ಪಯಣಿಸಿದರು
ಈ ಹಾದಿಯಲಿ, ಮರಳ ರಾಶಿಯ ಮೇಲಿನ
ಹೆಜ್ಜೆಯ ಗುರುತಿನೊಲು ಅಳಿಸಿ ಹೋಗಿದೆ
ಅವರ ನೆನಪು ಇಂದು. ಗಟ್ಟಿ ಛಾಪನೊತ್ತಿ
ಎಲ್ಲರ ಮನದಲ್ಲಿ ನಿಂತವರು ಹಲವರು ಜನಮನ
ಭಾವದಲಿ ರಾಗ ಭಾವ
ಹೊಮ್ಮಿಸಿ ಹಾಡಿಸಿದವರು.

ನಾನೆಲ್ಲಿ ನಿಲ್ಲುವೆ ನಿಲ್ಲಿ? ಎಂಬ ಅಳುಕೇಕೆ
ನಿನ್ನ ಮನಕೆ, ಸಾಗುತಿರು ಸರಸಮ್ಮನ
ಸರಪಳಿಯ ಕೊಂಡಿಯಾಗಿ, ಹಾಡುವ
ಹಕ್ಕಿಯೊಲು, ಭಾವನೆಗಳ ಅನುಭೂತಿಯಲಿ,
ಸದಾ ಮನದಲಿ ಅನುರಾಗದ ಅಲೆಯ,
ಮಮತೆಯ ಬಲೆಯ ಬಿಂಬ ಹೊತ್ತು.

***

ಮಸ್ತಿಷ್ಕದಲಿ ಯಂತ್ರ

– ಮಾಲತಿ ಶ್ರೀನಿವಾಸನ್

ಈ ಪುಟ್ಟ ಮಸ್ತಿಷ್ಕದಲಿ ಅದೆಂತಹ
ಸೋಜಿಗದ ಯಂತ್ರವನು ಸೃಷ್ಟಿಸಿಹ
ಬೊಮ್ಮ, ಸುಸ್ತು, ಸಂಕಟ, ನೀರಸವೆನದೆ
ನಿರಂತರ ಕೆಲಸ ಮಾಡುವುದು.
ಜಾಗೃತ್, ಸ್ವಪ್ನ, ಸುಷುಪ್ತಿ ಸ್ಥಿತಿಯಲು
ಒಳಗೊಂದು ರಾಟೆ ತಿರುಗುತಲಿಹುದು.

ವಿಚಾರ ಮಂಥನದ ಜಲಧಾರೆ
ಸ್ಫುರಿಸುತ್ತ, ತನುಮನವ ಸದಾ
ತೋಯಿಸುತಲಿಹುದು.
ಹುಚ್ಚು ಕುದುರೆ ಮನ ಕುಣಿಯುವುದು
ಅದರ ತಾಳಕೆ ಬುದ್ಧಿ ತಿರುಗಿದಂತೆ.
ಕಟ್ಟೆ ಕಟ್ಟಲಾಗದು, ಕಡಿವಾಣ
ಹಾಕಲಾಗದು, ಧ್ಯಾನಕ್ಕೆ ಜಾರಲು
ಬಿಡದು,ಮೌನಕ್ಕೆ ಶರಣಾಗದು.

ಒಳಿತನ್ನ ಸರಿಸಿ ಬೇಡದ್ದ ರಿಂಗಣಿಸಿ,
ದ್ವಂದ್ವ ಸೃಷ್ಟಿಸಿ ಗೊಂದಲಕೆ
ದೂಡುವುದು ಮನವ.
ಈ ಮನದ ಕಶ್ಮಲ ಹೊರಹಾಕಿ
ಮತ್ತದು ಒಳಗೆ ಸೇರದೊಲು ತಡೆಯೆ,
ಹುಡುಕಬೇಕು ಮತ್ತೊಂದು ಬೃಹತ್
ಯಂತ್ರವ. ಈ ಪುಟ್ಟ ಮಸ್ತಿಷ್ಕ ತನ್ನ
ಪರಿಧಿಯನರಿತು ಒಳ ಹೊರಗಿನ
ಸ್ವಚ್ಛತೆಗೆ ಆದ್ಯತೆ ನೀಡಿ, ಸದಾ
ನಿಯಂತ್ರಿಸುವಂತಿರಬೇಕು ಅದನ.

***

ಸಂಸ್ಕೃತ ವ್ಯಂಜನ ಸಂಧಿಗಳು

– ಗಣಪತಿ ಹೆಗಡೆ

ಎರಡು ಅಕ್ಷರಗಳ ನಡುವೆ (ಸ್ವರ ಇಲ್ಲವೇ ವ್ಯಂಜನ) ಕಾಲ ವಿಳಂಬವಿಲ್ಲದಂತೆ ಮತ್ತು ಅರ್ಥಕ್ಕೆ ವ್ಯತ್ಯಯಬಾರದಂತೆ ಸೇರಿಸಿ ಉಚ್ಚರಿಸುವುದನ್ನು 'ಸಂಧಿ' ಎನ್ನುತ್ತಾರೆ.

ಕನ್ನಡ ಭಾಷೆಯಲ್ಲಿ ಯಥೇಷ್ಟವಾಗಿ ಸಂಸ್ಕೃತ ಶಬ್ದಗಳು ಬಳಕೆಯಲ್ಲಿರುವುದರಿಂದ ಅನೇಕ ಸಂಸ್ಕೃತ ಸಂಧಿಗಳೇ ಕನ್ನಡ ವ್ಯಾಕರಣದಲ್ಲಿ ಕಂಡುಬರುತ್ತವೆ. ಬಹುಶಃ ಶುದ್ಧ ಕನ್ನಡ ಸಂಧಿಗಳಿಗಿಂತಲೂ ಸಂಸ್ಕೃತ ಸಂಧಿಗಳೇ ಹೆಚ್ಚು ಬಳಕೆಯಲ್ಲಿವೆ. (ಲೋಪ, ಆದೇಶ, ಆಗಮ ಸಂಧಿಗಳ ಹೊರತಾಗಿ ಬಹುತೇಕ ಎಲ್ಲವೂ ಸಂಸ್ಕೃತ ಸಂಧಿಗಳೇ)

ಇವುಗಳಲ್ಲಿ ಸಂಸ್ಕೃತ ವ್ಯಂಜನ ಸಂಧಿಗಳ ಕುರಿತು ನಾನು ಬರೆಯುತ್ತೇನೆ.

ಸಂಸ್ಕೃತ ವ್ಯಂಜನ ಸಂಧಿಗಳು.

೧. ಜಶ್ತ್ವ ಸಂಧಿ
೨. ಶ್ಚುತ್ವ ಸಂಧಿ
೩. ಷ್ಟುತ್ವ ಸಂಧಿ
೪. ಅನುನಾಸಿಕ ಸಂಧಿ

೧. ಜಶ್ತ್ವ ಸಂಧಿ:

(ಕೆಲವರು ಜತ್ವ ಸಂಧಿ ಅಂತಲೂ ಹೇಳುತ್ತಾರೆ)

ಮೊದಲ ಪದದ ಕೊನೆಯಲ್ಲಿರುವ ಕ, ಚ, ಟ, ತ, ಪ, ವ್ಯಂಜನಗಳಿಗೆ ಯಾವ ವರ್ಣ ಪರವಾದರೂ (ಸ್ವರ ಅಥವಾ ವ್ಯಂಜನ), ಪ್ರಾಯಶಃ ಅದೇ ವರ್ಣದ ಮೂರನೆಯ ವ್ಯಂಜನಾಕ್ಷರಗಳು (ಗ ಜ ಡ ದ ಬ) ಆದೇಶಗಳಾಗಿ ಬರುತ್ತವೆ.

ವಾಕ್+ಈಶ = ವಾಗೀಶ: ವಾಕ್+ದಾನ = ವಾಗ್ದಾನ
ದಿಕ್+ಅಂತ = ದಿಗಂತ: ಅಚ್+ಆದಿ = ಅಜಾದಿ
ಷಟ್+ಆನನ = ಷಡಾನನ: ವಿರಾಟ್+ರೂಪ = ವಿರಾಡ್ರೂಪ
ಸತ್+ಭಾವನೆ = ಸದ್ಭಾವನೆ: ಅಪ್+ಧಿ = ಅಬ್ಧಿ
ತತ್+ರೂಪ = ತದ್ರೂಪ: ದಿಕ್+ದೇಶ = ದಿಗ್ದೇಶ
ಸತ್+ಉದ್ಯೋಗ = ಸದುದ್ಯೋಗ
ಸುಪ್+ಅಂತ = ಸುಬಂತ

೨. ಶ್ಚುತ್ವ ಸಂಧಿ:

ಸ ಕಾರ ತ ವರ್ಗಾಕ್ಷರಗಳಿಗೆ ಶ ಕಾರ ಚ ವರ್ಗಾಕ್ಷರಗಳು ಪರವಾದಾಗ ಸ ಕಾರಕ್ಕೆ ಶ ಕಾರ ತ ವರ್ಗಕ್ಕೆ ಚ ವರ್ಗವು ಆದೇಶಗಳಾಗಿ ಬರುತ್ತವೆ.

(ಶ ಹಾಗೂ ಚ ಕಾರಗಳು ಆದೇಶವಾಗುವುದರಿಂದ 'ಶ್ಚುತ್ವ' ಎನ್ನುತ್ತಾರೆ.)

ಪಯಸ್+ಶಯನ = ಪಯಶ್ಶಯನ:

ಮನಸ್+ಚಂಚಲ = ಮನಶ್ಚಂಚಲ

ಶರತ್+ಚಂದ್ರ = ಶರಚ್ಚಂದ್ರ

ಜಗತ್+ಜ್ಯೋತಿ = ಜಗಜ್ಜ್ಯೋತಿ

ಬೃಹತ್+ಝುರಿ = ಬೃಹಜ್ಝುರಿ

ಬೃಹತ್+ಛತ್ರ = ಬೃಹಚ್ಛತ್ರ

ಸತ್+ಜನ = ಸಜ್ಜನ

ಸತ್+ಚಿತ್ರ = ಸಚ್ಚಿತ್ರ

೩. ಷ್ಟುತ್ವ ಸಂಧಿ:

'ಸ' ಕಾರ 'ತ' ವರ್ಗಾಕ್ಷರಗಳಿಗೆ 'ಷ' ಕಾರ 'ಟ' ವರ್ಗಾಕ್ಷರಗಳು ಸೇರಿದರೆ ಸ ಕಾರ ತ ವರ್ಗಾಕ್ಷರಗಳ ಜಾಗದಲ್ಲಿ ಷ ಕಾರ ಟ ವರ್ಗಾಕ್ಷರಗಳೇ ಆದೇಶವಾಗುತ್ತವೆ.

(ಷ ಹಾಗೂ ಟ ಕಾರಗಳು ಆದೇಶವಾಗುವುದರಿಂದ ಷ್ಟುತ್ವ ಸಂಧಿ ಎನ್ನುತ್ತಾರೆ.)

ವಿದ್ವತ್+ಟೀಕೆ = ವಿದ್ವಟ್ಟೀಕೆ

ರಾಮಸ್+ಷಷ್ಟಃ = ರಾಮಷ್ಷಷ್ಟಃ

ತತ್+ಟೀಕಾ = ತಟ್ಟೀಕಾ

ಹರಿಸ್+ಷಷ್ಟಃ = ಹರಿಷ್ಷಷ್ಟಃ

ತಸ್ಮಾತ್+ಟೀಕಾ = ತಸ್ಮಾಟ್ಟೀಕಾ

೪. ಅನುನಾಸಿಕ ಸಂಧಿ:

ವರ್ಗದ 'ಕ ಚ ಟ ತ ಪ' ವರ್ಣಗಳಿಗೆ ಅನುನಾಸಿಕಾಕ್ಷರ ಪರವಾದಾಗ 'ಕ ಚ ಟ ತ ಪ' ವ್ಯಂಜನಗಳಿಗೆ ಕ್ರಮವಾಗಿ 'ಙ ಞ ಣ ನ ಮ' ವ್ಯಂಜನಗಳು ಆದೇಶವಾಗಿ ಬರುತ್ತವೆ.

ದಿಕ್+ನಾಗ = ದಿಙ್ನಾಗ: ಷಟ್+ಮಾಸ = ಷಣ್ಮಾಸ

ವಾಕ್+ಮಾಧುರ್ಯ= ವಾಙ್ಮಾಧುರ್ಯ

ಚಿತ್+ಮಯ = ಚಿನ್ಮಯ: ಸತ್+ಮಣಿ = ಸನ್ಮಣಿ

ಜಗತ್+ಮಾತಾ = ಜಗನ್ಮಾತಾ

ವಾಕ್+ಮಯ=ವಾಙ್ಮಯ: ವಾಕ್+ನಾದ = ವಾಙ್ನಾದ

ಸತ್+ನಡತೆ = ಸನ್ನಡತೆ

[ಕನ್ನಡ ಸಂಧಿಗಳಲ್ಲಿಯೂ 'ಆದೇಶ ಸಂಧಿ' ಇದೆ. ಇಲ್ಲಿಯೂ 'ಕ ಚ ಟ ತ ಪ' ಕಾರಗಳಿಗೆ ಕ್ರಮವಾಗಿ 'ಗ ಜ ಡ ದ ಬ' ಕಾರಗಳು ಆದೇಶವಾಗುತ್ತವೆ. ಸಂಸ್ಕೃತ ಸಂಧಿಗಳಲ್ಲಿ 'ಪೂರ್ವ ಪದದ ಕೊನೆಯ ವ್ಯಂಜನಾಕ್ಷರವು' ಆದೇಶವಾಗಿ ಬದಲಾದರೆ, ಕನ್ನಡ ಸಂಧಿಗಳಲ್ಲಿ ಉತ್ತರ ಪದದ ಮೊದಲ ವ್ಯಂಜನಾಕ್ಷರವು ಆದೇಶವಾಗಿ ಬದಲಾಗುತ್ತದೆ.]

ಉದಾಹರಣೆ:

ಸಂಸ್ಕೃತ ಆದೇಶ ಸಂಧಿ:

(ಪೂರ್ವಪದದ ಕೊನೆಯ ವ್ಯಂಜನಾಕ್ಷರ ಬದಲಾಗುತ್ತದೆ.)

ವಿದ್ವತ್+ಟೀಕೆ = ವಿದ್ವಟ್ಟೀಕೆ.

ಶರತ್ + ಚಂದ್ರ = ಶರಚ್ಚಂದ್ರ.

ಸತ್+ಜನ = ಸಜ್ಜನ

ದಿಕ್+ಅಂತ = ದಿಗಂತ

ಕನ್ನಡ ಆದೇಶ ಸಂಧಿ:

(ಉತ್ತರ ಪದದ ಮೊದಲ ವ್ಯಂಜನಾಕ್ಷರ ಬದಲಾಗುತ್ತದೆ.)

ಹಸಿರು+ತೋರಣ = ಹಸಿರುದೋರಣ.

ಹಗಲು+ಕನಸು = ಹಗಲುಗನಸು.

ಮರ+ಕೆಲಸ = ಮರಗೆಲಸ.

ಮಳೆ+ಕಾಲ = ಮಳೆಗಾಲ

ಕಣ್+ಪನಿ = ಕಂಬನಿ

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಮನ್ವಯ ಸಮಿತಿ ಜಾಲತಾಣ

ನಮ್ಮ ಜಾಲತಾಣದಲ್ಲಿ (ವೆಬ್‌ಸೈಟ್) ವೀಕ್ಷಿಸಿ:

- ಸಾಹಿತ್ಯ ದಾಸೋಹದ ಎಲ್ಲಾ ಸಂಚಿಕೆಗಳು
- ಸಾಹಿತ್ಯ ದಾಸೋಹದ ಯುಟ್ಯೂಬ್ ಕೊಂಡಿಗಳು
- ವೇದಿಕೆಯ ಇತರ ಕಾರ್ಯಕ್ರಮಗಳ ಯುಟ್ಯೂಬ್ ಕೊಂಡಿಗಳು
- ಧ್ವನಿ ಕಡತಗಳು
- ಛಾಯಾಚಿತ್ರಗಳು
- ಆಲಿಸಿ – ನಮ್ಮ ಸದಸ್ಯರು ಬರೆದ ಕತೆಗಳು ಇತ್ಯಾದಿ,,, ಇತ್ಯಾದಿ...

ನಮ್ಮ ಜಾಲತಾಣ ಪ್ರವೇಶಿಸಲು ಈ ಕೊಂಡಿ ಬಳಸಿ: https://sahithyadasoha.com

ಓ ಹೆನ್ರಿಯ ಇಂಗ್ಲಿಷ್ ಕತೆ

'ವಸಂತ ಕಾಲ'

- ವಿಠ್ಠಲ. ಇಜೇರಿ

ಓ ಹೆನ್ರಿಯ (ಸಿಡ್ನಿ ಪೋರ್ಟರ್) ಕತೆಗಳು ಸರಳ ಭಾಷೆಯಲ್ಲಿದ್ದು ಹೆಚ್ಚಿನ ಕತೆಗಳು ಅನಿರೀಕ್ಷಿತ ತಿರುವುಗಳನ್ನು ಪಡೆದು ಕೊಳ್ಳುತ್ತವೆ. ಮತ್ತು ಆಳವಾದ ಮಾನವ ಸಂಬಂಧಗಳನ್ನು ಹೊಂದಿರುತ್ತವೆ. ಓ ಹೆನ್ರಿಯು 300ಕ್ಕೂ ಹೆಚ್ಚು ಚಿಕ್ಕ ಕತೆಗಳನ್ನು ಬರೆದಿದ್ದಾರೆ. 1952ರಲ್ಲಿ ಅವರ ಐದು ಚಿಕ್ಕ ಕತೆಗಳನ್ನು ಒಳಗೊಂಡ ಚಲನಚಿತ್ರ ನಿರ್ಮಾಣವಾಗಿತ್ತು. ಅವರ ನೆನಪಾರ್ಥ "ಓ ಹೆನ್ರಿ" ಪ್ರಶಸ್ತಿಯೊಂದನ್ನು ಉತ್ತಮ ಇಂಗ್ಲಿಷ್ ಚಿಕ್ಕ ಕಥೆಗಾರರಿಗೆ ನೀಡಲಾಗುತ್ತಿದೆ.

ಇಂದು ಪ್ರಸ್ತುತಪಡಿಸುವ 'ಸ್ಪ್ರಿಂಗ್ ಟೈಮ್' ('ವಸಂತ ಕಾಲ') ಕತೆಯು ವಸಂತ ಮಾಸದಲ್ಲಿ ಪ್ರೀತಿಗೆ ಸಿಲುಕಿದ ಯುವತಿ ಸಾರಾ ಮತ್ತು ಗ್ರಾಮೀಣ ಯುವಕ ವಾಲ್ಟೇರ್ ಅವರ ಕತೆಯಾಗಿದ್ದು. ಸದ್ದುಗದ್ದಲ, ಬೇರಾವ ಪಾತ್ರಗಳಿಲ್ಲದ ದೃಶ್ಯ ಕಾವ್ಯದಂತಿದೆ. ಕತೆಗಳು ಒತ್ತಡ ನೀಗಿಸಲು ಮತ್ತು ಕಾಲ್ಪನಿಕ ಜಗತ್ತಿನಲ್ಲಿ ವಿಹರಿಸಲು ಉತ್ತಮ ಮಾಧ್ಯಮ ಎಂಬುದು ಈ ಕತೆ ಪೂರ್ಣ ಓದಿದಾಗ ಅನುಭವಕ್ಕೆ ಬರುವುದು. ಸಾರಾ ನ್ಯೂಯಾರ್ಕ್ ನಗರದಲ್ಲಿ ಟೈಪಿಸ್ಟ್ ಕೆಲಸ ಮಾಡುತ್ತಿದ್ದಾಳೆ. ಆಕೆ ಜನರ ಪತ್ರಗಳನ್ನು, ಹೋಟೆಲ್ ಮೇನು (ಆಹಾರ ಪತ್ರ), ಬೇರೆ ಇತರ ಕಾಗದಗಳನ್ನು ಟೈಪ್ ಮಾಡುತ್ತಾಳೆ. ವಸಂತ ಮಾಸದ ಒಂದು ದಿನ ಒಂದು ಹೋಟೆಲಿನ ಮೇನು ಟಂಕಿಸುವಾಗ ಅದರಲ್ಲಿಯ ತರಕಾರಿ, ಗಜ್ಜರಿ, ಈರುಳ್ಳಿ ಇತ್ಯಾದಿ ಟೈಪ್ ಮಾಡುವಾಗ ಆಕೆಗೆ ಈ ಮುಂಚೆ ತನ್ನ ಜೀವನದ ಒಂದು ವಸಂತ ಮಾಸದ ನೆನಪು ಬಂದು ಕಣ್ಣು ಒದ್ದೆಯಾದವು. ಇತರರಿಗೆ ಮಾಮೂಲು ಅನಿಸುವ ಈ ಆಹಾರ ಪದಾರ್ಥಗಳು ಆಕೆಗೆ ವಿಶೇಷವೆನಿಸಿದವು. ಒಂದೊಂದು ತರಕಾರಿ ಆಕೆಗೆ ತನ್ನ ಹೃದಯಕ್ಕೆ ಅತಿ ಹತ್ತಿರದ ವ್ಯಕ್ತಿಯ ನೆನಪನ್ನು ತರುತ್ತಿತ್ತು. ಆಕೆಯ ಬೆರಳು ಮಾಮೂಲು ರೀತಿಯಲ್ಲಿ ಟೈಪ್ ಯಂತ್ರದ ಅಕ್ಷರಗಳ ಮೇಲೆ ಆಡಿಸುತ್ತಿದ್ದರೆ ಆಕೆಗೆ ಮನದೊಳಗೆ ಅದ್ಯಾರೋ ಕೈ ಇರಿಸಿ ಆಡಿಸಿದಂತಿತ್ತು. ಆಕೆಗೆ ಅಲ್ಲಿ ತಾನು ಟೈಪ್ ಮಾಡುವ ತರಕಾರಿಗಳು ಒಂದು ಸಮಯದಲ್ಲಿ ತನ್ನ ಪ್ರಿಯಕರನಾಗಿದ್ದ, ಬೆಳೆಯುತ್ತಿದ್ದ ಗ್ರಾಮೀಣ ಯುವಕ ವಾಲ್ಟೇರ್ ನೆನಪನ್ನು ತರುತ್ತಿದ್ದವು. ಅವೆಲ್ಲ ಆಕೆಯ ಪ್ರಿಯಕರ ವಾಲ್ಟೇರ್ ದಂಡಿಯಾಗಿ ಬೆಳೆಯುತ್ತಿದ್ದ ಉತ್ಪನ್ನಗಳಾಗಿದ್ದವು.

ವಾಲ್ಟೇರನನ್ನು ಅವನ ಗ್ರಾಮದಲ್ಲಿ ಭೇಟಿಯಾದ ಮೊದಲ ಸಂದರ್ಭದಲ್ಲಿಯೇ ಅವನ ಪ್ರಾಮಾಣಿಕ, ಸರಳ ವ್ಯಕ್ತಿತ್ವಕ್ಕೆ ಸಾರಾ ಮರುಳಾದಳು. ಆಕೆ ಆ ಗ್ರಾಮದಲ್ಲಿ ಕೆಲವು ದಿನ ಉಳಿದಾಗ ಅವರ ಸಂಬಂಧಗಳು ಗಟ್ಟಿಯಾದವು. ಅವನೊಡನೆ ತಾನು ಸುಖವಾಗಿರುವೆ ಎಂಬ ಭರವಸೆಯುಂಟಾಯಿತು. ಅವರ ಪ್ರೀತಿ ಅಂತಹ ಶ್ರೀಮಂತಿಕೆಯ, ಥಳಕು ಬಳಕಿನದಾಗಿರಲಿಲ್ಲ, ಬಹಳ ಸರಳ, ಸುಂದರ ಮತ್ತು ಪ್ರಾಮಾಣಿಕ ಪ್ರೀತಿಯಾಗಿತ್ತು. ಅವರಿಬ್ಬರೂ ನಿಶ್ಚಿತಾರ್ಥದ ಮೂಲಕ ತಮ್ಮ ಸಂಬಂಧಕ್ಕೊಂದು ಅರ್ಥ ನೀಡಿದರು. ವಾಲ್ಟೇರ್ ತನ್ನ ಪ್ರೀತಿಯನ್ನು ಕಾಡಿನ ಸುಂದರ ಡೆಂಡೆಲಿಯನ್ಸ್ ಎಂಬ ಹೂವುಗಳ ಗುಚ್ಛವನ್ನು ಕೊಡುವ ಮೂಲಕ ವ್ಯಕ್ತಪಡಿಸುತ್ತಿದ್ದ. ಸಾರಾ ಆ ಹೂವುಗಳನ್ನು ಕಾಡಿನ ಕಳೆ ಅಂದುಕೊಂಡಿರಲಿಲ್ಲ, ಆ ಹೂವುಗಳು ವಾಲ್ಟೇರ್ ನ ಪ್ರೀತಿ ಮತ್ತು ಪ್ರಾಮಾಣಿಕತೆಯ ಸಂಕೇತವೆಂದು ತಿಳಿದಿದ್ದಳು.

ಈ ಮಧ್ಯೆ ದುರದೃಷ್ಟವೆನೋ ಎಂಬಂತೆ ಘಟನೆಯೊಂದು ನಡೆಯಿತು. ವಾಲ್ಟೇರ್ ಬೇಗ ಬರುವೆನೆಂದು ಹೋದವನು ಬಹುಕಾಲ ಬರಲೇ ಇಲ್ಲ, ಅಲ್ಲದೆ ಪತ್ರ ಮುಖೇನ ಕೂಡ ಸಂಪರ್ಕಿಸಲಿಲ್ಲ. ಬಹು ಕಾಲ ಅವನಿಂದ ಯಾವುದೇ ಸಮಾಚಾರ ಬರದೇ ಇದ್ದಾಗ ಸಾರಾಳಿಗೆ ವಾಲ್ಟೇರ್ ತನ್ನಿಂದ ದೂರಾದ ಎಂದು ಅನಿಸಿತು. ಈ ಮೊದಲು ಆಕೆಗೆ ಅಪಾರ ಸಂತೋಷನೀಡಿದ ಅವನ ಪ್ರೀತಿ, ಈಗ ಅಷ್ಟೇ ಪ್ರಮಾಣದ ದುಃಖಕ್ಕೆ ಕಾರಣವಾಗಿತ್ತು. ಒಬ್ಬಳೇ ಇರುವಾಗ ಅತ್ತು ತನ್ನ ಜೀವನದ ಸೊಬಗನ್ನು ಕಳೆದುಕೊಂಡ ಅನುಭವವಾಯಿತು. ಆಕೆಗೆ ಇಂದಿನ ಖಾಲಿ ಸ್ಥಿತಿಯಲ್ಲಿ ಮತ್ತು ಮುಂಚಿನ ಸಂತೋಷದ ಸಮಯಗಳ ಮಧ್ಯೆ ಸಿಕ್ಕುಹಾಕಿಕೊಂಡ ಅನುಭವ.

ಹೀಗಿರುವಾಗ ಅದೊಂದು ದಿನ ಆಕಸ್ಮಿಕ ಘಟನೆಯೊಂದು ನಡೆಯಿತು. ಆಕೆ ತನ್ನ ಮನೆಯಲ್ಲಿ ದುಃಖತಪ್ತಳಾಗಿ ಕಣ್ಣೀರು ಹಾಕುತ್ತ ಕುಳಿತಾಗ ಹೊರಗೆ ಬಾಗಿಲು ಬಡಿದ ಶಬ್ದವಾಯಿತು. ಸಾರಾ ಕಣ್ಣೀರು ಒರೆಸಿಕೊಳ್ಳುತ್ತ ಎದ್ದು ಹೋಗಿ ಬಾಗಿಲು ತೆರೆದಳು. ಆಕೆ ತನ್ನ ಕಣ್ಣುಗಳನ್ನು ನಂಬದಾದಳು, ತಾನು ಕನಸು ಕಾಣುತ್ತಿದ್ದೇನೆಯೇ ಎಂದು ಪ್ರಶ್ನಿಸಿಕೊಂಡಳು. ಬಾಗಿಲಲ್ಲಿ ನಿಂತ ವ್ಯಕ್ತಿ ಬೇರಾರೂ ಅಲ್ಲ, ಆಕೆಯ ಜೀವನವೇ ಆದ ವಾಲ್ಟೇರ್. ಮನೆಯ ಒಳಗೆ ದುಃಖಾಶ್ರು ಸುರಿಸಿದ್ದಳು, ಹೊರಗೆ ನಿಂತ ವ್ಯಕ್ತಿಯನ್ನು ಕಂಡು ಕಣ್ಣುಗಳಿಂದ ಆನಂದ ಬಾಷ್ಪ ಹರಿದವು. ಆಕೆ "ನಿನ್ನನ್ನು ನಿರಂತರವಾಗಿ ಪ್ರೀತಿಸುತ್ತಿದ್ದೆ" ಅಂದಳು. ಅವನಿಗೂ ಆಕೆಯ ನೈಜ ಪ್ರೀತಿಯ ಅರಿವಿತ್ತು. ತಾನು ಸಂಪರ್ಕಿಸದೆ ಇದ್ದುದಕ್ಕೆ ತನ್ನ ಬಿಡುವಿಲ್ಲದ ದುಡಿತ ಮತ್ತು ಅನಾರೋಗ್ಯದ ತಾನು ಆಕೆಗೆ ಜೀವನಕ್ಕೆ ಭಾರವಾಗಬಾರದೆಂದು ಸಂಪರ್ಕಿಸಲಿಲ್ಲ ಎಂದು ಕಾರಣ ನೀಡಿದ. ಈಗ ಪುನಃ ವಸಂತಕಾಲ ಬಂದಿತ್ತು, ಅವನ ಆರೋಗ್ಯ ಸುಧಾರಿಸಿತ್ತು. ಅವನ ಕೈಗಳಲ್ಲಿ ಕಾಡು ಡೆಂಡೆಲಿಯನ್ಸ್ ಹೂವುಗಳ ಗುಚ್ಛವಿತ್ತು.

***

ರಾಗ: ಮೋಹನ, ಆದಿತಾಳ

ಬೇಗ ಬಾ ಕೃಷ್ಣ

– ಎಂ.ಆರ್. ರಘುನಾಥ್

ಬೇಗ ಬಾ, ಬೇಗ ಬಾ ಎಂದು ಎಲ್ಲ ಕರೆವರು
ಎನಿತು ಮನೆಗೆ ನೀನು ಹೋಗಬಲ್ಲೆಯೋ ಕೃಷ್ಣಾ ॥

ಮೊಗವ ನೋಡಿ ನೀನು ರೂಪವಂತನೆಂದು ಕರೆವರು
ದಿರಿಸು ಕಂಡು ನೀನು ಅತಿ ಚೆಲುವನೆಂದೆನುವರು
ಬಾಲಲೀಲೆ ನೋಡಿ ಎತ್ತಿ ಮುದ್ದಾಡ ಬಯಸುವರು
ಧೈರ್ಯ ಶೌರ್ಯ ಕಂಡು ಮಂತ್ರಮುಗ್ಧರಾಗಿ ನಿಲುವರು ॥

ಸೊಗಸಾದ ಫಲಪುಷ್ಪ ಭಕ್ಷ್ಯಭೋಜ್ಯ ಇತ್ತವರು
ದೇವ ನೀನೇ ಕಾಯೋ ಎಂದು ಭಕ್ತಿಯಲ್ಲಿ ಹಾಡುವರು
ಸಗ್ಗವನು ಕಂಡಂತೆ ಗೆಜ್ಜೆ ಕಟ್ಟಿ ಕುಣಿದವರು
ಮುಗ್ಧ ಮನದಿ, ಸಂತಸದಿ ಮುಕುತಿ ಪಥವ ಹಿಡಿದವರು ॥

ವಾಗ್ಗೇಯಕಾರರು, ದಾಸಕೂಟ ಪಂಥದವರು
ಹಿಗ್ಗಿ ನಿನ್ನ ಹೊಗಳಿ ಹಾಡಿ ಬರುವತನಕ ಬಿಡದವರು
ಜಗಕೆ ನೀನೆ ಒಡೆಯ ಎಂದು ಸಾರಿ ಸಾರಿ ಹೇಳಿದವರು
ನಿನ್ನ ಬಿಟ್ಟರನ್ಯರಿಲ್ಲ ಎಂದು ನಂಬಿ ಇರುವವರು ॥

ಸರ್ವವ್ಯಾಪಿ ನೀನೆಂದು ಎಲ್ಲರೂ ಬಲ್ಲರು
ನಿನ್ನ ಮಹಿಮೆ ತಿಳಿದ ಜಾಣರೆಲ್ಲರೂ ಕರೆವರು
ನಾನೂ ಕರೆವೆ ನಿನ್ನನಿಂದು ಬೇಗ ಬಾ, ಬಾ ಎಂದು
ಬಂದು ಪೊರೆಯೊ ಕೃಷ್ಣ ನೀನು
ಕೃಪೆಯ ತೋರೋ ಎಂದೆಂದೂ ॥

***

ನಾನು-ನಮ್ಮವರು

- ರೇಣುಕಾ ದೇಸಾಯಿ

ಅಲ್ಲೊಂದು ದೂರದೂರಿನಲ್ಲಿ ಹತ್ತಿರದ ಸಂಬಂಧಿಗಳ ಮಹಾಪೂರವಿತ್ತು, ಅಪರಿಚಿತರು ಪರಿಚಿತರಾದರು, ಪರಿಚಿತರು ಹತ್ತಿರವಾದರು, ಹತ್ತಿರವಾದವರೊಂದಿಗೆ ನಮ್ಮ ಸಂಬಂಧವೇನು ಎನ್ನುವುದುಗೊತ್ತಾಗಿ ಆತ್ಮೀಯರಾದೆವು. ಆತ್ಮೀಯರೊಂದಿಗೆ ನಮ್ಮ ಹಿರಿಯರ ಹಳೆಯ ನೆನಪುಗಳ ಭಾಂದವ್ಯ ಬಿಚ್ಚಿಕೊಂಡಿತು.

ಓ!! ಎಷ್ಟೊಂದು ಹೊಸಹೊಸ ಬಂಧುಗಳು ನೋಡಲು ಸಿಕ್ಕರು!! ಇದ್ದವರ ಕೈ ಕುಲುಕಿದೆವು, ಅನಾರೋಗ್ಯದಿಂದ ಕೈಲಾಗದೆ, ಬರದೇ ಇದ್ದವರ ಬಗ್ಗೆ ವಿಚಾರ ತಿಳಿದುಕೊಂಡೆವು, ಕಣ್ಮರೆಯಾದವರನ್ನು ನೆನೆದು ಹಳೆಯ ದಿನಗಳಿಗೆ ಹೋಗಿ, ಆ ದಿನಗಳ ನಿಷ್ಕಲ್ಮಶ ಜೀವನದ ವಿಧಾನವನ್ನು ಮೆಲುಕು ಹಾಕಿಕೊಂಡೆವು. ನಾವು ಕೂಡ ಒಂದಿಷ್ಟು ಮನಸ್ಸಿನ ಒಳಪದರದಲ್ಲಿರುವ ಕಹಿ ಭಾವನೆಗಳನ್ನು ಹೋಗಲಾಡಿಸಿಕೊಂಡು ಒಂದಾದೆವು, ಬಾಂಧವ್ಯ ಗಟ್ಟಿಯಾಯಿತು.

ಹೌದು, ಹೀಗೆ ಒಂದುದಿನ ಸಂತಸದಿಂದ ಕಳೆದದ್ದು, ಮನಸ್ಸಿಗೆ ಮುದ ಕೊಟ್ಟಿದ್ದು, ನಮ್ಮ ದೊಡ್ಡಪ್ಪನ ಮಗನಿಗೆ 80 ವರ್ಷ ದಾಟಿದ್ದಕ್ಕೆ, ಮರಿಮೊಮ್ಮಗ ಹುಟ್ಟಿದ್ದಕ್ಕೆ, ಕನಕಾಭಿಷೇಕದ ಕಾರ್ಯಕ್ರಮವದು. ಸುಬ್ರಾಯ ದೊಡ್ಡಪ್ಪನ ಏಕಮಾತ್ರ ಪುತ್ರನಿವನು, ಹೆಸರು ಆಂಜನೇಯ, ಹೆಸರಿಗೆ ತಕ್ಕಂತಹ ಧೈರ್ಯವಂತ. ಈ ನಮ್ಮ ಅಣ್ಣ ಎಲ್ಲರಂತಲ್ಲ, ಬಹಳ ಧಾರಾಳ ಮನಸ್ಸಿನ, ವಿಶಾಲ ಹೃದಯಿ. ತನ್ನ ಈ ಸುದೀರ್ಘ ಜೀವನ ಪಯಣದಲ್ಲಿ, ಜೊತೆಜೊತೆ ಬಂದಿರುವ ತನ್ನ ತಂದೆಯ ಐದು ಜನ ಅಣ್ಣ ತಮ್ಮಂದಿರ ಮಕ್ಕಳೆಲ್ಲರೂ ಅವನಿಗೆ ಪ್ರೀತಿಯ ಅಣ್ಣ-ತಮ್ಮಂದಿರೇ, ಅಕ್ಕ-ತಂಗಿಯರೇ. ಅಷ್ಟಲ್ಲದೆ, ಅವರ ಮಕ್ಕಳು ಮೊಮ್ಮಕ್ಕಳು ಕೂಡ ತನ್ನ ಮನೆಯ ಸಮಾರಂಭಕ್ಕೆ ಬರಲೇಬೇಕು ಎನ್ನುವ ಮನೋಭಾವದ ವ್ಯಕ್ತಿ. ಆಲದ ಮರದಂತಿರುವ ಈ ಮನೆತನ ದಲ್ಲಿ ಅವನೊಬ್ಬ **'ಯಜಮಾನ'**. ಯಾರೊಂದಿಗೂ ಕಹಿಭಾವನೆ ಹೊಂದದ ಪ್ರೀತಿ ತುಂಬಿದ ಮನಸ್ಸು. ಹಾಗಂತ ಅವನಿಗೇನು ಭಿನ್ನಾಭಿಪ್ರಾಯವಿಲ್ಲವೆಂದಲ್ಲ, ಅದನ್ನೆಲ್ಲ ಮರೆಯುವ ಮತ್ತು ಬೇರೊಬ್ಬರಲ್ಲಿದ್ದರೆ ಅದನ್ನು ಮರೆಸುವ ಉದಾರಿ, ಹಿರಿಯ.

ಯಾರು ಏನೇ ಮಾಡಲಿ, ಹೇಗೇ ಇರಲಿ, ತನ್ನ ಮನೆಯ ಕಾರ್ಯಕ್ರಮಕ್ಕೆ ಎಲ್ಲಾ ಬಂಧುಬಾಂಧವರು ಅವನಿಗೆ ಬೇಕು ಮತ್ತು ಅವರು ಬರಲೇಬೇಕು. ಅವನ ಆಹ್ವಾನ ಅಷ್ಟು ಆತ್ಮೀಯವಾಗಿರುತ್ತೆ, ಅವನ ಕರೆಯಲ್ಲಿ ಕರುಳಿನ ಕರೆ ಗಾಢವಾಗಿರುತ್ತದೆ. ತನ್ನ ಸುದೀರ್ಘ ವ್ಯಾಪಾರಸ್ಥ ಜೀವನದಲ್ಲಿ ಸಮಾಜದ ಅನೇಕ ಸ್ಥರದ ಜನಗಳು ಅವನಿಗೆ ಆಪ್ತರು; ಅಲ್ಲಿ ಬಡವ ಬಲ್ಲಿದ ಎನ್ನುವುದಿಲ್ಲ, ಮೇಲು ಕೀಳು ಎನ್ನುವದಿಲ್ಲ. ಅಷ್ಟಲ್ಲದೆ, ತಾನಿರುವ ಪಟ್ಟಣದಲ್ಲಿ ಅನೇಕ ಸಮಾಜಹಿತ ಕೆಲಸ ಕಾರ್ಯಗಳನ್ನು ಕೈಗೊಂಡು, ಅವು ಸುಸೂತ್ರವಾಗಿ, ಎಂದೂ ನಿಲ್ಲದಂತೆ ನಡೆದುಕೊಂಡು ಹೋಗಲು ಯುವಜನತೆಯನ್ನು ಒಗ್ಗೂಡಿಸುವದು, ಅವರಿಗೆ ಸಕಲ ರೀತಿಯಲ್ಲೂ ಬೆಂಬಲವಾಗಿ ನಿಲ್ಲುವದು, ದೇವಸ್ಥಾನ, ಮಠ-ಮಾನ್ಯದಲ್ಲಿ ಪೂಜೆ ಪುನಸ್ಕಾರಗಳನ್ನು, ರಥೋತ್ಸವಗಳನ್ನು ಏರ್ಪಡಿಸುವದು, ದಾನಧರ್ಮಗಳನ್ನು ಸ್ವತಃ ಮಾಡುವದು, ಇವೆಲ್ಲಾ ಅವನ ಸಹಜ ಗುಣಗಳು.

ಅದಕ್ಕೆ ಇರಬೇಕು ಅವನು ತನ್ನ 84ನೇ ವರ್ಷದಲ್ಲೂ ಗಂಭೀರತೆ, ಧಾಡಸಿತನ ಇಟ್ಟುಕೊಂಡು, ಎಲ್ಲಾ ಸಂದರ್ಭದಲ್ಲೂ ಎಲ್ಲರನ್ನೂ ಆತ್ಮೀಯವಾಗಿ ಆಹ್ವಾನಿಸುತ್ತಾನೆ. ಅವನ ಈ ಆತ್ಮೀಯ ಕರೆ ಎಲ್ಲರನ್ನೂ ಅಯಸ್ಕಾಂತದಂತೆ ಆಕರ್ಷಿಸುತ್ತದೆ. ತಪ್ಪದೆ ಹೋಗುತ್ತೇವೆ, ಅವನ ಕಾಲಿಗೆ ನಮಸ್ಕರಿಸಿ, ಬಾಲ್ಯವನ್ನು, ನಂತರದ ಬಂಧುಗಳ ಜಾಡನ್ನು ಸ್ಮರಿಸುತ್ತ, ಒಂದಿಷ್ಟು ನೆಮ್ಮದಿಯನ್ನು ಹೊತ್ತು ತರುತ್ತೇವೆ.

ನಮ್ಮ ಇಷ್ಟು ದೊಡ್ಡ ಬಳಗದಲ್ಲಿ ಅವನೊಬ್ಬ ಹೀಗೆ ಹೇಗಾದ!? ಅವನಂತೆ ನಾವು ಬಾಂಧವ್ಯ ಬೆಸೆಯಲಾರೆವೆ? ಎನ್ನುವ ಪ್ರಶ್ನೆ ಇಷ್ಟು ದಿನ ಇರುತ್ತಿತ್ತು, ಆದರೆ ಈಗ ನನಗೆ ವಯಸ್ಸಾದಂತೆ ನಾನೂ ಅವನಂತೆ ಬಂಧುಗಳಿಗೆಲ್ಲ ಕೊಂಡಿಯಾಗಬೇಕೆನ್ನುವ ಅಭಿಲಾಷೆ ಹೊತ್ತು ಬಂದಿದ್ದೇನೆ. ನಮ್ಮ ನಮ್ಮ ಜೀವನಕ್ರಮ ಏನಾದರೂ ಇರಲಿ, ಕೊನೆಪಕ್ಷ ಮರಳೋಣ ನಮ್ಮ ನಮ್ಮ ತಂದೆ ತಾಯಿಯರ ಕಾಲಕ್ಕೆ, ಸವಿಯೋಣ ಕೂಡುಕುಟುಂಬದ ಸವಿಯ.

***

ಬರಲಿ ಹೊಸತೆ

– ಪೋರ

ಥಾನುಗಟ್ಟಲೆ ಹೊಸೆದ
ಕತೆ ಕವನ
ಒರೆಗೆ ಹಚ್ಚಿ ನೋಡಿದರೆ
ಪ್ರತಿ ಸಾಲು ಸೆಲೆಯಲ್ಲ
ಭಾವ ಬತ್ತಿದ ಒರತೆ
ಕಂಡ ಚಿತ್ರ ತನ್ನದೇ

ದುಃಖ ದುಮ್ಮಾನ
ಪ್ರೀತಿ ಅಂತಃಕರಣ
ಕಡೆಗಣಿಸಿದ ಮನ
ಎಸರು ಕುದಿಯುವ ಮುನ್ನ
ಅನ್ನ ಸಂತರ್ಪಣೆ
ಗೀಚಿದ್ದೆಲ್ಲ ಲೋಕಾರ್ಪಣೆ

ಬರಲಿ ಹೊಸತೆ ಇನ್ನು–

ಸೆರಗಿನಲಿ ಅವಿತ ಕೆಂಡ
ನೀರಿಗಾಹುತಿಯಾಗಿ ಆವಿ ಮೇಲೆದ್ದಂತೆ
ಆವರಿಸಿದ ಕರಿಮೋಡ
ನೆಲಕೆ ಕಾವ ಕೊಟ್ಟಂತೆ
ಹನಿ ಹನಿ ಘನಿಸಿ ಮೊದಲ ಮಳೆ
ಪ್ರಕಟಗೊಂಡಂತೆ

ಮೊದಲ ಹನಿ
ಮೆಲ್ಲ ಎದೆಯ ಮೇಲಿಂದ
ಹರಿದು ಕೆಳ ಸರಿದು
ನೆಲಕಾದು ಬಾ ಇಳೆಗೆ
ನನ್ನೊಳಗೆ ಹನಿಸಿ ಹಗುರಾಗು
ಎಂದು ಕರೆದಂತೆ

ನೆಲ ಬಿರಿದು ಹರಿದಂತೆ
ಇರುಳು ಬಾಗಿಲ ತೆರೆದು ಬೆಳಕಾದಂತೆ
ಪದಗಳಿಗೆ ಜೀವ ಬಂದಂತೆ
ಹೂವು ನಿಶ್ಶಬ್ದ ಅರಳಿ
ಗಾಳಿ ಉಸಿರಾದಂತೆ
ಎಳೆಕಂದ ಕನಸಲಿ ನಕ್ಕಂತೆ

ಮುತ್ತ ಕಸಿದು ಜೋಪಾನ
ಎದೆಯೊಳಿರಿಸಿಕೊಳ್ಳುವ ತೆರ
ಕವಿತೆ
ಬರಲಿ ಹೊಸತೆ

***

ಲೇಡೀಸ್ ಪಬ್

- ನಾಗರತ್ನ ಚಂದ್ರಶೇಖರ

"ಶಿವಣ್ಣ, ನಮ್ಮ ಮಹಾತ್ಮ ಗಾಂಧಿ ರಸ್ತೆ ಒಳಿಗೆ ಹೊಸ ಪಬ್ಬು ಓಪನ್ ಆಗಿದೆ. ಈ ಶನಿವಾರ ಅಲ್ಲಿಗೆ ಹೋಗೋಣ್ವ"

"ಹೋ...ಅದಾ .. ನಾನೂ ನೋಡಿದೆ. ಲಾಡೀಸ್ ಪಬ್ ಅಂತ ಹೆಸರು ದೊಡ್ಡದಾಗೇ ಇದೆ."

"ಲೇ ಅದು ಲಾಡಿಸ್ ಅಲ್ವೋ, ಲೇಡೀಸ್.. ನಿನಗೆ ಇಂಗ್ಲಿಷ್ ಯಾರು ಕಲಿಸಿದೋರು? ಅದಕ್ಕೆ ಎಸ್ಸೆಸ್ಸೆಲ್ಸಿ ಡುಮುಕಿ ಹೊಡೆದು ಹೊಡೆದು ಒಳ್ಳೆ ಕೆಲಸ ಇಲ್ದೆ ಕುಂತೆ... ಇರ್ಲಿ ಬಿಡು ಶಿವಣ್ಣ, ಲಾಡಿಸೋ, ಲೇಡೀಸೋ, ಅಂತೂ ಒಂದು ಹೊಸ ಪಬ್ಬು ಆಗೇದ. ಬಾಗಿಲಲ್ಲಿ ಒಂದು ಚೆಂದುಳ್ಳಿ ಹುಡುಗಿ ಬೇರೆ ನಿಂತಿರ್ತಾಳೆ. ನಮ್ಮಂಗೆ ಬಾಗಿಲು ತೆಗಿಯೋ ಕೆಲಸಕ್ಕೆ ಇರಬೇಕು"

"ಆದರೆ ಆ ಪಬ್ಗೆ ಹೋಗಕ್ಕಾಗಲ್ಲ ಅದು ಬರೀ ಹೆಂಗಸರಿಗೆ ಮಾತ್ರ ಅಂತೆ"

"ಇದೊಳ್ಳೆ ತಮಾಷೆ ಆಯ್ತಲ್ಲ, ಹೆಂಗಸರಿಗೆ ಅಂತ ಆಸ್ಪತ್ರೆ ಇದೆ, ಪೊಲೀಸ್ ಸ್ಟೇಷನ್ ಆಯ್ತು. ಸ್ಕೂಲು ಕಾಲೇಜು ಅಂತೂ ಇದ್ದೇ ಇತ್ತಲ್ಲ, ಈಗ ಗುಂಡು ಹಾಕೋಕೆ ಪಬ್ಬು ಕೂಡ ಬಂತಲ್ಲಪ್ಪ. ಎಂಥಾ ಕಲಿಗಾಲ ಅಂತೀನಿ"

"ಹೇ ಸುಮ್ಕಿರಲಾ, ನಾವು ಮಾತ್ರ ಕಂಟ್ಮಟ್ಟ ಕುಡಿದು, ಸರಿ ರಾತ್ರಿ ಮನೆಗೆ ಹೋಗಿ ನಮ್ಮ ಹೆಂಡ್ರನ್ನ ದನ ಬಡಿದಂಗ್ ಬಡಿತಾ ಇದ್ರೆ ಎಷ್ಟು ವರ್ಷ ಅಂತ ಸುಮ್ಕಿರ್ತಾರೆ ಹೇಳು?"

“ಗಾಂಧೀಜಿನೇ ಹೇಳೋರಂತಲ್ಲ, ಅದೇನದು? ಹೆಣ್ಮಕ್ಳು ರಾತ್ರಿ ಹೊತ್ತು ಭಯ ಇಲ್ದೆ ಒಬ್ಬರೇ ಓಡಾಡೋದೇ ಸ್ವಾತಂತ್ರ್ಯ ಅಂತೆ. ಅವತ್ತು ಭಾಷಣದಾಗೆ ಯಾರೋ ಹೇಳ್ತಾ ಇದ್ರು, ನಾನು ಕೇಳಿಸ್ಕೊಂಡೆ."

"ಹಂಗಾದ್ರೆ ಇನ್ಮುಂದೆ ನಾವು ಕುಡಿದು ಮನೆಗೆ ಹೋದ್ರೆ, ಬಾಗಿಲ್ ತೆಗಿಯೋಕೆ ಮನೆಯಲ್ಲಿ ಹೆಂಗೋಸ್ರು ಯಾರು ಇರಂಗಿಲ್ಲ ಅನ್ನು. ಅವರೂನೂ ರಾತ್ರಿ ಪಬ್ ಗೆ ಅಂತ ಬಂದು ಪೆಗ್ ಹಾಕಿ ತಡವಾಗೇ ಮನೆಗೆ ಬರ್ತಾರೆ."

"ಹೋಗ್ಲಿ ಬಿಡಲೇ, ಸಿನಿಮಾ, ಪಾರ್ಕು ಅಂತ ಜೊತೆಯಾಗೆ ಓಡಾಡ್ತಾ ಇದ್ಮೇಲೆ, ಕುಡಿಯಕ್ ಮಾತ್ರ ಬೇರೆ ಯಾರಾದ್ರೂ ಜೊತೆ ಹುಡುಕೋ ತಾಪತ್ರಯ ಇರಲ್ಲ. ಇಬ್ಬರೂ ಒಟ್ಟಿಗೆ ಏರಿಸಿಕೊಂಡೆ ಜುಮ್ ಅಂತ ಮನೆಗೆ ಹೋದ್ರಾತು"

"ಹಂಗಂತೀಯಾ, ನಿನ್ ಮಾತು ಕೇಳಿದ್ರೆ ಮಾಲಾಶ್ರೀ ಸಿನ್ಮ ಜ್ಞಾಪಕ ಬರ್ತಾ ಇದೆ ನೋಡು"

"ಹೋ ಅದಾ..., ಒಳಗೆ ಸೇರಿದರೆ ಗುಂಡು, ಹುಡುಗಿ ಆಗುವಳು ಗಂಡು"

"ಈ ಗುಂಡಿನ್ ಸಮಾಚಾರ ನಮಗೇನು ಹೊಸದ? ನಾನೇನೋ ನನ್ ಹೆಂಡ್ತಿಗೆ ಕುಡಿಯೋಕೆ ಬಿಡಲ್ಲಪ್ಪ. ನಾವಿಬ್ರೂ ಕುಡಿದು ತೂರಾಡ್ತಿದ್ರೆ ನಮ್ ಮಕ್ಳು ಗತಿ ಏನಪ್ಪ?"

"ಏನಿಲ್ಲ ಬಿಡು, ಮನೆಯಲ್ಲಿ ಹಾಲಿನ ಬದಲು ಆಲ್ಕೋಹಾಲ್ ಇರ್ತೈತೆ ಅಷ್ಟೇ, ಅಪ್ಪ-ಅಮ್ಮ ಇಬ್ಬರೂ ಟೈಟ್ ಆಗಿರೋದು ನೋಡ್ತಾ ನೋಡ್ತಾ ಇದ್ರೆ ನಮ್ಮ ಮಕ್ಕಳು ಜಾಸ್ತಿ ಲೂಸ್ ಆಗ್ತ ಹೋಗ್ತಾರೆ ಅಷ್ಟೆ."

"ನಿಜಾನೆ, ಆದರೆ ನಮ್ ಹೆಂಡ್ತೀರು ಪಬ್ಬು, ಗಿಬ್ಬು ಅಂತ ಸುತ್ತೋಕೆ ಶುರುಹಚ್ಕೊಂಡ್ರೆ ನಮ್ಮ ಸಂಬಳ ಎಲ್ಲಿಗ್ ಸಾಕಾಗ್ತದೆ ಶಿವಣ್ಣ.?

"ವಾರಕ್ಕೊಂದಪ ಗುಂಡಾಕ್ಕೆ ಪರದಾಡೋರು ನಾವು. ಮನೆ ಖರ್ಚಿಗೆ ನಾವು ಕೊಡೋ ದುಡ್ಡು ಸಾಲಕ್ಕಿಲ್ಲ ಅಂತ ಕಿರಿಕಿರಿ ತಿಂಗಳ ಪೂರ್ತಿ ಮಾಡ್ತಾನೆ ಇರ್ತಾರೆ. ಇನ್ನು ಅವರಿಗೂ ಗುಂಡು ಹಾಕುವ ದುರ್ಬುದ್ದೀನೂ ಬಂದರೆ ನಮ್ಮ ಹೊಟ್ಟೆ ಮೇಲ್ ತಣ್ಣೀರು ಬಟ್ಟೇನೆ ಗತಿ ಕಂಡ್ಲ."

"ಹಂಗಾದ್ರೆ ಈ ಪಬ್ಬು ಅದೇ ಲಾಡಿಸ್ ಪಬ್ಬು..."

"ಲಾಡೀಸಲ್ಲ ಲೇಡೀಸ್ ಅಂತ ಎಷ್ಟು ಸರಿ ಹೇಳಬೇಕು ನಿಂಗೆ"

"ಹುಂ ಅದೇ ಕಣ್ಲಾ... ಇದು ಶುರುವಾಗಿರೋ ವಿಷಯ ಅವರಿಗೆ ಗೊತ್ತಾಗದ ಹಾಗೆ ನೋಡ್ಕೋಬೇಕು. ಅಪ್ಪಿ ತಪ್ಪಿನೂ ಈ ಮಹಾತ್ಮ ಗಾಂಧಿ ರಸ್ತೆ ಕಡೆ ಅವರನ್ನ ಕರ್ಕೊಂಡು ಬರದೇ ಇದ್ರೆ ಸರಿ."

ನನ್ ಹೆಂಡ್ತಿ ಅಂತೂ 'ನಂಗೆ ಮೆಟ್ರೋ' ತೋರ್ಸಿ, .ಅದರಲ್ಲಿ ಕರ್ಕೊಂಡು ಹೋಗಿ ಅಂತ ಕೇಳ್ತಾನೆ ಅವ್ಳೆ. ಮೆಟ್ರೋನಲ್ಲಿ ಹೋಗಿ ಕೆಟ್ರೋ ಅಂತ ಆಗಬಾರ್ದು ಅಂತ ಭಯ."

"ಶಿವಣ್ಣ ನಂಗೊಂದು ಉಪಾಯ ಹೊಳಿತಾ ಇದೆ ನೋಡು. ಈ ಸರಾಯಿ ಅಂಗಡಿಗಳನ್ನ ಮುಚ್ಚಿ ಅಂತ ಹೆಂಗಸರೆಲ್ಲಾ...''

"ಅಯ್ಯೋ ರಂ... ಹೇಳಿ ಕೇಳಿ ಇದು ಎಂ.ಜಿ ರಸ್ತೆ. ಇಲ್ಲಿ ಬರೋ ಹೆಣ್ಮಕ್ಳೆಲ್ಲ ಹೆಂಗಿರ್ತಾರೆ ಅಂತ ನಿಂಗೆ ಗೊತ್ತಲ್ವ.. ಬರ್‍ರಂತ ಕಾರಲ್ಲಿ ಬಂದು.... ಸರ್ ಅಂತ ಪಬ್ ಒಳಗ್ಹೋಗಿ ಪೆಗ್ ಹಾಕೊಂಡು ಪುರ್ ಅಂತ ಹೋಗೇ ಬಿಡ್ತಾರೆ. ನೀನ್ ಸತ್ಯಾಗ್ರಹ ಒಂದೇ ಗಂಟೇಲೇ ಸತ್ತೋಯ್ತದೆ".

"ಅದು ನಿಜ ಅನ್ನು. ಅದೇನೋ ಮಹಿಳಾ ದಿನಾಚರಣೆಯಂತೆ. ಗಂಡಸರಂಗೆ ನಾವು ಯಾವುದ್ರಲ್ಲೂ ಕಮ್ಮಿ ಇಲ್ಲ ಅಂತ ಅವರು ತೋರಿಸಿಕೊಬೇಕಂತೆ. ನಿಮ್ ಸಮ, ಸಮ ನಾವು ದುಡಿತೀವಿ, ನಾವೂ ಕುಡೀತೀವಿ. ಸಮಾನ ಹಕ್ಕು ಯಾಕೆ ಬೇಡಾಂತ ಅವತ್ತು ಟಿ.ವಿನಲ್ಲಿ ಚರ್ಚೆ ಮಾಡ್ತಾ ಇದ್ರಲ್ಲಪ್ಪ"

"ನಾವು ಒಂದು ಕೆಲಸ ಮಾಡಬಹುದು ನೋಡು. ಈ ಲೇಡಿಸ್ ಪಬ್ಬು ಎಂ.ಜಿ. ರಸ್ತೆಗೆ ಮಾತ್ರ ಇರ್ಲಿ, ಆ ಗಾಂಧಿ ಹೆಸರು ಇರುವಾಗ ಅವರು ಕಂಟ್ರೋಲ್‌ನಲ್ಲೇ ಇರಬಹುದೇನೋ, ಬೆಂಗಳೂರಿನಾಗೆ ಬೇರೆ ಕಡೆ ಇಂಥ ಪಬ್ಬುಗಳು ಆಗದಂಗೆ ನಾವು ನೋಡ್ಕೋಬೇಕು. ನಮ್ ಯೂನಿಯನ್ ಲೀಡರ್‌ಗೆ ಒಂದು ಮಾತು ಹೇಳೋಣ, ಅವ್ನು ಆ ವಿಷ್ಯ ನೋಡ್ಕೊಳ್ತಾನೆ"

"ಅದು ನಿಜ ಅನ್ನು. ನಮ್ಮ ಹೆಂಗಸರು ರಾತ್ರಿ ಹೊತ್ತು ಅದೂ ಎಂಜಿ ರೋಡಿಗೆ ಬರೋಕೆ ಆಗಲ್ಲ ಬಿಡು. ಟ್ರಾಫಿಕ್ ಜಾಸ್ತಿ ಅಂತ. ಆದರೆ ಮಲ್ಲೇಶ್ವರ, ಜಯನಗರ, ರಾಜಾಜಿನಗರ, ಪದ್ಮನಾಭ ನಗರ, ಜೆ.ಪಿ ನಗರದಲ್ಲೆಲ್ಲ ಇಂತಹ ಲೇಡೀಸ್ ಪಬ್ಬು ಬಾರದಂಗೆ ಹೊಸ ಕಾನೂನು ತರಲೇಬೇಕು."

"ಹೂ ಮತ್ತೆ, ಬೆಳಿಗ್ಗೆ ಲೇಡೀಸ್ ಕ್ಲಬ್, ರಾತ್ರಿ ಲೇಡೀಸ್ ಪಬ್ ಅಂತ ಹೀಗೆ ಹುಡುಗೀರು ಇಡೀ ದಿನ ರಾತ್ರಿ ಹಗಲು ಸುತ್ತಾಡ್ತಿದ್ರೆ ಸಂಸಾರದ ಗತಿ ಏನು? ಮಕ್ಕಳ ಭವಿಷ್ಯ ಏನಾಗ್ಬೇಕ್ ಹೇಳು"

ಈ ಪಬ್‌ನಿಂದ ಸಂಸಾರ ಗಬ್ ಆಗ್ತಾ ಇರ್ಬೇಕಾದ್ರೆ ಏನಾದ್ರೂ ನಾವು ಮಾಡ್ಲೇಬೇಕು. ನಮ್ಮ ಯೂನಿಯನ್ ಲೀಡರಿಗೆ ದೊಡ್ಡ ದೊಡ್ಡ ಮಿನಿಸ್ಟ್ರುಗಳೆಲ್ಲ ಗೊತ್ತದಂತಲ್ಲ"

"ಅಯ್ಯೋ ಬುಡ್ಲಾ, ಈ ಮಿನಿಸ್ಟರ್ ಸುದ್ದಿ. ಅವರು ಆದರ್ಶ ಪುರುಷರು ಅಂತ ಅದ್ಯಾರ್ ಅನ್ಕೊಂಡಿದ್ದಾರು. ಲಿಕ್ಕರ್ ಸಾಮ್ರಾಜ್ಯ ದೊಡ್ಡದಾಗುತ್ತಿರುವುದೇ ಅವರಿಂದ. ಪಾಪ ನಮ್ ಲಿಕ್ಕರ್ ದೊರೆ ದೇಶಾನೇ ಬಿಟ್ಟು... ಪರದೇಶಿ ಆಗ್ಬಿಟ್ನಲ್ಲ. ಈಗ ನೋಡು, ಬೀರ್ ಬೆಲೆ ಆಕಾಶಕ್ಕೆ ಹೋಗ್ಯೆತೆ. ಕುಡಿದವರೆಲ್ಲ ಆಕಾಶದಲ್ಲೇ ತೇಲಲಿ ಅಂತ."

"ಹೊತ್ತಾಯ್ತು ಬಾರಣ್ಣ..., ಮನೆ ಕಡೆ ಹೋಗೋಣ. ನಾವು ಕುಡಿಯೋ ಹೆಂಡ ಹುಳಿಯಾಗಿದ್ದರೆ ಜಾಸ್ತಿ ಅಂತ ಅನ್ಕೊಂಡ್ರೆ, ಹೆಂಡ್ತಿ ಹುಳಿ ಹಿಂಡಿದ್ರೆ ಬದುಕೇ ಬರ್ಖಾಸ್ತು ಅಷ್ಟೆ."

ರಂಗ, ಶಿವಣ್ಣ ಇವರಿಬ್ಬರ ಸಂಭಾಷಣೆ ಕೇಳ್ತಾ ದೂರದಲ್ಲಿ ಕೂತಿದ್ದ ಪತ್ರಕರ್ತರೊಬ್ಬರು ಮರುದಿನ ಪತ್ರಿಕೆಯಲ್ಲಿ ವರದಿ ಮಾಡಿಯೇಬಿಟ್ಟಿದ್ದರ.

"ಎಂ.ಜಿ. ರಸ್ತೆಯಲ್ಲಿ ಪ್ರಾರಂಭವಾಗಿರುವ 'ಲೇಡೀಸ್ ಪಬ್' ನಮ್ಮ ಸಂಸ್ಕೃತಿ ವಿನಾಶದ ಸೂಚನೆಯಾಗಿದೆ. ಇದನ್ನು ಮುಚ್ಚಲೇಬೇಕು ಎಂದು ನಗರಾದ್ಯಂತ ಪುರುಷರೆಲ್ಲ ಹೋರಾಟಕ್ಕಿಳಿದಿದ್ದಾರೆ. ಮುಂದಿನ ಗಲಭೆಗಳಿಗೆ ಅವಕಾಶ ಕೊಡದಂತೆ ಈ ಪಬ್ಬನ್ನು ಆದಷ್ಟು ಬೇಗ ಮುಚ್ಚಿಬಿಡುವುದು ಕ್ಷೇಮ."

ಪತ್ರಿಕೆಯ ವರದಿಯ ಪಕ್ಕ ಮಹಾತ್ಮ ಗಾಂಧೀಜಿಯವರ ಬೊಚ್ಚು ಬಾಯಿಯ ನಗುವಿನ ಚಿತ್ರ ಕೂಡ ಇತ್ತು.

***

ಕವಲ್ಪಟ್ಟೆ

– ಪೂರ್ಣಿಮ ಭಗವಾನ್

ಎರಡು ಪದಗಳು ಸೇರಿ ಆಗಿಹುದು ಒಂದು ಪದ
ಬರಿದೆ ಕವಲು ಎಂದರೆ ಟಿಸಿಲು ಅರ್ಥ
ಸರಳವದು ಕನ್ನಡವು ಚೆನ್ನಾಗಿ ಗೊತ್ತಿರಲು
ಅರಿಯೆ ಬಟ್ಟೆಯು ದಾರಿ ಕವಲುದಾರಿ

ಹೆದ್ದಾರಿಗಳಲಿ ಕಾಣುವ ಚಿಹ್ನೆಗುಪಯೋಗ
ಸದ್ದಿರದೆ ಆರಿಸುವ ಭವಿಷ್ಯದ ಹಾದಿ
ಸುದ್ದಿ ಪತ್ರಿಕೆಯಲ್ಲಿ ಕಂಡು ಬರುತಿದೆ ಇಂದು
ಗುದ್ದು ನೀಡುತ ಬೆಂಬಲಿಸಿರಿ ಪದವ.

***

ಮಕ್ಕಳ ಮೂರು ಕವನಗಳು

– ಶೀಲಾ ಅರಕಲಗೂಡು

ಹೋಟೆಲಲ್ಲಿ ಗುಂಡ

ಹೋಟೆಲಲ್ಲಿ ಬಂದು ಕುಳಿತ
ಗರ್ವದಿಂದ ಗುಂಡ
ಏ ಮಾಣಿ ಬಾರೊ ಇಲ್ಲಿ
ಕರೆದ ಜೋರಿನಿಂದ

ಏನು ಸ್ವಾಮಿ ಏನು ಬೇಕು
ಎನುತ ಬಂದ ಮಾಣಿ
ತಲೆಯನೆತ್ತದಂತೆ ಹೇಳ್ದ
ತಾರೊ ಒಂದು ಫೇಣಿ

ಫೇಣಿ ತಂದ ಮಾಣಿಯನ್ನು
ನೋಡಿ ಬೆಚ್ಚಿ ನಿಂತ
ಅಪ್ಪ ನೀನು ಇಂಥ ಕೆಲಸ
ನಂಬಲಾರೆನೆನುತ

ದುಡಿಮೆ ಯಾವುದಾದರೇನು
ತೋರು ನೀನು ಗೌರವ
ದುಡ್ಡಿನಿಂದ ಅಳೆಯಬೇಡ
ಗುಂಡ ನೀನು ಮಾನವ

ತಪ್ಪನರಿತ ನಮ್ಮ ಗುಂಡ
ವಿನಯವಂತನಾದನು
ಪ್ರೀತಿಯಿಂದಲೆಲ್ಲರನ್ನು
ಕಂಡು ಧನ್ಯನಾದನು

***

ಸೈನಿಕರಾಗುವೆವು

ದೊಡ್ಡವನಾದರೆ ಸೈನಿಕನಾಗುವೆ
ಹೇಳಿದ ಗುಂಡನು ಅಮ್ಮನಿಗೆ
ನಾನೂ ಮುಂದಕೆ ಸೈನಿಕಳಾಗುವೆ
ನುಡಿದಳು ಗೌರಿಯು ಅಪ್ಪನಿಗೆ

ಮಕ್ಕಳ ಮಾತನು ಕೇಳಿ ಪೋಷಕರು
ಸಂತಸಪಟ್ಟರು ಮನದಲ್ಲಿ
ಕೇಳಿರಿ ಮಕ್ಕಳೆ ಸೈನಿಕರಿಂದಲೆ
ಸುಖದಿಂದಿರುವೆವು ನಾವಿಲ್ಲಿ

ಚೀನಾ ಬಾಂಗ್ಲಾ ಪಾಕಿಸ್ತಾನದ
ಗಡಿಗಳ ಕಾಯುವ ಭಟರಿವರು
ಪ್ರಕೃತಿ ವಿಕೋಪಗಳಂತಹ ಸಮಯದಿ
ನಾಗರೀಕರನು ರಕ್ಷಿಪರು

ದುಷ್ಟ ಶಕ್ತಿಗಳ ಮೆಟ್ಟಿ ನಿಲ್ಲುತ್ತ
ದೇಶದ ರಕ್ಷಣೆ ಮಾಡುವರು
ಸ್ವಾರ್ಥವ ತೊರೆಯುತ ಮನೆಮಠ ಮರೆಯುವ
ಸೈನಿಕರಿಗೆ ಸಮ ಯಾರಿಹರು

ಎಲ್ಲಿಯೆ ಕಂಡರು ಗೌರವದಿಂದಲಿ
ಸೈನಿಕರಿಗೆ ಕೈ ಮುಗಿಯುತಿರಿ
ಆಗದೆ ಹೋದರೆ ಅಪಪ್ರಚಾರವ
ಮಾಡದೆ ತೆಪ್ಪಗೆ ಸುಮ್ಮನಿರಿ

***

ಪಾಠ ಕಲಿತ ಗುಂಡ

ಬಂದ ಗುಂಡ ವೇಗವಾಗಿ
ರಸ್ತೆ ತನ್ನದೆನ್ನುತ
ಏರಿ ಹೊರಟ ಸ್ಕೂಟರನ್ನು
ರಸ್ತೆ ನಿಯಮ ಮೀರುತ

ಬರುತಲಿರಲು ಸಿಕ್ಕಿಬಿದ್ದ
ಆರಕ್ಷಕ ಕೈಯಿಗೆ
ಕಷ್ಟಪಟ್ಟು ದುಡಿದ ಹಣವ
ದಂಡ ತೆತ್ತ ತಪ್ಪಿಗೆ

ಆದರೇನು ಭಂಡ ಗುಂಡ
ಕಲಿಯಲಿಲ್ಲ ಪಾಠವ
ಢಿಕ್ಕಿ ಹೊಡೆದ ವಾಹನಕ್ಕೆ
ಮೀರಿದಾಗ ವೇಗವ

ಕಾಲು ಮುರಿದು ಸೇರಿಕೊಂಡ
ಆಸ್ಪತ್ರೆಗೆ ಗುಂಡನು
ತಪ್ಪಿಗಾಗಿ ಹಳಹಳಿಸುತ
ಬಹಳವಾಗಿ ಅತ್ತನು

ನಿಯಮ ಮೀರಬಾರದೆಂದು
ಕಲಿತ ಪಾಠ ಗುಂಡನು
ತಪ್ಪಿ ನಡೆಯೆ ಸಂಚಕಾರ
ಜೀವಕೆಂದು ಅರಿತನು

***

ನನ್ನ ಮಗಳಿನ್ನೂ ಮಗುವೆ

– ಗೋಪಿನಾಥ್

"ಚಿಕ್ಕಪ್ಪ, ಯಾಮಿನಿ ಏನಾದರೂ ಬರೆದಿಟ್ಟಿದ್ದಾಳಾ, ಹುಡುಕಿದಿರಾ" ಅಂತಲೇ ಒಳಗೆ ಬಂದ ಮೋಹಿತ್.

"ಏನು ಹುಡುಕುವುದು ಮೋಹಿತ್, ಅವಳು ಏನೊಂದೂ ಬರೆದಿಟ್ಟಿಲ್ಲ. ರೂಮಿನಲ್ಲಿ ಒಂದು ಕಾಗದವೂ ಕಾಣುತ್ತಿಲ್ಲ. ಬೆಳೆದ ಮಗಳು ಕಾಣುತ್ತಿಲ್ಲವೆಂದರೆ ಏನೆಂದು ತಿಳಿಯಲಿ? ಪ್ರೇಮಿಸಿದವನ ಜೊತೆಗೆ ಓಡಿ ಹೋಗಿದ್ದಾ , ಕಿಡ್ನಾಪ್ ಮಾಡಿದ್ದಾರಾ, ತಂದೆಗೆ ಹೇಳಿಕೊಳ್ಳಲಾಗದ ಅಸಹಾಯಕತೆಯಿಂದ ಏನಾದರೂ ಆತ್ಮಹತ್ಯೆ... ಕ್ಷಣಕ್ಕೊಂದು ಯೋಚನೆಯಿಂದ ಹುಚ್ಚು ಹಿಡಿಯುವ ಹಾಗಾಗಿದೆ" ಎಂದರು ಚಂದ್ರಪ್ಪ.

"ಅಲ್ಲ ಚಿಕ್ಕಪ್ಪ, ನಾವೆಂತ ಪೆದ್ದು.. ಕಾಗದ ಏಕೆ ಬರೆದಿಡ್ತಾಳೆ ಮೊಬೈಲಿಂದ ಒಂದು ಮೆಸೇಜ್ ಕಳಿಸಬಹುದಲ್ವಾ. ಇನ್ನೂ ಹಳೆಕಾಲದ ಯೋಚನೆ ಬಿಟ್ಟಿಲ್ಲ ನಾವು"

"ಮೋಹಿತ್, ತಮಾಷೆ ಬೇಡ.. ಅವಳೆಲ್ಲಿಗೆ ಹೋಗಿರ್ತಾ , ಪಾಪದ ಹುಡುಗಿ. ಅವನೇ ಲಂಕೇಶ ಇವಳ ತಲೆ ಕೆಡಸಿರ್ತಾನೆ. ಅವಳಿನ್ನೂ ಮಗುವಿನ ಹಾಗೆ ಕಣೋ, ನನ್ನ ಕಣ್ಣಲ್ಲಿ ಅವಳಿನ್ನೂ ಮಗುವೆ, ಅವಳಿಗೆ ಒಂದೂ ಗೊತ್ತಾಗಲ್ಲ"

"ಚಿಕ್ಕಪ್ಪ, ಇದನ್ನೇ ಕುರುಡು ಪ್ರೇಮ ಅನ್ನೋದು. ಅವಳಿಗೆ ಇಪ್ಪತ್ತನಾಲ್ಕು ವರ್ಷ ವಯಸ್ಸು. ನೀವು ತಿಳಿದ ಹಾಗೆ ಮಗುವಲ್ಲ, ಮಗು ಪಡೆಯುವ ವಯಸ್ಸಾಗಿದೆ. ಅವಳು ತಿಳಿದೇ ಲವ್ ಮಾಡಿದ್ದಾಳೆ. ಲಂಕೇಶನದೇನು ತಪ್ಪಿಲ್ಲ, ಎರಡು ಜೊತೆ ಕಣ್ಣುಗಳು ಮಿಲನವಾದರೇನೇ ಪ್ರೀತಿ ಹುಟ್ಟೋದು"

"ಮೋಹಿತ್, ಲಂಕೇಶ ಊರಿಗೇನಾದರು ಕರೆದುಕೊಂಡು ಹೋಗಿರಬಹುದಲ್ವಾ ತಂದೆ ಮನೆಗೆ, ನನಗೆ ಹಾಗೆನಿಸುತ್ತೆ"

"ಅದೇಕೆ ಬಂತು ನಿಮಗೆ ಅನುಮಾನ? ಯಾರು ಹೇಳಿದರು"

"ಪ್ರಶ್ನೆಗಳು ಬೇಡ ಮೋಹಿತ್, ನನಗೆ ಆತಂಕ ಹೆಚ್ಚಾಗುತ್ತಿದೆ. ಮೊದಲು ಏನಾದರು ಸುಳಿವು ಸಿಗಬೇಕು ನೋಡು ಮತ್ತೆ ಎದುರು ಮನೆ ಸಾನ್ವಿ ಹೇಳಿದಳು.."

"ಏನಂತ?"

"ಅಂಕಲ್ ಯಾಮಿನಿ ಮತ್ತು ಲಂಕೇಶ್ ತುಂಬ ಕ್ಲೋಸ್, ಅವರು ಊರೆಲ್ಲ ಓಡಾಡಿದ್ದಾರೆ ಅವಳು ಲಂಕೇಶನ್ನ ಲವ್ ಮಾಡಿದ್ದಳು, ನಿಮಗೆ ಹೇಳಿಲ್ವಾ?"

"ಅಲ್ಲಮ್ಮ ನೀ ಹೇಳೋದು ನಿಜವೇನಮ್ಮ?"

"ಅಂಕಲ್ ಒಂದು ವಿಷಯ ಹೇಳತ್ತೀನಿ ಬೇಜಾರು ಮಾಡಿಕೊಳ್ಳಬೇಡಿ.. ಎಂದು ಯಾಮಿನಿನೇ ಹೇಳಿದ್ದು.. "ನಮ್ಮಪ್ಪ ನನ್ನ ವಿಷಯ ನಿನ್ನ ಕೇಳಿದರೆ ಸತ್ಯ ಹೇಳಿಬಿಡು" ಎಂದಿದ್ದಳು.

"ಅಲ್ಲಮ್ಮ ಸಾನ್ವಿ, ಎರಡು ದಿನವಾದ ಮೇಲೆ ಹೇಳ್ತಿದ್ದೀಯಲ್ಲ., .ಅವಳು ಹೋದ ರಾತ್ರಿಯೇ ಹೇಳಬಾರದಿತ್ತ?"

"ಅಂಕಲ್ ಹಾಗೆ ಮಾಡಿದರೆ ಅವಳಿಗೆ ಮೋಸ ಮಾಡಿದ ಹಾಗಾಗುತ್ತಲ್ವಾ"

"ಸರಿ ಚಿಕ್ಕಪ್ಪ ಅವನ ಊರು ಯಾವುದು ಗೊತ್ತಾ"

"ಸಾನ್ವಿಯನ್ನು ಕೇಳಿಬರ್ತೀನಿ.. ಈಗಲೇ ಹೋರಡೋಣ ನಮ್ ಕಾರಲ್ಲಿ"

"ಚಿಕ್ಕಪ್ಪ, ಯಾವ ಊರಂತೆ. ಸಾನ್ವಿಯನ್ನೂ ಕರೆಯಬೇಕಿತ್ತು"

"ಅವಳು, ಯಾವುದೇ ಕಾರಣಕ್ಕೂ ನಿಮಗೆ ಸಹಾಯಮಾಡಲಾರೆ, ನಾನು ಅವರಿಬ್ಬರ ಹಿತೈಷಿ ನಾನು ನಿಮ್ಮ ಜೊತೆಗೆ ಕೈ ಜೋಡಿಸಲಾರೆ ಪ್ರೇಮಕ್ಕೇ ಜೈ" ಎಂದು ನನಗೇ ಹೇಳಿದಳು!"

"ಚಿಕ್ಕಪ್ಪ, ಅವನ ಊರು ಗುಂಡ್ಲುಪೇಟೆಯಾದರೆ ಎರಡೂವರೆ ಗಂಟೆಯಾದರು ಸಾಕು, ಹೋಗಿಬಿಡಬಹುದು. ಚಿಕ್ಕಪ್ಪ, ನನಗೊಂದು ಅನುಮಾನ. ಪ್ರೇಮ ಮಾಡುವವರಿಗೆ ಧೈರ್ಯವಿರಲ್ಲ. ಅವರಿಗೊಬ್ಬರು ಹುರಿದುಂಬಿಸೋಕೆ ಸ್ನೇಹಿತರಿರುತ್ತಾರೆ. ಆ ಸ್ನೇಹಿತೆ ಈ ಸಾನ್ವಿಯೇ ಯಾಕಾಗಿರಬಾರದು, ಅವಳ ಮಾತುಗಳು ಯಾಮಿನಿಯನ್ನು ಪ್ರಚೋದಿಸಿವೆ ಎನಿಸುತ್ತೆ. ಅದು ಸರಿ, ಸಾನ್ವಿ ಮತ್ತು ಯಾಮಿನಿ ಹೇಗೆ ಸ್ನೇಹಿತರು?"

"ಇದೇನೋ, ಹೀಗೆ ಕೇಳುತ್ತಿಯಲ್ಲ. ಹತ್ತಾರು ವರ್ಷದಿಂದ ನೀನೇ ಕಂಡಿರುವೆ ಅವಳು ನಮ್ಮಮನೆಗೆ ಬರೋದನ್ನ, ಇಬ್ಬರು ಒಂದೇ ವಯಸ್ಸಿನವರು, ಓದಿದ್ದು ಒಂದೇ ಕಾಲೇಜಿನಲ್ಲಿ. ಸಹಜವಾಗಿ ವಿದ್ಯಾಭ್ಯಾಸ ಮುಗಿದ ಮೇಲೆ ಕೆಲಸಕ್ಕೆ ಸೇರಿಕೊಂಡರು ಸ್ನೇಹ ಮುಂದುವರಿಯಿತು.."

"ಹಾಗಿದ್ದರೆ ಈ ಲಂಕೇಶನ ಎಂಟ್ರಿ ಹೇಗಾಯಿತು ಯಾಮಿನಿ ಬಾಳಲ್ಲಿ?"

"ಲಂಕೇಶ ಯಾಮಿನಿ ಆಫೀಸಿನಲ್ಲಿ ಅಸಿಸ್ಟೆಂಟ್ ಮ್ಯಾನೇಜರ್. ಹುಟ್ಟುಹಬ್ಬಕ್ಕೆ ಕರೆದಿದ್ದ. ಯಾಮಿನಿ, ಸಾನ್ವಿ ಇಬ್ಬರೂ ಹೋಗಿದ್ದರು .ಅವರ ಮನೆ ನಾಯಿ ಯಾಮಿನಿ ಲಂಕೇಶ ಇಬ್ಬರನ್ನು ಒಂದುಮಾಡಿರಬೇಕು ನೋಡು, ಇವಳಿಗೆ ನಾಯಿ ಕಂಡರೆ ಭಯ. ಅದು ಇವಳ ಹತ್ರಬಂದಿರಬೇಕು ಆಗ ಹೆದರಿದ ಇವಳನ್ನು ಅವನು ಒಲಿಸಿಕೊಂಡಿದ್ದಾನೆ"

"ಇದು ನಿಮ್ಮ ಕಲ್ಪನೆಯೇ, ನೀವು ಸ್ಕ್ರಿಪ್ಟ್ ರೈಟರ್ ಆಗಿದೀರಾ.. ಚೆನ್ನಾಗಿದೆ ಊಹೆ.. ಚಿಕ್ಕಪ್ಪ, ನಿಮಗೆ ಸುಮಾರಾಗಿ ಇಬ್ಬರ ವಿಷಯ ಗೊತ್ತಾಗಿತ್ತು. ಮತ್ತೇಕೆ ಈ ಹುಡುಕಾಟ, ವ್ಯಥೆ"

"ಹಾಗಲ್ಲ ಮೋಹಿತ್, ತಾಯಿ ಇಲ್ಲದ ಅವಳನ್ನು ನಾನೇ ತಾಯಿಯ ಹಾಗೆ ಬೆಳಸಿದೆ. .ಹತ್ತು ವರ್ಷದ ಹುಡುಗಿಯಾಗಿ ಬೆಳಸಬೇಕಿದ್ದರೆ ನಾನೆಷ್ಟು ಕಷ್ಟಪಟ್ಟಿದ್ದೇನೆ ಗೊತಾ? ಅಮ್ಮನಿಗೆ ಕೇಳುವಂತಹ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರವಿರುತ್ತಿರಲಿಲ್ಲ. ನಾನು ಅವಳಿಗಾಗಿ ಕೆಲ ವರ್ಷಗಳು ತಾಯಿಯ ಹಾಗೇ ಆಗಿದ್ದೆ. ನನ್ನೊಂದಿಗೆ ಅವಳು ಹಂಚಿಕೊಳ್ಳದ ವಿಷಯವಿರಲಿಲ್ಲ, ಈ ವಿಷಯ ಮಾತ್ರ ಹೀಗೇಕೆ ಮಾಡಿದಳು, ಎರಡು ದಿನ ನಾನು ಅತ್ತು ಕಣ್ಣಾಲಿಗಳು ಬರಿದಾಗಿವೆ. ನನ್ನೊಂದಿಗೆ ಹೇಳಿಕೊಂಡಿದ್ದರೆ"

"ನೀವು ಬೇಡ ಎಂದು ಬಿಟ್ಟರೆ, ಭಯವಿರಬೇಕು"

"ಇಲ್ಲ, ಅವಳಿಗಾಗಿ ನಾನು ಪ್ರತಿ ವಿಷಯದಲ್ಲೂ ರಾಜಿ ಮಾಡಿಕೊಳ್ಳುತ್ತೇನೆ. ಅವಳೇ ನನ್ನ ಸರ್ವಸ್ವ, ನಾನು ಅವಳನ್ನು ವಿರೋಧ ಮಾಡಲಾರೆ. ಆದರೂ ತಿಳಿಸದೆ ಓಡಿ ಹೋಗುವ ಪ್ರಮೇಯವೇನಿತ್ತು. ಒಂದು ಸಲ ಪ್ರಯತ್ನಿಸಬಹುದಿತ್ತು. ಈ ಮನೆಯಲ್ಲಿ

ಪ್ರತಿಯೊಂದು ಬೊಂಬೆಯೂ ಅವಳ ಬಾಲ್ಯ ನೆನಪಿಸುತ್ತೆ. ಅವಳನ್ನು ಬಿಟ್ಟು ಹೇಗೆ ಕಾಲ ಕಳೆಯುತ್ತೇನೆ ತಿಳಿಯುತ್ತಿಲ್ಲ", ಅಳಲಾರಂಭಿಸಿದರು ಚಂದ್ರಪ್ಪ.

"ಚಿಕ್ಕಪ್ಪ, ಸಮಾಧಾನ ಮಾಡಿಕೊಳ್ಳಿ. ನಿಮಗೆ ಯಾಮಿನಿ ಸಿಕ್ಕೇ ಸಿಗುತ್ತಾಳೆ. ಅವಳಿಗೂ ನಿಮ್ಮನ್ನು ಬಿಟ್ಟಿರೋಕೆ ಆಗಲ್ಲ, ಯೌವನದ ಹುಮ್ಮಸ್ಸು. ಹೆದರಿಕೆಯಿಂದ ನಿಮಗೆ ಹೇಳಿಲ್ಲ. ಒಂದು ಕ್ಷಣದಲ್ಲಿ ಪ್ರೀತಿಯೇ ಹೆಚ್ಚು ಎನಿಸಿಬಿಟ್ಟಿದೆ. ತಂದೆ ತಾಯಿ ಎಲ್ಲವೂ ನೀವೇ ಅವಳಿಗೆ. ಎಷ್ಟು ದಿನ ಇದ್ದಾಳು ನಿಮ್ಮನ್ನು ಬಿಟ್ಟು. ಕರು ಹಸುವನ್ನು ಹುಡುಕಿಕೊಂಡು ಬರುವ ಹಾಗೆ ಬಂದೇ ಬರುತ್ತಾಳೆ"

"ಇಲ್ಲಿ ಜಯರಾಮರಾವ್ ಯಲಹಂಕ ಅವರ ಮನೆ ಎಲ್ಲಿ ಬರುತ್ತೆ" ಕೇಳಿದ ಮೋಹಿತ್ ಒಂದು ಅಂಗಡಿಯಲ್ಲಿ. ಆಂಗಡಿಯಾತ ಮಾಹಿತಿ ಕೊಟ್ಟ.

ಚಂದ್ರಪ್ಪ, ಮೋಹಿತ್ ಜಯರಾಮರಾವ್ ಅವರ ಮನೆ ಹುಡುಕಿ ಹೋಗುವ ವೇಳೆಗೆ ಮಗಳು ಯಾಮಿನಿ ಆ ಮನೆಯಿಂದ ಅರಿಶಿನದ ನೀರು ಚೆಲ್ಲಲು ಹೊರಗೆ ಬಂದಿದ್ದಳು. ತಂದೆಯನ್ನು ಕಂಡು ಓಡಿಬಂದು ಬಿಕ್ಕಳಿಸುತ್ತ ಅಪ್ಪಿಕೊಂಡಳು..

"ಅಪ್ಪ, ನನ್ನಿಂದ ತಪ್ಪಾಯಿತು ನಿನ್ನ, ಬಿಟ್ಟು ಹೋಗಿದ್ದು. ನನ್ನ ಕ್ಷಮಿಸು .ನಿನ್ನ ಬಿಟ್ಟಿರೋದು ಇಷ್ಟೊಂದು ಕಷ್ಟ ಎಂದು ನನಗೆ ತಿಳಿದಿರಲಿಲ್ಲ, ಅಪ್ಪ ನನಗೆ ನೀನು ಬೇಕಪ್ಪ'' ಎಂದು ಮಗುವಿನ ಹಾಗೆ ಅಳುತ್ತ ಬಿಕ್ಕಳಿಸಿದಳು.

ಮಗಳನ್ನು ಎದೆಗವಿಚಿಕೊಂಡು, ''ಸಮಾಧಾನ ಮಾಡಿಕೋ ಮಗಳೇ. ಪ್ರತಿ ಜೀವಿಗೂ ಸಂಗಾತಿ ಬೇಕು, ನಿನಗೂ ಹಾಗೆನಿಸಿದರಲ್ಲಿ ತಪ್ಪೇನು ಇಲ್ಲ. ಅಳಬೇಡ ಮಗಳೇ, ನೀ ಅಳಬೇಡ ನಾ ನೋಡಲಾರೆ. ಮಗಳೆ, ನನ್ನ ಕೂಡ ಒಂದು ಮಾತು ಹೇಳಬಹುದಿತ್ತಲ್ವಾ ಏಕೆ ಹೀಗೆ ಮಾಡಿದೆ. ಅದೊಂದೆ ನನಗೆ ನೋವಾಗಿರುವುದು. ನಿನ್ನದೇನು ತಪ್ಪಿಲ್ಲ ಬಿಡು ಮಗ. ಹೆಣ್ಣು ಮಗು ಬೆಳದಾದ ಮೇಲೆ ತಂದೆಯಿಂದ ದೂರಾಗಬೇಕು. ಹೆತ್ತವರು ಕೊನೇವರೆಗೆ ನೋಡಿಕೊಳ್ಳಲಾಗಲ್ಲ. ಮಗಳ ಜವಾಬ್ದಾರಿಯನ್ನು ಅಳಿಯನಾದವನು ಹೊರಬೇಕು ಅದೇ ನಿಯಮ. ಮಗಳೇ ನಿನಗೆ ಒಳ್ಳೆಯದಾಗಲಿ'' ಎಂದು ಮಗಳು ಅಳಿಯನಿಗೆ ಹರಿಸಿದರು.

"ಅಪ್ಪ, ನೀವು ಮಾಡುವ ಸಾರು ತಿನ್ನದೆ ಎರಡು ಮೂರು ದಿನವಾಗಿದೆ ನಾಲಿಗೆ ಕೆಟ್ಟು. ನನಗೆ ಹುಚ್ಚು ಹಿಡಿಯುವ ಹಾಗಾಗಿದೆ. ಅಪ್ಪ ಬಂದುಬಿಡ್ತೀನಿ. ಕರೆದುಕೊಂಡು ಹೋಗಿ''

ಚಂದ್ರಪ್ಪ ಹೊಟ್ಟೆ ತುಂಬ ನಕ್ಕರು. "ನೋಡಿದೆಯಾ ಮೋಹಿತ್, ನಾ ಹೇಳಲಿಲ್ವಾ ಅವಳಿನ್ನೂ ಮಗೂಂತ"

***

ಶಾಂತ ಬೀರಿದ ಕಾಂತಿ

– ಪೂರ್ಣಿಮ ಭಗವಾನ್

ಪ್ರೇರಕನು ಮಂಜುನಾಥನು ಆಹ್ವಾನ ನೀಡಲಿಕೆ
ಕಾರಕರು ವೀರೇಂದ್ರ ಹೆಗ್ಗಡೆಯವರೂ
ಬಾರಿಸಿದರಲ್ಲಿ ಶಾಂತ ಮಹಿಳೆಯರ ಜಯಭೇರಿ
ಸೇರಿದರು ಆಸಕ್ತರು ಧರ್ಮಸ್ಥಳದಲಿ

ಆದರಿಸಿ ಸತ್ಕರಿಸಿ ಉಪಚರಿಸಿ ಆಲಿಕೆಯು
ಪ್ರಾಧಾನ್ಯ ಗುಣಕೆನುತ ಮಂಡಿಸಿದ ವಿಷಯ
ಮೋದದಲಿ ಆಲಿಸಿದ ಅಭಿಮಾನಿ ಬಳಗಕ್ಕೆ
ಭೇದ ಭಾವವನಳಿಸೊ ಸದವಕಾಶವದು

ದಿವ್ಯ ಸಾನ್ನಿಧ್ಯ ಭವ್ಯ ವೇದಿಕೆಯ ಅಂಗಳದಿ
ನವ್ಯ ಬೆಳಕನು ತೋರ್ದ ಸಾಹಿತ್ಯ ಮಹಿಳೆ
ಕಾವ್ಯ ಕನ್ನಿಕೆಯೆ ಧರೆಗಿಳಿದು ಬಂದಿಹ ತೆರದಿ
ಭವ್ಯತೆಗೆ ಮಾನ್ಯತೆಯು ಚಿರಕಾಲ ಹಸಿರು

ಸತ್ವ ಹೀರುತ ರಸಭರಿತ ವಾಙ್ಮಯದ ಝರಿಯು
ಸ್ವತ್ವವನು ಬೆಳೆಸುತಲಿ ವಿಷಯವನು ತಿಳಿಸಿ
ಸಾತ್ವಿಕತೆಯನು ಎಬ್ಬಿಸುತ ತಮವಳಿಸೊ ಕಲೆಯು
ಸಾತ್ವತಿಯ ವರಪುತ್ರಿ ಶಾಂತ ಮಂಗಲರು

ವೇದ ಕಾಲದ ಮಹಿಳೆಯರ ಸೂಕ್ತಗಳು
ಭೇದ ಕಲ್ಪಿಸದೆ ಅವಕಾಶವಿತ್ತೆನುತ
ಸೋದಾಹರಣೆ ನೀಡಿ ವಿವರಿಸಿದ ವೈಖರಿಗೆ
ಶೋಧವೆಷ್ಟಿರಬೇಕು ವಿಷಯ ಮಂಡಿಸಲು

ಸೂಕ್ತದಲಿ ಆತ್ರೇಯಿ ಇಂದ್ರಸ್ತುತಿಯ ಮಾಡಿ
ಯುಕ್ತ ವರನನು ಪಡೆದ ಘೋಷ ರಚನೆಗಳು
ಮುಕ್ತ ಮನಸಿನ ರಚನೆ ವಾಗಂಬ್ರಿಣಿಯ ಸೂಕ್ತ
ಶಕ್ತ ಬರಹವು ಅಕ್ಕ ಮಹದೇವಿಯದ್ದು.

(ಸಾತ್ವತಿ : ಭಾರತಿ)

***

ಅರುಣ ಕಿರಣ

– ಪೂರ್ಣಿಮ ಭಗವಾನ್

ಅರುಣ ಕಿರಣದ ಕಾಂತಿ ಜನಮನವ ಬೆಳಗುತಿದೆ
ತರುಣ ವೃದ್ಧರ ನಯನ ಅಂಕಣದ ಮೇಲೆ
ಬಿರಿದ ತಾವರೆ ಚೆಂದ ಪದಪುಂಜಕದರಂದ
ಮೆರೆಸಿಹರು ಕನ್ನಡದಿ ಮರೆತ ಪದವ

ಪದಚಿಂತಕರ ಒಲವು ಕನ್ನಡಕೆ ಭೂಷಣವು
ಕದಳಿ ಫಲ ನೈವೇದ್ಯ ಭುವನೇಶ್ವರಿಗೆ
ಸದಭಿರುಚಿ ಸುಜ್ಞಾನ ದರ್ಪಣದ ಸುಧೆಯಲ್ಲಿ
ನಿಧಿಯೊಂದರನುಭವವು ಓದುಗರಿಗೆ

ಸರಳ ಸುಂದರ ಪದದಿ ವಿವರಿಸುತ ಹಿರಿದರ್ಥ
ಚಿರನೂತನವದು ಜನಮಾನಸದಿ ನೆಲೆಸಿ
ತೆರೆಮರೆಗೆ ಸರಿದಂತ ಪದಗಳವು ನಿಲುಕುತ್ತ
ಅರಿವು ಮೂಡಿಸೊ ಗುರುಗೆ ವಂದನೆಗಳು .

***

ಮೋಜಿನ ಪ್ರಸಂಗಗಳು

– ಗಾಯತ್ರಿ ಮೂರ್ತಿ

ಜೀವನದಲ್ಲಿ ಕೆಲವು ಪ್ರಸಂಗಗಳು ನೆನಪಿಗೆ ಬಂದಾಗ ಮುಖದಲ್ಲಿ ತಾನಾಗೇ ನಸುನಗೆ ಮೂಡುತ್ತದೆ. ನನ್ನ ಜೀವನದಲ್ಲಿ ನಡೆದ ಅಂತಹ ಮೂರು ಪ್ರಸಂಗಗಳನ್ನು ಇಂದು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಡೆಂಟಿಸ್ಟ್ ಅಲ್ಲ, ಹಲ್ಲಿನ ಡಾಕ್ಟರ್!

೧೯೭೯-೮೦ರ ಸಮಯ ಇರಬಹುದು. ನನ್ನ ಮಗ ವಿಕ್ರಮ್ ಸುಮಾರು ಮೂರು ವರ್ಷ ವಯಸ್ಸಿನವನು. ಒಂದು ದಿನ ಹಲ್ಲುನೋವು ಎಂದು ಅಳತೊಡಗಿದ.

"ಎಲ್ಲಿ, ಏನಾಗಿದೆ ನೋಡ್ತೀನಿ" ಎಂದರೆ ಬಾಯಿ ಬಿಡಲೊಲ್ಲ. ಡೆಂಟಿಸ್ಟ್ ಬಳಿ ಅವನನ್ನು ಕರೆದೊಯ್ದೆ. ಅವರು ಬಳಸುವ ಕುರ್ಚಿ, ಅದರ ಮೇಲೆ ಅಳವಡಿಸಿದ ದೀಪ, ಕುರ್ಚಿಯ ಪಕ್ಕದ ಸ್ಟಾಂಡಿನಲ್ಲಿ ಇಟ್ಟಿರುವ ಆಯುಧಗಳು(!), ಇವು ಎಂತಹವರಿಗೂ ಹೆದರಿಕೆ ಉಂಟುಮಾಡುತ್ತವೆ. ಆದ್ದರಿಂದಲೇ ನಾನು ಸ್ವಲ್ಪ ಹಲ್ಲು ನೋವಿದ್ದರೂ, ಏನಾದರೂ ಮಾತ್ರೆ ತೆಗೆದುಕೊಂಡು ಆದಷ್ಟೂ ಡೆಂಟಿಸ್ಟ್ ಬಳಿ ಹೋಗುವುದನ್ನು ತಪ್ಪಿಸಿಕೊಳ್ಳುತ್ತೇನೆ. ಅಂತಹುದರಲ್ಲಿ ನನ್ನ ಮಗ ಚಿಕ್ಕವನು, ಅವನ ಪಾಡೇನು? ನೀವೇ ಯೋಚಿಸಿ. 'ಕುರ್ಚಿಯ ಮೇಲೆ ಕೂರಿಸಿ' ಎಂದು ಡಾಕ್ಟರ್ ಹೇಳಿದಾಗ ನಾನು ಹಿಂಜರಿಯುತ್ತಲೇ ಅವನನ್ನು ಕೂರಿಸಿದೆ. ಅವರೋ, ಅವನು ಕುಳಿತ ಕೂಡಲೇ ಕುರ್ಚಿಯನ್ನು ಎತ್ತರ ಮಾಡತೊಡಗಿದರು. ಮೊದಲೇ ಹೆದರಿದ್ದ ವಿಕ್ರಮ್ ಈಗಂತೂ ಹೆದರಿಕೆಯಿಂದ ಸೂರು ಕಿತ್ತುಹೋಗುವಂತೆ ಕಿರುಚತೊಡಗಿದ. 'ಸಮಾಧಾನ ಮಾಡೀಮ್ಮ' ಎಂದರು ಡಾಕ್ಟರ್. ನನ್ನ ಮಾತು ಮಗನ ಕಿವಿಯ ಮೇಲೆ ಬೀಳಲೇ ಇಲ್ಲ. 'ಇವನು ಹೀಗೆ ಕಿರುಚಿದರೆ ಟೆಸ್ಟ್ ಮಾಡಕ್ಕೆ ಆಗಲ್ಲ. ಕರೆದುಕೊಂಡು ಹೋಗಿ' ಎಂದರು ಡಾಕ್ಟರು. ಅವರೇನೋ ಹಾಗೆ ಹೇಳಿದರು. ಆದರೆ ನನ್ನ ಮಗನ ಸಮಸ್ಯೆ ಬಗೆಹರಿಯಲಿಲ್ಲವಲ್ಲ! ಅವನ ಹಲ್ಲು ನೋವು ಮುಂದುವರೆದಿತ್ತು. ಜೊತೆಗೆ ಅವನ ಅಸಹಕಾರ ಸಹ. ಇವನ ಸಮಸ್ಯೆಗೆ ಪರಿಹಾರ ಯೋಚಿಸುವುದೇ ನನ್ನ ಕೆಲಸವಾಯಿತು.

ಆಹಾ! ಹೊಳೆಯಿತು ಉಪಾಯ. ದೇವರೇ, ನನ್ನ ಉಪಾಯ ಫಲಿಸಲಿ ಎಂದು ಪ್ರಾರ್ಥಿಸಿದೆ. ನನ್ನ ಮಗನನ್ನು ಬಳಿ ಕೂರಿಸಿಕೊಂಡು, 'ಪುಟ್ಟ, ನಿನಗೆ ಯಾವ ಹಲ್ಲು ನೋಯ್ತಿದೆ ತೋರಿಸು ಮರಿ' ಎಂದೆ. ಅವನು, 'ನಾನು ಡೆಂಟಿಸ್ಟ್ ಹತ್ರ ಬರಲ್ಲ' ಎಂದು ಮತ್ತೆ ಅಳತೊಡಗಿದ. 'ಅಳಬೇಡ, ಡೆಂಟಿಸ್ಟ್ ಹತ್ರ ಕರೆದುಕೊಂಡು ಹೋಗಲ್ಲ. ಆಯ್ತಾ?' ಎಂದು ಸಮಾಧಾನ ಮಾಡಿ, 'ನಿನಗೆ ಜ್ವರ ಬಂದರೆ ಯಾರ ಹತ್ತಿರ ಹೋಗ್ತೀಯಾ?' ಎಂದು ಕೇಳಿದೆ. 'ಜ್ವರದ ಡಾಕ್ಟರ್ ಹತ್ತಿರ' ಎಂದು ಥಟ್ಟನೆ ಉತ್ತರ ಹೇಳಿದ. 'ಈಗ ನಿನಗೆ ಹಲ್ಲು ನೋವು ಬಂದಿದೆಯಲ್ಲ, ಹಲ್ಲಿನ ಡಾಕ್ಟರ್ ಹತ್ತಿರ ಹೋಗೋಣ ಬರ್ತೀಯಾ?" ಎಂದು ಕೇಳಿದೆ. 'ನಾನು ಡೆಂಟಿಸ್ಟ್ ಹತ್ರ ಬರಲ್ಲ' ಎಂದು ಮತ್ತೆ ರಾಗ ತೆಗೆದ. 'ಡೆಂಟಿಸ್ಟ್ ಅಲ್ಲ ಕಣೋ, ಹಲ್ಲಿನ ಡಾಕ್ಟರ್‌ಗೆ ತೋರಿಸ್ತೀನಿ ಬಾ' ಎಂದೆ. ಅವನಿಗೆ ಏನನ್ನಿಸಿತೋ, ಸರಿ, 'ಹಲ್ಲಿನ ಡಾಕ್ಟರ್ ಹತ್ತಿರ ಕರ್ಕೊಂಡು ಹೋಗು. ಬರ್ತೀನಿ' ಎಂದ. ಬದುಕಿದೆಯಾ ಬಡಜೀವ ಎಂದು ತಕ್ಷಣ ಮತ್ತೊಬ್ಬ ಡೆಂಟಿಸ್ಟ್, ಅಲ್ಲ ಹಲ್ಲಿನ ಡಾಕ್ಟರ್ ಬಳಿ ನನ್ನ ಮಗನನ್ನು ಕರೆದೊಯ್ದೆ.

ಆ ಡಾಕ್ಟರ್ ಅವರು ನನ್ನ ಮಗನನ್ನು ಡೆಂಟಿಸ್ಟ್ ಕುರ್ಚಿಯ ಮೇಲೆ ಕೂರಿಸದೆ, ಪ್ರೀತಿಯಿಂದ ಬಳಿಗೆ ಕರೆದು, 'ನಿಂಗೆ ಹಲ್ಲು ನೋಯ್ತಿದೆಯಾ ಮರಿ, ಎಲ್ಲಿ, ಯಾವ ಹಲ್ಲು ನೊಯತ್ತೆ ಅಂತ ನನಗೆ ತೋರಿಸ್ತೀಯಾ?' ಎಂದು ಮೃದುವಾಗಿ ಕೇಳಿದರು. ಆ ಹಲ್ಲಿನ ಡಾಕ್ಟರನ್ನು ಕಂಡು ನನ್ನ ಮಗ ಹೆದರಲಿಲ್ಲ. ಯಾವ ತೊಂದರೆಯೂ ಇಲ್ಲದೆ, ಡಾಕ್ಟರ್ ನನ್ನ ಮಗನ ಹಲ್ಲಿನ ಪರೀಕ್ಷೆ ಮಾಡಿ, ನೋವು ಬಂದಿರುವುದು ಹಲ್ಲಿನ ತೊಂದರೆಯಿಂದಲ್ಲ, ವಸಡಿನಲ್ಲಿ ಸಣ್ಣ ಕುರುವಿನಿಂದ ಎಂದು ಹೇಳಿ ಹಚ್ಚಲು ಮುಲಾಮು ಕೊಟ್ಟು ಕಳುಹಿಸಿದರು. ಒಂದೆರಡು ದಿನಗಳಲ್ಲಿ ಅವನ ಹಲ್ಲು ನೋವು ಮಾಯವಾಯಿತು.

ಅಂತೂ, 'ಅಳಿಯ ಅಲ್ಲ ಮಗಳ ಗಂಡ' ಅನ್ನುವ ರೀತಿಯಲ್ಲಿ ಡೆಂಟಿಸ್ಟ್ ಅಲ್ಲ, ಹಲ್ಲಿನ ಡಾಕ್ಟರ್ ಎಂದು ಏಮಾರಿಸಿ ನನ್ನ ಮಗನಿಗೆ ಹಲ್ಲು ಚಿಕಿತ್ಸೆ ಮಾಡಿಸಿ, ನಿಟ್ಟುಸಿರು ಬಿಟ್ಟೆ.

***

ಮೊದಲೇ ಹೇಳಬಾರದಾ?

೨೦೦೪. ನನ್ನ ಮಗನ ಲಗ್ನಪತ್ರಿಕೆ ಸಮಾರಂಭ. ಅದ್ದೂರಿ ಎನ್ನಲಾಗದಿದ್ದರೂ ನಾವಂದುಕೊಂಡಂತೆ ಸರಳ ಸಮಾರಂಭವೂ ಆಗಿರಲಿಲ್ಲ. ಏಕೆಂದರೆ ನಾವು ಮಾಡುತ್ತಿರುವ ಮೊದಲ ಮದುವೆಗೆ ಸಂಬಂಧಪಟ್ಟ ಶುಭ ಸಂದರ್ಭ. ಹೀಗಾಗಿ ಹೆಣ್ಣಿನ ಕಡೆಯವರು ಮತ್ತು ನಾವು, ನಮ್ಮ ಬಂಧುಮಿತ್ರರನ್ನು ಆಹ್ವಾನಿಸಿದ್ದೆವು. ಭಾನುವಾರವಾದ್ದರಿಂದ ಜನ ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಿದ್ದರು ಸಹ.

ಅಂದು ನಮ್ಮ ಮಿತ್ರರಾದ ಹಾಗೂ ನನ್ನ ಮಗನ ಗೆಳೆಯನ ತಾಯಿ ಶಾರದಮ್ಮ ಸಹ ಬಂದಿದ್ದರು.

ಸರಿ, ಅವರು ನನ್ನ ಮಗ ಮತ್ತು ಅವನ ಭಾವೀ ಪತ್ನಿಯನ್ನು ಅಭಿನಂದಿಸಿ, ನಂತರ ''ಅಲ್ಲಪ್ಪ, ಮೊನ್ನೆ ನೀನು ನಮ್ಮ ಬಂದಾಗ ಮನೇಲಿ ಕೇಸರೀಭಾತು ತಿಂದೆಯಲ್ಲ, ಹೇಗಿತ್ತು?'' ಎಂದರು. ಅಲ್ಲಿಯೇ ನಿಂತಿದ್ದ ನನಗೆ ಆಶ್ಚರ್ಯ! ಇದೇನು, ಹೀಗೆ ಕೇಳ್ತಿದಾರಲ್ಲ. ಕೇಸರೀಭಾತು ಚೆನ್ನಾಗೇ ಇರತ್ತೆ. ಆ ವಿಷಯ ಇಲ್ಲಿ ಅಪ್ರಸ್ತುತ ಅಲ್ಲವೇ? ಎನ್ನಿಸಿತು.

“ಚೆನ್ನಾಗೇ ಇತ್ತಲ್ಲ'' ಎಂದ ನನ್ನ ಮಗ ನಗುತ್ತ.

“ಸಕ್ಕರೆ ಹಾಕದ ಕೇಸರೀಭಾತು ಅದು ಹೇಗೆ ಚೆನ್ನಾಗಿರಕ್ಕೆ ಸಾಧ್ಯ? ಮೊದಲೇ ಹೇಳಬಾರದಾ? ತಟ್ಟೆಗೆ ಸಕ್ಕರೆ ಹಾಕ್ತಿದ್ದೆ. ಅದು ಹೇಗಪ್ಪ ತಿಂದೆ ಆ ಸಪ್ಪೆ ರವೇನಾ?” ಎಂದು ಕೇಳಿದರು.

ನನ್ನ ಮಗ ನಗುತ್ತ, ''ಅದು ನನಗೆ ಗೊತ್ತಾಗಿದ್ರೆ ತಾನೇ ನಿಮಗೆ ಹೇಳಕ್ಕೆ?''ಎಂದು ಹೇಳಿದಾಗ ಅವರು ಸಹ ನಗುತ್ತ, ''ಮದುವೆ ಆಗ್ತಿದೀನಿ ಅನ್ನೋ ಸಂಭ್ರಮದಲ್ಲಿ ನಿನಗೆ ಎಲ್ಲವೂ ಸಿಹಿಯಾಗೇ ಇರತ್ತೆ. ನೀವೇನಂತೀರೀ?'' ಎಂದು ನನ್ನ ಕಡೆ ನೋಡಿದರು. ನಾನು, ''ನೀವು ಹೇಳೋದು ನಿಜ.'' ಎಂದು ನಗುತ್ತಾ ಅವರ ಮಾತು ಸಮರ್ಥಿಸಿದೆ.

ನಡೆದದ್ದಿಷ್ಟು. ನನ್ನ ಮಗ ತನ್ನ ಲಗ್ನಪತ್ರಿಕೆ ಸಮಾರಂಭಕ್ಕೆ ಆಹ್ವಾನಿಸಲು ಅವರ ಮನೆಗೆ ಹೋಗಿದ್ದ. ಅವರು ಕೇಸರೀಭಾತು ಮಾಡಿ ಕೊಟ್ಟರು. ಆದರೆ ಆತುರದಲ್ಲಿ ಸಕ್ಕರೆ ಹಾಕಲು ಮರೆತಿದ್ದರು. ತನಗಾಗಿಯೇ ಎಂದು ಪ್ರೀತಿಯಿಂದ ಮಾಡಿಕೊಟ್ಟ ಕೇಸರೀಭಾತಿಗೆ, ನೀವು ಸಕ್ಕರೆ ಹಾಕುವುದು ಮರೆತಿದ್ದೀರಾ ಎಂದರೆ ಅವರಿಗೆ ಬೇಸರವಾಗುವುದು ಎಂದು ನನ್ನ ಮಗ ಅವರು ಕೊಟ್ಟಿದ್ದನ್ನು ಕಮಕ್ ಕಿಮಕ್ ಎನ್ನದೆ ತಿಂದು ಬಂದಿದ್ದ. ***

ಬಸ್, ಏಕ್ ಲೋಟಾ ದೂಧ್

೨೦೧೧ರಲ್ಲಿ ನನ್ನ ಮಗಳ ನಾದಿನಿಯ ಮದುವೆ ಸಮಾರಂಭದಲ್ಲಿ ಪಾಲ್ಗೊಳ್ಳಲು ಉತ್ತರಪ್ರದೇಶದ ಗಜರೋಲ ಎಂಬಲ್ಲಿಗೆ ಹೋಗಿದ್ದೆವು. ಮದುವೆ ಅರ್ಧರಾತ್ರಿ ೨ ಗಂಟೆಯಿಂದ ೪ ಗಂಟೆಯ ಒಳಗೆ ಸಲ್ಲುವ ಶುಭಲಗ್ನದಲ್ಲಿ(!) ಇಲ್ಲಿ ನಾವು ಅಂತಹುದನ್ನು ಕಂಡು, ಕೇಳರಿಯೆವು. ಆದರೆ ಉತ್ತರ ಭಾರತದಲ್ಲಿ ಅದು ಸಾಮಾನ್ಯ. ನಾವು ತೂಕಡಿಸುತ್ತ ಮದುವೆ ಕಲಾಪ ಗಳಲ್ಲಿ ಪಾಲ್ಗೊಂಡಿದ್ದಾಯಿತೆನ್ನಿ.

ಮರುದಿನ ಎಲ್ಲರೂ ರೈಲಿನಲ್ಲಿ ಲಕ್ನೋಗೆ ನನ್ನ ಮಗಳ ಅತ್ತೆ ಮನೆಗೆ ಪ್ರಯಾಣ ಮಾಡಬೇಕಾಗಿತ್ತು. ರಾತ್ರಿ ಹನ್ನೊಂದಕ್ಕೆ ರೈಲು ಬರುವುದಿತ್ತು. ಎಲ್ಲರೂ ಹತ್ತೂವರೆಯ ವೇಳೆಗೆ ರೈಲ್ವೆ ನಿಲ್ದಾಣಕ್ಕೆ ಬಂದು ರೈಲಿಗಾಗಿ ಕಾಯುತ್ತ ಕುಳಿತಿದ್ದಾಗ ನಡೆದದ್ದು. ನಮ್ಮ ಜೊತೆಗಿದ್ದವರು ಹಿಂದಿ ಬಾಂಧವರು. ಅವರಿಗೆ ಬರುತ್ತಿದ್ದುದು ಅದೊಂದೇ ಭಾಷೆ! ಜೊತೆಗಿದ್ದಾಗ ಮಾತು ಹತ್ತಾರು ವಿಷಯಗಳ ಕಡೆ ಹರಿಯುವುದು ಮಾಮೂಲು. ಎಲ್ಲಿಂದೆಲ್ಲಿಗೋ ಹರಿಯುತ್ತಿದ್ದ ಮಾತಿನ ಲಹರಿ ಒಪ್ಪೊತ್ತು ಊಟದ ಕಡೆ ತಿರುಗಿತು. ನಾನು ಉತ್ಸಾಹದಿಂದ ಶನಿವಾರ ಹಾಗೂ ಸೋಮವಾರ ನಾನು ಒಪ್ಪೊತ್ತು ಊಟ ಮಾಡುತ್ತೇನೆ ಎಂದು ಹೇಳಿದೆ. ರಾತ್ರಿ ಫಲಾಹಾರ

ಮಾಡುತ್ತೀರಾ ಎಂದು ಪ್ರಶ್ನೆ ಕೇಳಿದರು. ನಾನು, 'ಇಲ್ಲ ಹಣ್ಣು ತಿಂದು ಒಂದು ಲೋಟ ಹಾಲು ಕುಡಿಯುತ್ತೇನೆ, ಅಷ್ಟೆ. ಅದೇ ನನ್ನ ಫಲಾಹಾರ,' ಎಂದು ಗಮ್ಮತ್ತಾಗಿ ಹೇಳಿದೆ. ಅಲ್ಲಿದ್ದವರೆಲ್ಲ ಪಕಪಕ ನಗತೊಡಗಿದರು, 'ಬಸ್, ಆಪ್ ಏಕ್ ಲೋಟ ದೂಧ್ ಪೀತೇ ಹೈ' ಎಂದು ಕೇಳಿದರು. ನಾನು ಹೇಳಿದ್ದರಲ್ಲಿ ತಪ್ಪೇನಿದೆ? ಅವರೇಕೆ ನಗುತ್ತಾರೋ ನನಗೆ ತಿಳಿಯದೆ ಗೊಂದಲಕ್ಕೆ ಒಳಗಾದೆ. 'ಹಾಂ, ಬಸ್ ಏಕ್ ಲೋಟಾ ದೂಧ್' ಎಂದು ಮತ್ತೆ ಹೇಳಿದೆ. ಅಷ್ಟರಲ್ಲಿ ಅಲ್ಲೇ ಸ್ವಲ್ಪ ದೂರದಲ್ಲಿ ನನ್ನ ಮಾತು ಕೇಳಿಸಿಕೊಂಡ ನನ್ನ ಮಗಳು ನನ್ನ ಸಹಾಯಕ್ಕೆ ಬಂದಳು. 'ಅಮ್ಮ, ಹಿಂದಿ ಭಾಷೆಯಲ್ಲಿ ಲೋಟ ಎಂದರೆ ಚೊಂಬು ಎಂದರ್ಥ ನೀನು ಹೇಳಿದ ಪ್ರಕಾರ ನೀನು ಒಂದು ಚೆಂಬು ಅಂದರೆ ಸುಮಾರು ಒಂದು ಲೀಟರ್ ಹಾಲು ಕುಡಿಯುತ್ತೀಯ ಎಂದಾಯಿತು. ಅದಕ್ಕೇ ನಗುತ್ತಿದ್ದಾರೆ, ಅದೂ ಅಲ್ಲದೆ ನೀನು, ಬಸ್ ಏಕ್ ಲೋಟ ದೂಧ್ ಪೀತಿ ಹು' ಎಂದು ಹೇಳಿದ್ದು ಇನ್ನೂ ಆಭಾಸವಾಯಿತು' ಎಂದು ಹೇಳಿದಾಗ ಎಲಾ, ಭಾಷಾಭಾಸವೇ ಎಂದು ಅವರೊಂದಿಗೆ ಕೂಡಿ ನಾನೂ ನಗತೊಡಗಿದೆ.

ಕನ್ನಡದಲ್ಲಿ ಲೋಟ ಎಂದರೆ ಸುಮಾರು ಇನ್ನೂರು ಮಿಲಿಲೀಟರ್ ಹಾಲು ಹಿಡಿಸುವ ಕಪ್ಪು. ಹಿಂದಿಯಲ್ಲಿ ಆ ಪದ ಇದೆ, ಆದರೆ ಅದರ ಚೊಂಬು ಎಂಬುದಂತೂ ಮೊದಲೇ ತಿಳಿಯದೆ ಹೋಗಿ ಹೀಗೆ ನಗೆಪಾಟಲಾಗೀಡಾದೆ. ಆದರೂ ಈ ಭಾಷಾಭಾಸಗಳು ಮೋಜಿನ ಪ್ರಸಂಗವಾಗಿ ನೆನಪಿಗೆ ಬಂದಾಗ ಮುಖದಲ್ಲಿ ನಸುನಗೆ ಮೂಡುತ್ತದೆ.

***

ಮಂಕಣಿ (ಮಕ್ಕರಿ, ಮಂಕರಿ)

– ಪೂರ್ಣಿಮ ಭಗವಾನ್

ಮಂಕಣಿಯ ಮಾಡಿ ನೈಸರ್ಗಿಕದ ವಸ್ತುವಲಿ
ಮಂಕರಿಯ ಉಪಯೋಗ ಸಾಗಾಣಿಕೆಯಲಿ
ಅಂಕು ಡೊಂಕಲು ಚಲಿಪ ಹೇಸರಗತ್ತೆ ಮೇಲೆ
ಸುಂಕವಿರದಿಹ ಸರಳ ಬಳಕೆ ವಸ್ತು

ಹೊಕ್ಕಿಹುದು ಮನೆಮನೆಯ ಅಂಗಳದಿ ನಲಿಯುತಲಿ
ಚಿಕ್ಕದಿರೆ ಬುಟ್ಟಿಯದು ದೊಡ್ಡದಿರೆ ಮಕರಿ
ಕುಕ್ಕೆ ಉಪಯೋಗ ತರಕಾರಿ ಸಂಗ್ರಹಕು ಆಗುವುದು
ಸೊಕ್ಕಿರದ ಪರಿಸರ ನೇಹಿಗನವ.

ಆಟಿಕೆಯು ಮಕ್ಕಳಿಗೆ ಮುಚ್ಚಳವು ಜೊತೆಗಿರಲು
ನೋಟದಲಿ ಸುಂದರವು ವರ್ಣಮಯವಿರಲು
ತೋಟದಲು ಬಳಕೆಯದು ವೈವಿಧ್ಯ ಉಪಯೋಗ
ಚೀಟಿ ಅಂಟಿಸಿ ಬಳಸಿ ಗುರುತಿಗಾಗಿ.

***

ಕೃತಿ ಪರಿಚಯ

"ಡಾ.ರಾಜ್ ಚಿತ್ರಗೀತೆಗಳಲ್ಲಿ ಬಾಂಧವ್ಯದ ನೆಲೆಗಳು"

ಲೇಖಕರು: ಡಾ|| ಡಿ. ಸತೀಶಚಂದ್ರ

(ಪ್ರಕಟಣೆ: ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾನಿಲಯ, ಹಂಪಿ; ಪುಟಗಳು: ೧೪+೨೩೦; ಬೆಲೆ: ರೂ. ೩೨೦)

– ಮಹಾಬಲ



ಇತ್ತೀಚೆಗೆ ಸಾಹಿತ್ಯ ಸಮಾರಂಭವೊಂದರಲ್ಲಿ ಪರಿಚಿತರಾದ ನಿವೃತ್ತ ಕನ್ನಡ ಅಧ್ಯಾಪಕ ಡಾ.ಸತೀಶ ಚಂದ್ರ ಅವರು ತಾವು ರಚಿಸಿದ ಕೃತಿ "ಡಾ. ರಾಜ್ ಚಿತ್ರಗೀತೆಗಳಲ್ಲಿ ಬಾಂಧವ್ಯದ ನೆಲೆಗಳು" ನನಗಿತ್ತು ನನ್ನ ಅಭಿಪ್ರಾಯ ಬಯಸಿದರು. ಸಿನಿಮಾವೂ ಸಾಹಿತ್ಯದ ಅವಿಭಾಜ್ಯ ಅಂಗ ಎಂದೇ ಭಾವಿಸಿರುವ ನಾನು ಕೃತಿಯನ್ನು ಸಂತಸದಿಂದಲೇ ಸ್ವೀಕರಿಸಿದೆ. ಅದರಲ್ಲೂ ನಟಸಾರ್ವಭೌಮ ರಾಜಕುಮಾರ್ ರವರ ಸಿನಿಮಾಗಳೆಂದರೆ ಪ್ರತಿಯೊಬ್ಬರಿಗೂ ಅಪ್ಯಾಯಮಾನವಾದುದ್ದೇ.

ತಮ್ಮ ಸಿನಿಮಾ ಬದುಕಿನಲ್ಲಿ ಎಲ್ಲ ಬಗೆಯ ಪಾತ್ರಗಳನ್ನೂ ಲೀಲಾಜಾಲವಾಗಿ ತನ್ಮಯತೆಯಿಂದ ಅಭಿನಯಿಸಿ ಜೀವಿಸುತ್ತಿದ್ದ ರಾಜಕುಮಾರ್ ಅವರ ಚಿತ್ರಗಳ ಗೀತೆಗಳಲ್ಲಿನ ಬಾಂಧವ್ಯದ ನೆಲೆಗಳನ್ನು ಲೇಖಕರು ಚಲನಚಿತ್ರಗಳ ಸ್ವರೂಪ, ಭಕ್ತಿ ಭಾವಗಳ ಮಧುರ ಸಂಬಂಧ, ಪ್ರಕೃತಿ–ಮಾನವ ಸಂಬಂಧ, ನಾಡು ನುಡಿಯ ಸಂಬಂಧ, ಕೌಟುಂಬಿಕ ಬಾಂಧವ್ಯ, ಗುರು ಶಿಷ್ಯ ಬಾಂಧವ್ಯ, ಸಾಮಾಜಿಕ ಸಂಬಂಧ ಈ ಮುಂತಾದ ದೃಷ್ಟಿಕೋನಗಳಿಂದ ಸೋದಾಹರಣವಾಗಿ ಚರ್ಚಿಸಿದ್ದಾರೆ.

ಕೃತಿಯ ಪ್ರಾಸ್ತಾವಿಕ ಭಾಗದಲ್ಲಿ ಚಲನಚಿತ್ರ ನಡೆದು ಬಂದ ದಾರಿ, ರಾಜಕುಮಾರ್ ಚಿತ್ರಗಳಲ್ಲಿ ಕರ್ನಾಟಕದ ಸಂಸ್ಕೃತಿ, ಮಣ್ಣಿನ ಸೊಗಡು, ಸಾಹಿತ್ಯ ಮೌಲ್ಯಗಳೇ ಅಲ್ಲದೆ, ಇದುವರೆಗೆ ಡಾ.ರಾಜ್ ಕುರಿತು ಪ್ರಕಟವಾಗಿರುವ ಕೃತಿಗಳು, ಇವುಗಳನ್ನು ವಿಷದವಾಗಿ ವಿವರಿಸಿದ್ದಾರೆ. ಕನ್ನಡದ ಮೇರುನಟನನ್ನು ಕುರಿತು ಇಷ್ಟೊಂದು ಕೃತಿಗಳು ಪ್ರಕಟವಾಗಿರುವುದನ್ನು ತಿಳಿಯುವುದು ಯಾರಿಗಾದರೂ ಸಂತಸಕರವಾದ ವಿಷಯವೇ.

ಚಲನಚಿತ್ರಗಳಲ್ಲಿ ಗೀತೆಗಳ ಪಾತ್ರ ಹಾಗೂ ಪ್ರಭಾವಗಳನ್ನು ಚರ್ಚಿಸುತ್ತ ಲೇಖಕರು ಚಲನಚಿತ್ರ ಹಾಗೂ ಪ್ರೇಕ್ಷಕರ ನಡುವೆ ಅನುಸಂಧಾನ ಮಾಡುವ ಪಾತ್ರ ಗೀತೆಗಳದ್ದು ಎನ್ನುತ್ತ ಗ್ರಾಮಾಫೋನ್ ರಿಕಾರ್ಡ್, ಕ್ಯಾಸೆಟ್, ಸಿಡಿ, ಯೂಟ್ಯೂಬ್ ಮಾಧ್ಯಮಗಳು ಈ ನಿಟ್ಟಿನಲ್ಲಿ ವಹಿಸುತ್ತಾ ಬಂದಿರುವ ಪಾತ್ರವನ್ನು ವಿವರಿಸಿದ್ದಾರೆ.

ವಿವಿಧ ಕಾಲಘಟ್ಟಗಳಲ್ಲಿ ಚಿತ್ರಗೀತೆಗಳ ರಾಗ ಸಂಯೋಜನೆಯ ರೂವಾರಿಗಳಾದ ಸಂಗೀತ ನಿರ್ದೇಶಕರು, ಗಾಯಕರು ಮತ್ತು ರಚನೆಗಳಿಗೆ ಕಾರಣೀಭೂತರಾದ ಪೂರ್ವಸೂರಿಗಳ ಮಹತ್ವವನ್ನು ಲೇಖಕರು ನೆನೆಯುತ್ತಾರೆ.

ಲೇಖಕರು ತಾವು ವಿಂಗಡಿಸಿಕೊಂಡಿರುವ ವಿವಿಧ ಅಧ್ಯಾಯಗಳಿಗೆ ಯುಕ್ತವಾದ ರಾಜಕುಮಾರ್ ಚಿತ್ರಗಳ ಗೀತೆಗಳನ್ನು ಉದಾಹರಿಸಿ ಕೃತಿಗೆ ಸಮರ್ಥನೆ ಒದಗಿಸಿದ್ದಾರೆ. ಬೇಡರ ಕಣ್ಣಪ್ಪ ಚಿತ್ರದ 'ಶಿವಪ್ಪ ಕಾಯೋ ತಂದೆ', ಹರಿಭಕ್ತ ಚಿತ್ರದ 'ದೇವಾ

ದರುಶನವ ನೀಡೆಯಾ ಚಲವಾಂತು/ ಎನ್ನಮೇಲೆ ದರುಶನವ ನೀಡೆಯಾ' – ಇವು ಭಕ್ತಿಭಾವದ ಉದಾಹರಣೆಗಳಾದರೆ, ಪ್ರಕೃತಿ ಗೀತೆಗಳ ಉದಾಹರಣೆಯಾಗಿ ಪುನರ್ಜನ್ಮ ಚಿತ್ರದ 'ಹಕ್ಕಿ ಹಾಡು ಚಿಲಿಪಿಲಿ ರಾಗ', ಬಂಗಾರದ ಮನುಷ್ಯ ಚಿತ್ರದ 'ನಗುನಗುತಾ ನಲಿ ನಲಿ', ಕವಿರತ್ನ ಕಾಳೀದಾಸ ಚಿತ್ರದ 'ಬೆಳ್ಳಿ ಮೂಡಿತು ಕೋಳಿ ಕೂಗಿತು' ಇಂಥ ಅರ್ಥಪೂರ್ಣ ನಿದರ್ಶನಗಳನ್ನು ನೀಡಿದ್ದಾರೆ.

ನಾಡು, ನುಡಿ ಕುರಿತ ಗೀತೆಗಳ ಉದಾಹರಣೆಯಾಗಿ 'ಶರಣು ಕಾವೇರಿ ತಾಯೆ', 'ಕನ್ನಡವೇ ತಾಯ್ನುಡಿಯು ಕರುನಾಡು ತಾಯ್ನಾಡು', 'ಜೇನಿನ ಹೊಳೆಯೋ ಹಾಲಿನ ಮಳೆಯೋ', ಕೌಟುಂಬಿಕ ಬಾಂಧವ್ಯದ ನಿದರ್ಶನಗಳಾಗಿ 'ಅಮ್ಮ ನೀನು ನಮಗಾಗಿ ಸಾವಿರ ವರುಷ ಸುಖವಾಗಿ', 'ಹಾಡೊಂದ ಹಾಡುವೆ ನೀ ಕೇಳು ಮಗುವೆ', ಹಾಗೆಯೇ ಗುರುಶಿಷ್ಯ ಬಾಂಧವ್ಯದ ಕುರುಹಾಗಿ 'ಕಲಿಯಿರೊಂದು ಪಾಠವನ್ನು ಕನ್ನಡತಾಯ್ಮಕ್ಕಳೇ, ಕಲ್ಲ ಕಡೆದು ಮೂರ್ತಿ ಮಾಡುವೆನ್ನ ಪುಟ್ಟ ಶಿಲ್ಪಗಳೇ' –ಇಂಥ ನಿದರ್ಶನಗಳು ಇಲ್ಲಿವೆ.

ಒಟ್ಟಾರೆ ಲೇಖಕರು ತಾವು ಪರಿಕಲ್ಪಿಸಿರುವ ದೃಷ್ಟಿಕೋನಗಳಿಗೆ ಸಮರ್ಥವಾದ ನಿದರ್ಶನಗಳನ್ನು ನೀಡಿ ಕೃತಿಯ ಉದ್ದೇಶವನ್ನು ಸಾರ್ಥಕಗೊಳಿಸಿದ್ದಾರೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ "ನಾಡೋಜ ಡಾ.ರಾಜಕುಮಾರ್ ಅಧ್ಯಯನ ಪೀಠ"ಈ ಕೃತಿಯನ್ನು ಪ್ರಕಟಿಸಿದೆ. ಈ ಕೃತಿಯನ್ನು ಕಲಾಸಕ್ತರು ಓದಿ ಆನಂದಿಸುವುದೇ ಮೇರುನಟನಿಗೆ ನಾವು ಸಲ್ಲಿಸಬಹುದಾದ ಉತ್ತಮ ನುಡಿ ನಮನ.

***

ಎರಡು ಕವನಗಳು

–ಪೂರ್ಣಿಮ ಭಗವಾನ್

ನಡುಮನೆ

ದೇಗುಲವು ಮನೆಯದುವೆ ನಡುಮನೆಯ ಸಡಗರದಿ
ಸಾಗುವರು ನಿಶ್ಚಯದಿ ಮಂದಿ ಅದರೊಳಗೆ
ಬೀಗಲಿಕಲಂಕಾರ ಉಪಕರಣ ಸಾಮಗ್ರಿ
ಯೋಗ ನಿರ್ವಹಣೆಯಲಿರೆ ಜಾಣತನ

ನಡುಮನೆಯ ವಾಸ್ತವ್ಯ ಅಪರೂಪವಾಗುತಿದೆ
ಪಡಸಾಲೆ ದೊಡ್ಡದಿರೆ ಉಪಯೋಗವಂದು
ಕಡಿಮೆ ಸಮಯವು ಎನುತ ಕೂರುವುದೆ ಇಲ್ಲವಲಿ
ಬಡಿವಾರ ತೋರಿಕೆಗೆ ಸೀಮಿತವದು.

***

ಧೂಳಿಪಟ

ಹಲವಾರು ಅರ್ಥದಲಿ ಬಳಕೆಯದು ಧೂಳಿಪಟ
ಕೆಲವೆಡೆಗೆ ನಾಶವೆನೊ ಅರ್ಥದಲಿ ಬಳಕೆ
ಸುಲಭದಲಿ ಬದಲಿಸಿದೆ ದಾಖಲೆಯ ಸೃಷ್ಟಿಗದು
ಗಲಿಬಿಲಿಗೆ ಅವಕಾಶ ಬೇಡವಲ್ಲಿ

ಪಟಲವೆಂದರೆ ಗುಂಪು ರಾಶಿ ಎಂಬರ್ಥವಿದೆ
ಚಟುವಟಿಕೆ ಹೆಚ್ಚಿಸುತ ದಾಖಲೆಯ ಬರೆವ
ಪಟುವ ಸಾಧನೆಗು ಉಪಯೋಗ ಧೂಳಿಪಟವದು
ಪುಟಿದೇಳ್ವ ಕನ್ನಡವ ಬಳಸೋಣವೆ.

***

ಕೃತಿ ಪರಿಚಯ

ಶ್ರೀಮತಿ ಸರೋಜಾ ಪ್ರಕಾಶ ಅವರ ಕೃತಿ

'ವಿಜ್ಞಾನದ ಜಾಡು ಬದಲಿಸಿದ ಜಾಣೆಯರು'

– ಜಿ.ವಿ. ನಿರ್ಮಲ

ನೊಬೆಲ್ ಪ್ರಶಸ್ತಿಗಳ ತವರೂರಾದ ಸ್ವೀಡನ್ ದೇಶದ ಸ್ಟಾಕ್‌ಹೋಮ್‌ಗೆ ಪಯಣಿಸಿರುವ ಸರೋಜ, ನೊಬೆಲ್ ಪ್ರಶಸ್ತಿ ಸಮಾರಂಭಕ್ಕೆ ಭೇಟಿ ನೀಡಿದ ನಂತರ ರಚಿಸಿರುವ ಕೃತಿ 'ವಿಜ್ಞಾನದ ಜಾಡು ಬದಲಿಸಿದ ಜಾಣೆಯರು'. ಮಹಿಳೆಯರ ಸಾಧನೆಗಳನ್ನು ಅಲಕ್ಷ್ಯಮಾಡುವುದು ಸರಿಯಲ್ಲ ಎನ್ನುವ ಸಂದೇಶವನ್ನು ನೀಡುವ ಪುಸ್ತಕದ ಶೀರ್ಷಿಕೆಯೇ ಆಕರ್ಷಕ ವಾಗಿರುವುದಲ್ಲದೆ, ಮಹಿಳೆಯರು ವಿಜ್ಞಾನಿಗಳಾದರೆ ಮಹತ್ತರ ಸಾಧನೆ ಗಳನ್ನು ಮಾಡಬಲ್ಲರು ಎಂದೂ ಘಂಟಾಘೋಷವಾಗಿ ಹೇಳುತ್ತದೆ.



ಈ ಹೊತ್ತಿಗೆಯಲ್ಲಿ ಸರೋಜರವರು ಮಹತ್ತರ ಸಾಧನೆಗಳನ್ನು ಮಾಡಿರುವ ಹದಿಮೂರು ಮಹಿಳೆಯರ ಸಾಧನೆಗಳನ್ನು ಪರಿಚಯಿಸಿದ್ದಾರೆ. ಈ ಮಹಿಳೆಯರು ತಮ್ಮ ತಮ್ಮ ಜೀವನದಲ್ಲಿ ಸಾಕಷ್ಟು ಕಷ್ಟಗಳನ್ನು ಎದುರಿಸುತ್ತಲೇ, ಕೆಲವೊಮ್ಮೆ ಸಂಸಾರದ ನೋವು-ನೊಗಗಳನ್ನು ಹೊರುತ್ತಲೇ ಮಾಡಿರುವ ಸಾಧನೆಗಳು ವಿಸ್ಮಯವನ್ನೂ ವಿಸ್ಮಯಕ್ಕೆ ದೂಡುವಂತಿವೆ. ಗಮನಿಸಿದಾಗ ವಿಜ್ಞಾನದಲ್ಲಿ ಮಾತ್ರವಲ್ಲದೆ ಬೇರೆಲ್ಲಾ ವಿಭಾಗಗಳಲ್ಲಿಯೂ ಮಹಿಳೆಯರಿಗೆ ದೊರೆಯುವ ಪ್ರಾಶಸ್ತ್ಯ ಕಡಿಮೆಯೇ ಎಂದು ಕಂಡುಬರುತ್ತದೆ. ಹದಿಮೂರು ಜನ ವಿಶ್ವಮಾನ್ಯ ಮಹಿಳೆಯರ ಬಗ್ಗೆ ಸಾಕಷ್ಟು ಮಾಹಿತಿಯನ್ನೂ, ಅವರ ಸಂಕ್ಷಿಪ್ತ ಜೀವನಗಾಥೆಯನ್ನೂ ಸ್ವಾರಸ್ಯಪೂರ್ಣವಾಗಿ ಕಟ್ಟಿಕೊಟ್ಟಿರುವ ಸರೋಜ ರವರು ಈ ಪುಸ್ತಕದಲ್ಲಿ ಜಾಣೆಯರ ಜಾಣತನವನ್ನು ಮುಕ್ತವಾಗಿ ತೆರೆದಿಟ್ಟಿದ್ದಾರೆ.

ಅವರು ಆಯ್ಕೆ ಮಾಡಿರುವ ಹದಿಮೂರು ಮಹಿಳಾ ವಿಜ್ಞಾನಿಗಳೆಂದರೆ –
ಹಲವಾರು ಬಗೆಯ ಕಿಣ್ವಗಳನ್ನು ರೂಪಿಸಿ, ಬಳಕೆ ಮಾಡಿಕೊಂಡು, ಸ್ವತಃ ಮಾರಕ ರೋಗವನ್ನು ಅನುಭವಿಸಿ, ಎದುರಿಸಿ ಗೆದ್ದ ನಂತರವೂ ಸಂಶೋಧನೆಗಳಲ್ಲಿ ತೊಡಗಿಕೊಂಡು ಅಮೆರಿಕದ ಹಲವಾರು ಉನ್ನತ ವೈಜ್ಞಾನಿಕ ಸಂಸ್ಥೆಗಳ ಸದಸ್ಯತ್ವ ಪಡೆದ ಫ್ರಾನ್ಸೆಸ್ ಅರ್ನಾಲ್ಡ್ ರವರು,

ವೈದ್ಯಕೀಯ ಪರೀಕ್ಷೆಗಳತ್ತ ಮುಖಮಾಡದೆಯೂ ವಿಶ್ವದ ಮಾರಕರೋಗವಾಗಿದ್ದ ಮಲೇರಿಯಾಕ್ಕೆ ಸೆಡ್ಡು ಹೊಡೆದು ದಿವ್ಯೌಷಧ ಕಂಡುಹಿಡಿದು, ಇಂಗ್ಲಿಷ್ ಭಾಷೆ ಕಲಿಯದೆಯೇ ನೊಬೆಲ್ ಪ್ರಶಸ್ತಿಗೆ ಭಾಜನರಾದ ಚೈನಾದ ತು ಯುಯು,

ಮಹಿಳೆಯರಿಗೆ ಉನ್ನತ ಶಿಕ್ಷಣ ಮರೀಚಿಕೆಯೇ ಆಗಿದ್ದ 1868ರ ಕಾಲದಲ್ಲಿ, ಆಕಾಶದತ್ತ ಮುಖ ಮಾಡದೆಯೇ ಭೂತಗನ್ನಡಿಯ ಮೂಲಕ ನಕ್ಷತ್ರಗಳ ಚಿತ್ರವನ್ನು ದಿಟ್ಟಿಸಿ ನೋಡಿ, ಅತ್ಯಂತ ಕಡಿಮೆ ಸಾಧನಗಳನ್ನು ಬಳಸಿ ವಿಶ್ವವೇ ಬೆರಗಾಗುವಂತಹ ನಿಯಮಗಳಿಗೆ ಬುನಾದಿ ಹಾಕಿದ ಅಮೆರಿಕಾದ ಹೆನ್ರಿಯಿಟಾ ಲೆವಿಟ್,

ಮಹಿಳಾ ವಿಜ್ಞಾನಿಯೆಂದ ಕೂಡಲೆ ಎಲ್ಲರಿಗೂ ನೆನಪಾಗುವ, ಮೊತ್ತಮೊದಲ ನೊಬೆಲ್ ಪ್ರಶಸ್ತಿ ವಿಜೇತೆ ಹಾಗೂ ಎರಡು ವಿಭಿನ್ನ ವಿಜ್ಞಾನ ಶಾಖೆಗಳಲ್ಲಿ ನೊಬೆಲ್ ಪಡೆದ ಮೇರಿ ಕ್ಯೂರಿ,

ತನ್ನ ತಾಯಿಗಿಂತ ತಾನೇನೂ ಕಡಿಮೆಯಿಲ್ಲ ಎಂದು ತಾಯಿಯ ಹಾದಿಯಲ್ಲೇ ಸಾಗಿ ನೊಬೆಲ್ ಪ್ರಶಸ್ತಿಗೆ ಪಾತ್ರರಾದ ಮಗಳು ಐರಿನ್ ಕ್ಯೂರಿ,

ಇಂದಿಗೂ ಜೀವಂತವಾಗಿರುವ, ಹಲವಾರು ಔಷಧಗಳಿಗೆ ಲಸಿಕೆಗಳ ತಯಾರಿಕೆಗೆ ಕಾರಣವಾಗಿ, ಅಪರೂಪದ ಗುಣಗಳನ್ನು ಹೊಂದಿರುವ 'ಹೀಲಾ ಸೆಲ್' ಗಳನ್ನು ಲೋಕಕ್ಕೆ ದಾನ ಮಾಡಿರುವ ಅಮೆರಿಕಾದ ವರ್ಜೀನಿಯಾದ ತಂಬಾಕು ತೋಟದಲ್ಲಿ ದುಡಿಮೆ ಮಾಡುತ್ತಿದ್ದ ಆಫ್ರಿಕನ್ ಮಹಿಳೆ ಹೆನ್ರಿಯೆಟಾ ಲ್ಯಾಕ್ಸ್,

ವಿಜ್ಞಾನದ ಜಾಡು ಬದಲಿಸಿದ ಜಾಣೆಯರಲ್ಲಿ ಭಾರತೀಯ ನಾರಿ ಇಲ್ಲವೇ ಎಂದು ಪ್ರಶ್ನಿಸುವುದಕ್ಕೆ ಮುಂಚೆಯೇ ಸರೋಜರವರು ಪರಿಚಯಿಸಿರುವ, ಪ್ರಧಾನಿ ಜವಾಹರಲಾಲ್ ನೆಹರೂರವರಿಂದ ಭಾರತಕ್ಕೆ ಆಹ್ವಾನಿಸಲ್ಪಟ್ಟ ಕೇರಳದ ಸಸ್ಯವಿಜ್ಞಾನಿ ಪದ್ಮಶ್ರೀ ಇ.ಕೆ. ಜಾನಕಿ ಅಮ್ಮಾಳ್,

ಚಿಂಪಾಂಜಿಗಳ ನಡವಳಿಕೆಗಳನ್ನು ತಿಳಿಯಲು ಕತ್ತಲ ಕಾಡಿನಲ್ಲಿ, ಅವುಗಳ ಜೊತೆಯಲ್ಲಿಯೇ ಮೂವತ್ತು ವರ್ಷಗಳ ಸುದೀರ್ಘ ಜೀವನ ಸಾಗಿಸಿದ ಜೇನ್ ಗುಡಾಲ್,

ಮುನ್ನೂರು ವರ್ಷಗಳಿಗೂ ಹಿಂದೆ, ವಿಜ್ಞಾನವನ್ನು ನಿಯಮಬದ್ಧವಾಗಿ ಅಧ್ಯಯನ ಮಾಡದೆ ಪ್ರಕೃತಿಯನ್ನು ಗಮನಿಸುತ್ತಲೇ, ಚಿತ್ರಗಳನ್ನು ಬಿಡಿಸುವ ಮೂಲಕ ಸಾಕಷ್ಟು ಮಾಹಿತಿಯನ್ನು ಕಲೆಹಾಕಿ, ಕಲೆಯ ಮೂಲಕವೇ ತಮ್ಮ ಅಸಾಧಾರಣ ಜ್ಞಾನವನ್ನು ಪಸರಿಸಿದ ಜರ್ಮನಿಯ ಫ್ರಾಂಕ್‌ಫರ್ಟ್ ಪ್ರದೇಶದಲ್ಲಿ ಜನಿಸಿದ ಸಹಜ ವಿಜ್ಞಾನಿ ಮರಿಯಾ ಸಿಬಿಲ್ಲಾ ಮೆರಿಯನ್,

ಜಗತ್ತಿನ ಪಳೆಯುಳಿಕೆಗಳನ್ನು ಶೋಧಿಸಿದ ಪ್ರಖ್ಯಾತಿ ಪಡೆದಿರುವ, ಬ್ರಿಟನ್ನಿನ ಕಡಲ ತೀರದಲ್ಲಿ ಕಡುಬಡತನದಲ್ಲಿ ಜನಿಸಿದ ಹೆಣ್ಣುಮಗಳು ಮೇರಿ ಅನ್ನಿಂಗ್,

ಜೊತೆಗಿದ್ದ ಸಂಶೋಧಕರೇ ಕಳವು ಮಾಡಿದ್ದರಿಂದ ವಿಶ್ವಮಾನ್ಯವಾದ ಡಿಎನ್‌ಎ ರಚನೆಯನ್ನು ಸ್ಪಷ್ಟಪಡಿಸುವಲ್ಲಿ ತಮ್ಮ ಪಾತ್ರವಿತ್ತೆಂದು ತಿಳಿಯದೆಯೇ, 38ನೆಯ ವಯಸ್ಸಿನಲ್ಲಿ ಮಾರಕ ರೋಗದಿಂದ ಬಳಲಿ, ಪ್ರಾಣತ್ಯಾಗ ಮಾಡಿದ ಲಂಡನ್ನಿನ, ಆಂಗ್ಲೋ-ಯಹೂದಿ ಜನಾಂಗದ ರೋಸಲಿಂಡ್ ಫ್ರಾಂಕ್ಲಿನ್,

ವಿಷಕಾರಿಯಾದ ಡಿಡಿಟಿ ಕೀಟನಾಶಕವನ್ನು ಅತಿಯಾಗಿ ಬಳಸಿ ಜಗತ್ತಿನ ಸಂತುಲನವನ್ನೇ ಬದಲಿಸಲು ಸಾಧ್ಯವೆಂದು ವಾದಿಸಿ ಗೆದ್ದ, ತಮ್ಮ ಬರಹಗಳ ಮೂಲಕವೇ ಪ್ರಸಿದ್ಧರಾದ ಅಮೆರಿಕದ ಪೆನ್ಸಿಲ್ವೇನಿಯಾದ ಸ್ಪ್ರಿಂಗ್‌ಡೇಲ್‌ನಲ್ಲಿ 1907ರಲ್ಲಿ ಜನಿಸಿದ ರೇಚಲ್ ಕಾರ್ಸನ್,

ತಮ್ಮ ಉಪಯೋಗಕ್ಕಾಗಿ ಮನೆಬಳಕೆಯ ವಸ್ತುಗಳನ್ನೇ ಉತ್ತಮಗೊಳಿಸುವ ಪ್ರಯತ್ನ ಮಾಡಿದ, 1819ರಲ್ಲಿ ಜನ್ಮತಾಳಿದ ಯೂನಿಸ್. ಆಕೆಯ ಗಂಡ ನ್ಯೂಟನ್ ಫೂಟ್. ಆಕೆಗೆ ಒತ್ತಾಸೆಯಾಗಿದ್ದರೂ ಮಹಿಳೆ ಎನ್ನುವ ಕಾರಣಕ್ಕೆ ಸಂಶೋಧನೆಗಳಲ್ಲಿ ಯೂನಿಸ್ ಪಾತ್ರವೇ ಪ್ರಮುಖವೆಂದು ಜನರಿಗೆ ಮುಟ್ಟಿಸದಿದ್ದದ್ದು ವಿಪರ್ಯಾಸವೆನಿಸಿದರೂ ಆ ಕಾಲದ ಪದ್ಧತಿಗೆ ಅನುಗುಣವಾಗಿತ್ತೆನ್ನುವುದನ್ನೂ ಒಪ್ಪಲೇಬೇಕು.

ಮೊತ್ತಮೊದಲಿಗೆ ಹದಿಮೂರು ಮಹಿಳಾ ವಿಜ್ಞಾನಿಗಳನ್ನು ಜಾಣೆಯರೆಂದು ಗುರುತಿಸಿರುವ ಸರೋಜರವರನ್ನು ಅಶುಭ ಸಂಖ್ಯೆ ಎಂದು ಪ್ರಪಂಚದಾದ್ಯಂತ ದೂರುವ, ದೂರದೂಡಿರುವ ಹದಿಮೂರು ಸಂಖ್ಯೆಯ ಅಡಿಯಲ್ಲಿಯೇ ಹದಿಮೂರು ಜಾಣೆಯರನ್ನು ಆಯ್ಕೆ ಮಾಡಿರುವುದು ಶ್ಲಾಘನೀಯವೆಂದು ಮೆಚ್ಚೋಣ. 'ಸೂಕ್ಷ್ಮ ಬದಲಾವಣೆಯನ್ನೂ ದಾಖಲಿಸುವ ಚುರುಕು ಕಣ್ಣು, ಚುರುಕು ಬುದ್ಧಿಯನ್ನು ಮಹಿಳೆಯರಲ್ಲಿ ಕಾಣಬಹುದು' ಎಂದು ಹೇಳಿರುವುದು ಮಹಿಳೆಯರಿಗೆ ಕೋಡು

ಮೂಡಿಸುವ ಸಾಹಸವೇ ಸೈ. ಹಣವಿಲ್ಲದೆ ಮೇರಿ ಕ್ಯೂರಿಯವರು ಪಟ್ಟ ಬವಣೆಗಳನ್ನು ಸರೋಜರವರು ವರ್ಣಿಸಿರುವುದನ್ನು ಓದಿದಾಗ ಮನಕರಗುತ್ತದೆ. ಮುಂದೆ ಸಾಂದರ್ಭಿಕವಾಗಿ ಪತಂಗ ಮತ್ತು ಪಾತರಗಿತ್ತಿಗಳಿಗಿರುವ ಭೇದವನ್ನೂ ಸರೋಜ ನೀಡಿದ್ದಾರೆ.

ಹಾಗೆಯೇ ಜರ್ಮನಿ ತನ್ನ ದೇಶದ ನೋಟಿನ ಮೇಲೂ ಮರಿಯಮ್‌ರವರ ಚಿತ್ರವನ್ನು ಮುದ್ರಿಸಿರುವುದನ್ನೂ ದಾಖಲಿಸಿದ್ದಾರೆ. ಹಲವಾರು ವಿಶಿಷ್ಟ ವಿಜ್ಞಾನಿಗಳ ಗಮನ ಸೆಳೆದ ಮರಿಯಮ್ ಚಿತ್ರಗಳು ಪ್ರಖ್ಯಾತ ಮ್ಯೂಸಿಯಂಗಳಲ್ಲಿ ಸ್ಥಾನ ಪಡೆದಿವೆ ಎಂದಾಗ ಮಹಿಳೆಯರಿಗೆ ಹೆಮ್ಮೆಯಾಗುವದಲ್ಲದೆ, ಸ್ಫೂರ್ತಿಯೂ ಸಹ. ಮುಂದೆ ಕಡುಬಡತನದಲ್ಲಿ ಜನಿಸಿದ ಹೆಣ್ಣುಮಗಳು ಮೇರಿ ಅನ್ನಿಂಗ್‌ರವರನ್ನು ಜಾಣೆಯರ ಗುಂಪಿಗೆ ಸೇರಿಸಿರುವ ಕೃತಿಕಾರರನ್ನು 'ಭೇಷ್' ಎನ್ನಲೇಬೇಕು. ರೇಚಲ್ ಕಾರ್ಸನ್, ಕ್ಲಿಯೋಪಾತ್ರ ನಂತರ ಅತಿ ಹೆಚ್ಚು ಪ್ರಭಾವ ಬೀರಿದ ಮಹಿಳೆ ಎನ್ನುವ ಸರೋಜರವರ ಹೇಳಿಕೆಯನ್ನು ಕಾಣುತ್ತಿದ್ದಂತೆ ಇವಳು ಮತ್ತೊಬ್ಬ ಧೈರ್ಯಶಾಲಿ ಸುಂದರಿ ಇರಬಹುದೆಂದೆನಿಸುವುದು ಸಹಜ. ವಾಸ್ತವದಲ್ಲಿ ರೇಚಲ್ ಕಾರ್ಸನ್ ಒಳ್ಳೆಯ ಬರಹಗಾರ್ತಿ, ನಿಸರ್ಗ ಪ್ರೇಮಿ ಎಂದು ತಿಳಿದಾಗ ಅಚ್ಚರಿಯಾಗುತ್ತದೆ. ಮುಂದುವರಿದು ಸುಮಾರು ನೂರು ವರ್ಷಗಳಷ್ಟು ಹಿಂದೆಯೇ ಭೂಮಿಯ ಶಾಖ ಏರುವುದಾಗಿ ಯೂನಿಸ್ ಹೇಳಿದ್ದರು ಎಂದಾಗಲೂ 'ಹೌದೇ?' ಎಂದನ್ನಿಸುವುದು; ಇಂದು ವಿಜ್ಞಾನಿಗಳೂ ಇದನ್ನು ಒಪ್ಪಿದ್ದಾರೆ.

ಸರೋಜರವರು ಸರಳವಾದ ಭಾಷೆಯಲ್ಲಿ ಸುಲಲಿತವಾಗಿ ಕಥೆಗಳನ್ನು ಹೇಳುವುದು, ಪಾರಿಭಾಷಿಕ ಪದಗಳನ್ನು ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ ಕ್ಲಿಷ್ಟವಾಗದಂತೆ ಚಮತ್ಕಾರಿಕವಾಗಿ ಬಳಸುವುದೂ ಓದುಗರ ಮನಸೆಳೆಯುತ್ತದೆ. ಹದಿಮೂರು ಮಹಿಳೆಯರು ಪ್ರಪಂಚಕ್ಕೆ ಅದ್ಭುತ ಕೊಡುಗೆಗಳನ್ನು ನೀಡಿ, ಕೆಲವರು ಬಹಳಷ್ಟು ಸಮಯದ ನಂತರ ಖ್ಯಾತರಾಗಿರುವುದನ್ನು ಗುರುತಿಸಿರುವ ಸರೋಜರವರ ಜಾಣ್ಮೆಯನ್ನು ಮೆಚ್ಚಲೇಬೇಕು. ಮಹಿಳೆಯರ ಬುದ್ಧಿಮತ್ತೆಯನ್ನು ಮುಂದೆಂದೂ ಕೀಳಾಗಿ ಕಾಣಬಾರದು ಎನ್ನುವುದು ಪುಸ್ತಕವನ್ನು ಓದುವ ಎಲ್ಲಾ ಜಾಣ ಜಾಣೆಯರ ಕಣ್ತೆರೆಸಿದಲ್ಲಿ ಪುಸ್ತಕ ಹಾಗೂ ಸರೋಜರ ಬರಹ ಸಾರ್ಥಕ.

***

ಗುನ್ನಂಪಟ್ಟಿ (ತೆಳುವಾದ ತಗಡು)

– ಪೂರ್ಣಿಮ ಭಗವಾನ್

ಕಣ್ಣು ಸೆಳೆಯುವ ನೀಲಿ ಕೆಂಪು ಹಳದಿಯ ಪಟ್ಟಿ
ಬಣ್ಣ ಬಣ್ಣದ ತಗಡು ಹಾಳೆಯೊಲು ಪಟ್ಟಿ
ಸಣ್ಣ ಚಚ್ಚೌಕದಲಿ ದೊರಕುವುದು ಚಿನ್ನಾರಿ
ಹೆಣ್ಣಿನಾ ಕರಕುಶಲತೆಗೆ ಸರಕದು

ರಟ್ಟಿನಲಿ ಮಂಟಪಕು ವರ್ತಿಯದಲಂಕಾರ
ಪುಟ್ಟ ಮಕ್ಕಳ ಶಿರಕಲಂಕಾರ ಮಾಡಿ
ತೊಟ್ಟ ರಾಜನ ಠೀವಿ ನೋಡುವುದೆ ಸಂತಸವು
ಒಟ್ಟಿನಲಿ ಇಂದಿಗೂ ಬಳಕೆಯಲಿದೆ.

***

ಇಂತೇದಿಸು (ಅಪ್‌ಡೇಟ್)

– ಪೂರ್ಣಿಮ ಭಗವಾನ್

ಆಲಕ್ಕೆ ಜೋತು ಬೀಳದೆ ನಡೆಸಿ ಹೊಸ ಬದುಕು
ಕಾಲಕ್ಕೆ ತಕ್ಕಂತೆ ಇಂತೇದಿಸುತಲಿರೆ
ಜಾಲ ತೋರುವ ತಾಣ ಜಗದಗಲ ಮುಗಿಲಗಲ
ಕಾಲ ಸರಿವುದು ಅರಿಯುವುದೇ ಇಲ್ಲ

ಚಿಂತನೆಯ ವರ್ಧನೆಗೆ ದೀವಿಗೆಯು ಜೊತೆಗಿರಲು
ಚಿಂತೆಯದು ಮರೆಯಾಗಿ ಹರ್ಷಮಯ ಬದುಕು
ಕಂತುಪಿತ ಜೋಳಿಗೆಯಲೇನೇನು ಅವಿತಿದಿಯೊ
ಸಂತೆಗದ ತರುತಿರಲು ಬದಲಾವಣೆಯು.

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ - 245

ಅಧ್ಯಕ್ಷರ ಅನಿಸಿಕೆಗಳು

– ಸುಜಾತಾ ರವೀಶ್, ಮೈಸೂರು

ಇಂದಿನ ಈ ದಾಸೋಹದ ಅಧ್ಯಕ್ಷತೆ ವಹಿಸುವ ಸುವರ್ಣ ಅವಕಾಶವನ್ನು ಕೊಟ್ಟಿರುವ ಸಂಚಾಲಕರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು ಇದಕ್ಕೆ ನಾನು ಎಷ್ಟು ಅರ್ಹಳೋ ತಿಳಿದಿಲ್ಲ. ಆದರೆ ನನಗೆ ವಹಿಸಿಕೊಟ್ಟಿರುವ ಈ ಜವಾಬ್ದಾರಿಯನ್ನು ತುಂಬಾ ಹೆಮ್ಮೆಯಿಂದ ಸ್ವೀಕರಿಸುವೆ. ಇದು ನನಗೆ ಒಂದು ಪ್ರಶಸ್ತಿಗೆ ಸಮಾನ, ಗಂಧದ ಮರಗಳು ತುಂಬಿರುವ ತೋಟ ಈ ಸಮನ್ವಯ ಸಮಿತಿಯ ವೇದಿಕೆ. ಇಲ್ಲಿ ನಾನೊಂದು ಗರಿಕೆಯ ಹುಲ್ಲು ಮಾತ್ರ. ಇಲ್ಲಿನ ಜ್ಞಾನಿಗಳ, ದಿಗ್ಗಜರ ಮಾರ್ಗದರ್ಶನ ನಿಜಕ್ಕೂ ಅಮೂಲ್ಯ ಇವರೆಲ್ಲರ ಸಹವಾಸ ನನಗೆ ಒದಗಿಬಂದ ಸುಕೃತ ಎಂದೇ ಭಾವಿಸುವೆ.

ತುಂಬಾ ವೈವಿಧ್ಯಮಯವಾದ ಅರ್ಥಪೂರ್ಣ ಬರಹಗಳು, ಸುಂದರ ಕವಿತೆಗಳು, ವಿಚಾರಪೂರ್ಣ ಲೇಖನಗಳು ಇಂದಿನ ಪ್ರಸ್ತುತಿಯಲ್ಲಿ ಇದ್ದವು. ಅವುಗಳ ಸ್ಥೂಲ ಪರಿಚಯ ಈ ಕೆಳಕಂಡಂತೆ ಮಾಡಿದ್ದೇನೆ.

೧. ಸಿಂಧು ಹರಿತಸ್ – 'ಬಣ್ಣ ರಹಿತ ಬಾನು'

ಧುರ್ಯೋಧನನ ಮರಣಾನಂತರ ಕುರುಕ್ಷೇತ್ರ ಯುದ್ಧದ ತರುವಾಯ, ಒಳ್ಳೆಯ ಮಗ, ಪತಿ ತಂದೆ ಎನಿಸಿದ ತನ್ನ ಪತಿಯ ಬಗ್ಗೆ ಭಾನುಮತಿ ಯೋಚಿಸುವ ಸ್ವಗತ ಈ ಕಥಾವಸ್ತು. ಪ್ರತಿ ಸಂಬಂಧದ ನಡವಳಿಕೆ ಅದರ ಸೂಕ್ತಾಸೂಕ್ತತೆಯನ್ನು ಒರೆಹಚ್ಚಿ ಅದರ ಬಗ್ಗೆ ಹೇಳುತ್ತಾ ಹೋಗುವ ನಿರೂಪಣೆ ತುಂಬಾ ಸೊಗಸಾಗಿದೆ. ಇನ್ನಷ್ಟು ಆಳವಾಗಿ ವಿಸ್ತೃತವಾಗಿ ಬರೆದರೆ ಒಳ್ಳೆಯ ನೀಳ್ಗತೆ ಅಥವಾ ಕಾದಂಬರಿಯೇ ಆಗುವಷ್ಟು ಅಗಾಧ ಕಥಾಹಂದರ. ಚಿಕ್ಕದಾಗಿ ಪ್ರಸ್ತುತಗೊಳಿಸಿರುವ ರೀತಿ ಚೆನ್ನಾಗಿದೆ.

೨. ಸುಷುಮಾ ಸುರೇಶ್ – 'ಪಾತಜ್ಜಿ – ಪ್ರೀತಿ ಹಂಚುವ ಅಜ್ಜಿ' (ಎರಡು ಪುಟ್ಟ ಕತೆಗಳು)

ಹಸಿದ ಮಗುವಿನ ರಚ್ಚೆಗೆ ರೋಸಿದ ತಾಯಿ; ತಾಯಿ ಮಗು ಇಬ್ಬರನ್ನೂ ಸಮಾಧಾನಿಸುವ ಪಾತಜ್ಜಿ. ಬಾಯಿಪಾಠ ಮಾಡಿ ಹೇಳಲಾಗದ ಹುಡುಗನನ್ನು ಮೇಷ್ಟ್ರು ಅಪ್ಪ ಬೈದು ಹೊರಗೆ ಹಾಕಿದಾಗ ಜಾಣತನದಲ್ಲಿ ಅವನಿಗೆ ಗೊತ್ತಿರುವುದನ್ನು ಅವನಿಂದಲೇ ಹೇಳಿಸುವ ಪಾತಜ್ಜಿ. ಈ ಎರಡು ಪ್ರಸಂಗಗಳನ್ನು ತುಂಬಾ ಚಂದದಲ್ಲಿ ನಿರೂಪಿಸಿರುವ ಕಥೆಗಳು ನಿಜಕ್ಕೂ ಪ್ರೀತಿ ಹಂಚುವ ಅಜ್ಜಿ ಪಾತಜ್ಜಿ. ಕಥಾಮಾಲಿಕೆಯ ಎರಡೂ ಪುಷ್ಪಗಳು ಸುಂದರವಾಗಿವೆ. ಸ್ವಭಾವದ ಸಾಮ್ಯತೆಯಿಂದಲೋ, ಹೆಸರಿನ ಸಾಮ್ಯತೆ ಯಿಂದಲೋ, ತ್ರಿವೇಣಿಯವರ ಕಾಶಿಯಾತ್ರೆಯ ಪಾತಜ್ಜಿಯ ಪಾತ್ರ ನೆನಪಿಗೆ ಬಂತು.

೩. ರಾಧಿಕಾ ಗುಜ್ಜರ್ – 'ಡೈರಿಯ ಪುಟಗಳು' (ಕವನ)

ಡೈರಿಯ ಪುಟಗಳ ಬಣ್ಣನೆ, ಅದನ್ನು ನೋಡಿದಾಗ ಧಾಂಗುಡಿಯಿಡುವ ಹಳೆಯ ನೆನಪುಗಳು ಇವೆಲ್ಲವೂ ತುಂಬಾ ಸುಂದರ ಸಾಲುಗಳಾಗಿ ಒಡ ಮೂಡಿರುವ ಅರ್ಥಪೂರ್ಣ ಕವನ. ಕುಟುಂಬದ ಒಬ್ಬರ ಕಣ್ಮರೆ, ಬೆಳೆಯುವ ಸಂಸಾರದ ಹೊಸ ಸದಸ್ಯರ ಸೇರ್ಪಡೆ ವಿವರಿಸುವ ಸಾಲುಗಳು ತುಂಬಾ ಚೆನ್ನಾಗಿ ಮೂಡಿಬಂದಿವೆ,

ಗಳಿಗೆ ಗಳಿಗೆಗೂ ಬದಲಾಗುವ ಹೊರಗಲಿ
ದಿನಚರಿಯ ಅಚಲ ಪುಟ ನಾವು ನಾವೇ – ಎಂಬ ಸಾಲು ಧ್ವನಿಸುವ ಸಂದೇಶ ಗಮನೀಯ.

ಸುಜಾತಾ ರವೀಶ್

ಶ್ರೀಮತಿ ಸುಜಾತಾ ರವೀಶ್ ಪ್ರಸ್ತುತ ಭಾರತೀಯ ಜೀವವಿಮಾ ನಿಗಮದ ಮೈಸೂರು ಶಾಖೆ-5ರಲ್ಲಿ ಉನ್ನತ ದರ್ಜೆ ಸಹಾಯಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ತಂದೆ ಕೀರ್ತಿಶೇಷ ಎನ್.ನರಹರಿರಾವ್ ಮತ್ತು ತಾಯಿ ಶಕುಂತಲಾ ಎನ್.ರಾವ್. ಪಿ.ರವೀಶ್ ಇವರ ಪತಿ.

ಸುಜಾತಾ ರವೀಶ್ ಅವರಿಗೆ ಬರವಣಿಗೆಯಲ್ಲಿ ಮೂರು ದಶಕಗಳ ಅನುಭವ. ಕಥೆ, ಕವನ, ಹನಿಗವನ, ಗಜಲ್, ಮುಕ್ತಕ, ಚುಟುಕು, ಮಕ್ಕಳ ಕಥೆ, ಟಂಕಾ, ತನಗ, ಷಟ್ಪದಿಗಳು, ಲೇಖನಗಳು, ಪ್ರಬಂಧಗಳು ಹೀಗೆ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಸಾಹಿತ್ಯ ರಚಿಸಿರುವ ಇವರು ಅಂಕಣಕಾರ್ತಿಯಾಗಿಯೂ ಹೆಸರು ಗಳಿಸಿದವರು. ರಂಗೋಲಿ, ಆಭರಣ ತಯಾರಿಕೆ, ಕಸೂತಿ, ತೋಟಗಾರಿಕೆ ಇವರ ಇತರ ಹವ್ಯಾಸಗಳು.

'ಅಂತರಂಗದ ಆಲಾಪ', 'ಮನವೀಣೆಯ ಮೀಟು', 'ಮುಖವಾಡ' ಕವನ ಸಂಕಲನಗಳು, 'ಭಾವಬಿಂಬ' ಪುಸ್ತಕ ವಿಮರ್ಶೆಗಳ ಸಂಕಲನ ಇವರ ಪ್ರಕಟಿತ ಕೃತಿಗಳು. 'ಭಾವಬಾಗಿನ' ಗಝಲ್ ಸಂಕಲನ ಮಾತ್ರವಲ್ಲದೆ, ಹಲವು ಕವನಗಳು, ಲಲಿತ ಪ್ರಬಂಧಗಳು ಮತ್ತು ಪುಸ್ತಕ ವಿಮರ್ಶೆಗಳ ಸಂಕಲನಗಳು ಪ್ರಕಟಣೆಯ ಹಂತದಲ್ಲಿವೆ. ಇವರ ಕವನಗಳು, ಬರೆಹಗಳು ನಾಡಿನ ಪ್ರಸಿದ್ಧ ದಿನಪತ್ರಿಕೆಗಳು ಮತ್ತು ನಿಯತಕಾಲಿಕಗಳು, ಸಂಪಾದಿತ ಕವನ ಸಂಕಲನಗಳು ಮತ್ತು ಹಲವಾರು ಬ್ಲಾಗ್‌ಗಳಲ್ಲಿ ಬೆಳಕು ಕಂಡಿವೆ. 'ಮುಖವಾಡಗಳು' ಕವನ ಕುವೆಂಪು ವಿಶ್ವವಿದ್ಯಾಲಯದ ಪದವಿ ತರಗತಿಗೆ ಪಠ್ಯವಾಗಿ ಸೇರ್ಪಡೆಯಾಗಿದೆ.

ಸಾಹಿತ್ಯ ಸಿಂಧು ಪ್ರಶಸ್ತಿ, ಅಭಿರುಚಿ ಸಾಹಿತ್ಯರತ್ನ ಪ್ರಶಸ್ತಿ, ಸಾಹಿತ್ಯ ಶ್ರೀ, ಸಾಹಿತ್ಯ ಗಂಗಾ ಮುಕ್ತಕ ಸೇವಾ ಪ್ರಶಸ್ತಿ, ಕುವೆಂಪು ಪ್ರಶಸ್ತಿಗಳಿಗೆ ಭಾಜನರಾಗಿರುವ ಸುಜಾತಾ ರವೀಶ್, ಲೇಖಿಕಾ ತ್ರೈಮಾಸಿಕ ಪತ್ರಿಕೆಯವರು ಆಯೋಜಿಸಿದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಹಾಗೂ ಫೇಸ್‌ಬುಕ್ ವಾಟ್ಸಾಪ್‌ಗಳಲ್ಲಿನ ಸಾಹಿತ್ಯಕ ಗುಂಪುಗಳ ಸ್ಪರ್ಧೆಗಳಲ್ಲಿ ಅಸಂಖ್ಯ ಪ್ರಶಸ್ತಿ ಪತ್ರಗಳನ್ನು ಪಡೆದಿದ್ದಾರೆ. ಲೇಖಿಕಾ ಸಾಹಿತ್ಯ ಬಳಗ ಗುಂಪಿನಲ್ಲಿ ಹಲವು ಹಿರಿಯ ಮಹಿಳಾ ಸಾಹಿತಿಗಳು ಮತ್ತು ಸಾಧಕರ ಬಗ್ಗೆ ಮಂಡಿಸಿದ ಇವರ ಪ್ರಬಂಧಗಳು ಮೆಚ್ಚುಗೆ ಗಳಿಸಿವೆ. ಆಕಾಶವಾಣಿಯ 'ಮಹಿಳಾ ರಂಗ' ಕಾರ್ಯಕ್ರಮದಲ್ಲಿ ಇವರ ಸಂದರ್ಶನ ಪ್ರಸಾರಗೊಂಡಿದೆ. 'ಸಂಗಾತಿ' ಬ್ಲಾಗ್ ಪತ್ರಿಕೆಯ ಉಪಸಂಪಾದಕರಾಗಿ ಹಾಗೂ 'ಸಾಹಿತ್ಯೋತ್ಸವ', 'ಕನ್ನಡಮ್ಮನ ತೇರು' ಮತ್ತು 'ಮಂದಾರ' ಫೇಸ್‌ಬುಕ್ ಸಾಹಿತ್ಯ ಬಳಗಗಳಲ್ಲಿ ನಿರ್ವಾಹಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

***

೪. ಗಣಪತಿ ಹೆಗಡೆ – 'ಸಂಸ್ಕೃತ ವ್ಯಂಜನ ಸಂಧಿಗಳು'

ಪ್ರೌಢಶಾಲೆಯ ಕನ್ನಡ ವ್ಯಾಕರಣ ತರಗತಿಯಲ್ಲಿ ಕುಳಿತ ಅನುಭವ ತಂದಿತು. ಕನ್ನಡ ಭಾಷೆಯಲ್ಲಿ ಬಳಸುವ ಸಂಸ್ಕೃತ ವ್ಯಂಜನ ಸಂಧಿಗಳಾದ ಜಶ್ತ್ವ ಸಂಧಿ, ಶ್ಚುತ್ವ ಸಂಧಿ, ಷ್ಟುತ್ವ ಸಂಧಿ ಮತ್ತು ಅನುನಾಸಿಕ ಸಂಧಿ ಇವುಗಳ ಬಗ್ಗೆ ಉದಾಹರಣೆ ಸಮೇತ ತುಂಬಾ ಚೆನ್ನಾಗಿ ವಿವರಿಸಿದ್ದಾರೆ. ನಿಜಕ್ಕೂ ಸಂಗ್ರಹ ಯೋಗ್ಯ ಲೇಖನ.

೫. ವಿಠಲ್ ಇಜೇರಿ – 'ವಸಂತ ಕಾಲ' (ಓ ಹೆನ್ರಿಯ ಇಂಗ್ಲಿಷ್ ಕಥೆಯ ಕುರಿತು)

ಓ ಹೆನ್ರೀ (ಸಿಡ್ನಿ ಪೋರ್ಟರ್) ಅವರ 'ವಸಂತ ಕಾಲ' ('ಸ್ಪ್ರಿಂಗ್ ಟೈಮ್') ಕತೆಯನ್ನು ಅನುವಾದಿಸಿ ಪ್ರಸ್ತುತಪಡಿಸುತ್ತಿದ್ದಾರೆ ಶ್ರೀ ವಿಠಲ್ ಇಜೇರಿಯವರು. ಸರಳ ಭಾಷೆಯಲ್ಲಿ ಅನಿರೀಕ್ಷಿತ ತಿರುವುಗಳನ್ನು ಪಡೆದುಕೊಳ್ಳುತ್ತದೆ ಮತ್ತು ಆಳವಾದ ಮಾನವ ಸಂಬಂಧಗಳನ್ನು ಹೊಂದಿರುತ್ತವೆ ಅವರ ಕಥೆಗಳು ಎನ್ನುತ್ತಾರೆ ಇಜೇರಿಯವರು. ವಸಂತ ಮಾಸದಲ್ಲಿ ಪ್ರೀತಿಗೆ ಸಿಲುಕಿದ ಸಾರಾ

ಮತ್ತು ಗ್ರಾಮೀಣ ಯುವಕ ವಾಲ್ಟೇರ್ ಅವರ ಕಥೆಯಾಗಿದ್ದು ಮಧ್ಯೆ ಬೇರೆಯಾಗಿ ವಿರಹಿಗಳಾಗಿದ್ದ ಅವರು ಮತ್ತೊಂದು ವಸಂತ ಮಾಸದಲ್ಲಿ ಒಂದಾಗಿದ್ದು ವಿಶೇಷ. ಬಹಳ ಸುಂದರ ಅನುವಾದ ಓ ಹೆನ್ರಿ ಅವರ ಕಥೆಗಳನ್ನು ಕನ್ನಡ ಓದುಗರಿಗೆ ಪರಿಚಯಿಸುತ್ತಿರುವ ವಿಟಲ್ ಇಜೇರಿ ಅವರಿಗೆ ಧನ್ಯವಾದಗಳು.

೬. ರೇಣುಕಾ ದೇಸಾಯಿ – 'ನಾನು ನಮ್ಮವರು'

ಇಂದೀಗ ನಶಿಸಿಹೋಗುತ್ತಿರುವ ಬಾಂಧವ್ಯಗಳ ಪುನರುಜ್ಜೀವನದ ಮಹತ್ವ ಎತ್ತಿ ಹಿಡಿಯುವ ಲೇಖನ. ತಮ್ಮ ದೊಡ್ಡಪ್ಪನ ಮಗನ ೮೦ನೇ ವರ್ಷದ ಹುಟ್ಟುಹಬ್ಬ ಹಾಗೂ ಮರಿಮಗ ಹುಟ್ಟಿದ್ದಕ್ಕೆ ಕನಕಾಭಿಷೇಕ ಸಮಾರಂಭಕ್ಕೆ ಹೋಗಿ ಉಳಿದೆಲ್ಲ ಸಂಬಂಧಿಗಳನ್ನು ಭೇಟಿಯಾಗಿ ಅವರ ವಿಷಯಗಳನ್ನು ತಿಳಿದು ಮನಸ್ಸಿನಲ್ಲಿ ಉಳಿದುಹೋಗಿದ್ದ ಕಹಿ ಹೋಗಲಾಡಿಸಿಕೊಂಡೆವು ಎನ್ನುತ್ತಾರೆ. ಈ ಎಲ್ಲಾ ಬಂಧುಗಳನ್ನು ಒಂದುಗೂಡಿಸಿದ ಭಾವಸೇತುವೆಯಾದ ತಮ್ಮ ಅಣ್ಣನ ಬಗ್ಗೆ ಹೇಳುತ್ತಾರೆ. ವರ್ತಮಾನದ ಕಾಲಘಟ್ಟದಲ್ಲಿ ಮೈಕ್ರೋ ಕುಟುಂಬಗಳ ಕಾಲದಲ್ಲಿ ಈ ರೀತಿ ಸಂಬಂಧಗಳನ್ನು ಉಳಿಸಿಕೊಳ್ಳುವ ಬೆಳೆಸಿಕೊಳ್ಳುವ ಪ್ರಾಮುಖ್ಯತೆ ಕಂಡುಕೊಂಡು ಆ ಬಗ್ಗೆ ಕಾರ್ಯಪ್ರವೃತ್ತರಾಗೋಣ ಎನ್ನುವ ಈ ಲೇಖನ ತುಂಬಾ ಸಕಾಲಿಕ.

೭. ನಾಗರತ್ನ ಚಂದ್ರಶೇಖರ್ – 'ಲೇಡೀಸ್ ಪಬ್'

ಇಂದೀಗ ಮಹಿಳಾ ಸಮಾನತೆಯ ಹೆಸರಿನಲ್ಲಿ ಸ್ತ್ರೀಯರು ಪಾನಪ್ರಿಯರು ಆಗಿರೋದು ಕಾಣಬಹುದು. ಇತ್ತೀಚೆಗೆ ಬೆಂಗಳೂರಿನಲ್ಲಿ ಹೊಸ ವರ್ಷದ ಆಚರಣೆ ಸಮಯದಲ್ಲಿ ಸ್ತ್ರೀಯರು ಕುಡಿದು ತೂರಾಡುತ್ತಿದ್ದ ವಿಡಿಯೋಗಳನ್ನು ಗಮನಿಸಿರಬಹುದು. ಹೀಗೆ ಮಹಿಳಾ ಪಬ್ ಬಗ್ಗೆ ಗೆಳೆಯರಿಬ್ಬರ ಮಧ್ಯದ ಮಾತುಕತೆ ಇಲ್ಲಿನ ವಸ್ತು. ಹಾಸ್ಯವಾಗಿ ಬರೆದಿದ್ದರೂ ವಿಚಾರ ಗಂಭೀರ. ತುಂಬಾ ಚೆನ್ನಾಗಿ ಬಂದಿದೆ. "ಮೆಟ್ರೋ ಏರಿ ಕೆಟ್ರೋ' ಮೊದಲಾದ ಪದ ಬಳಕೆಗಳು ರಂಜಿಸಿದವು.

೮. ಗೋಪಿನಾಥ್ – 'ನನ್ನ ಮಗಳಿನ್ನೂ ಮಗುವೆ'

ತುಂಬಾ ಭಾವಪೂರ್ಣ ಕಥೆ. ತಾಯಿ ಇಲ್ಲದೆ ಬೆಳೆದ ಮಗಳು ಯಾಮಿನಿ ಇದ್ದಕ್ಕಿದ್ದಂತೆ ಮನೆ ಬಿಟ್ಟು ಹೋದಾಗ ಅವಳ ತಂದೆಯ ಪರಿತಪನೆ ಇಲ್ಲಿನ ಕಥಾವಸ್ತುವಾಗಿ ಮೂಡಿಬಂದಿದೆ. ಹೇಳದೆ ಕೇಳದೆ ಮಗಳು ಪ್ರೀತಿಸಿ ಮದುವೆಯಾಗಿ ಹೋಗಿ ಬಿಟ್ಟಿರುತ್ತಾಳೆ. ಕಡೆಗೆ ಅವಳ ಗೆಳತಿಯ ಮೂಲಕ ವಿಷಯ ತಿಳಿದು ಅವಳ ಬಳಿ ಹೋಗುತ್ತಾರೆ. ಮಗಳು ಅಳಿಯನನ್ನು ಹರಸುತ್ತಾರೆ. ಮಗಳು ನೀವು ಮಾಡುವ ಸಾರು ತಿನ್ನಬೇಕು ಎಂದಾಗ ಅಪ್ಪನಿಗೆ ತನ್ನ ಮಗಳು ಇನ್ನು ಮಗುವಂತೆ ಅಂತ ಭಾಸವಾಗುತ್ತೆ. ತುಂಬಾ ಸುಂದರ ನಿರೂಪಣೆಯ ಕಥೆ.

೯. ಪೂರ್ಣಿಮ ಭಗವಾನ್ – ಎರಡು ಕವನಗಳು

"ಶಾಂತ ಬೀರಿದ ಕಾಂತಿ" – ಧರ್ಮಸ್ಥಳದಲ್ಲಿ ನಡೆದ ಸಮ್ಮೇಳನದಲ್ಲಿ ಮಂಡಿಸಿದ ವಿಚಾರದ ಬಗ್ಗೆ ತಿಳಿಸುತ್ತಾರೆ. ಭಾಷಾ ಬಳಕೆ ತುಂಬಾ ಸೊಗಸಾಗಿದೆ. "ಅರುಣ ಕಿರಣ" ಕವನದಲ್ಲಿ ಅರುಣಾ ಅವರ ಅಂಕಣದ ಬಗ್ಗೆ ಹೇಳುತ್ತಾರೆ. ಷಟ್ಪದಿಯಲ್ಲಿರುವ ಎರಡು ಕವನಗಳು ಚೆನ್ನಾಗಿ ಮೂಡಿಬಂದಿವೆ.

೧೦. ಶೀಲಾ ಅರಕಲಗೂಡು – ಮಕ್ಕಳ ಮೂರು ಕವನಗಳು

ಮಕ್ಕಳ ಕವನಗಳನ್ನು ರಚಿಸುವುದಲ್ಲದೆ ಸೊಗಸಾಗಿ ವಾಚನ ಮಾಡುವ ಶೀಲಾ ಅರಕಲಗೂಡು ಅವರ ಮೂರು ಕವನಗಳಲ್ಲಿ ಮೊದಲನೆಯದು "ಹೋಟೆಲಲ್ಲಿ ಗುಂಡ". ಅಪ್ಪ ಕಷ್ಟಪಟ್ಟು ಸಂಪಾದಿಸಿದನ್ನು ದುಂದು ವೆಚ್ಚ ಮಾಡುವ, ಹಿರಿಯರಿಗೆ ಬೆಲೆ ಕೊಡದ ಗುಂಡ ಹೋಟೆಲಲ್ಲಿ ತನ್ನ ತಂದೆಯೇ ಸಪ್ಲೈಯರ್ ಆಗಿರುವುದನ್ನು ಕಾಣುವ ಕವನ. ನಿಯಮ ಮೀರಿ ವಾಹನ ಚಾಲನೆ ಮಾಡಬಾರದು ಎಂದು ತಿಳಿಸುವ ಎರಡನೆಯ ಕವನ "ಪಾಠ ಕಲಿತ ಗುಂಡ". ಸೈನಿಕರ ಪ್ರಾಮುಖ್ಯತೆ ಹಿರಿಮೆ ಎತ್ತಿ ಸಾರುತ್ತ ನಾನು ಸೈನಿಕಳಾಗುವೆ ಎಂದು ಗೌರಿ ಅಪ್ಪನಿಗೆ ಹೇಳುವ ಕವನ "ಸೈನಿಕರಾಗುವೆವು. ಗೇಯ ಗುಣಗಳುಳ್ಳ ತುಂಬಾ ಸುಂದರ ಮಕ್ಕಳ ಪದ್ಯಗಳು.

೧೧. ಗಾಯತ್ರಿ ಮೂರ್ತಿ – 'ಮೋಜಿನ ಪ್ರಸಂಗಗಳು'

ಮೂರು ಹಾಸ್ಯ ಪ್ರಸಂಗಗಳನ್ನು ಚೆನ್ನಾಗಿ ನಿರೂಪಿಸಿದ್ದಾರೆ. "ಡೆಂಟಿಸ್ಟ್ ಅಲ್ಲ ಹಲ್ಲಿನ ಡಾಕ್ಟರ್" ಎಂದು ಹೇಳಿ ಮಗನನ್ನು ಕರೆದೊಯ್ದ ಉಪಾಯ ಫಲಿಸಿತು. ಆದರೆ ಇಲ್ಲಿ ಡಾಕ್ಟರ್ ಆದವರು ಮಕ್ಕಳನ್ನು ಅರ್ಥ ಮಾಡಿಕೊಂಡು ಚಿಕಿತ್ಸೆ ನೀಡಬೇಕು ಎಂಬ ಸಂದೇಶ ಅಡಗಿದೆ. "ಮೊದಲೇ ಹೇಳಬಾರದ" ಪ್ರಸಂಗದಲ್ಲಿ ಸಕ್ಕರೆ ಹಾಕದ ಕೇಸರಿಬಾತ್‌ನ್ನು ಮಾತನಾಡದೆ ತಿಂದ ಮಗನ ಬಗ್ಗೆ ಹೆಮ್ಮೆ ಎನಿಸುತ್ತದೆ. ಭಾಷೆಯ ಪ್ರಯೋಗದ ಆಭಾಸದ ಬಗೆಗಿನ ಲೇಖನ "ಬಸ್ ಏಕ್ ಲೋಟ ದೂದ". ಕನ್ನಡದ ಲೋಟ ಹಿಂದಿಯಲ್ಲಿ ಚೊಂಬು. ಇದು ಎಲ್ಲರ ನಗುವಿಗೆ ಕಾರಣ ಆಯಿತು. ಪರವಾಗಿಲ್ಲ ಗಾಯತ್ರಿ ಮೇಡಂ, ಹಿಂದಿ ಲೋಟದಲ್ಲೇ ದಿನಾ ಹಾಲು ಕುಡಿಯಿರಿ. ಆರೋಗ್ಯಕ್ಕೆ ಒಳ್ಳೆಯದು.

೧೨. ಮಾಲತಿ ಶ್ರೀನಿವಾಸನ್ – ಎರಡು ಕವನಗಳು

"ಮಸ್ತಿಷ್ಕದಲ್ಲಿ ಯಂತ್ರ" – ಮೆದುಳು ಎಂಬ ಸೋಜಿಗದ ಯಂತ್ರದ ಕುರಿತು ಬರೆಯುತ್ತಾ ಮನ ಹುಚ್ಚು ಕುದುರೆ ಎನ್ನುತ್ತಾರೆ. ಕಡಿವಾಣ ಹಾಕಲಾಗದ ಈ ಮನವನ್ನು ನಿಯಂತ್ರಿಸಲು ಬೇರೊಂದು ಯಂತ್ರವನ್ನು ಹುಡುಕಬೇಕು ಎನ್ನುತ್ತಾರೆ. ಸರಳ ಸುಂದರ ಕವನ. ಮತ್ತೊಂದು ಕವನದ ಶೀರ್ಷಿಕೆ "ಮನದ ಕವನ". ಸದ್ಭಾವನೆಗಳ ಆಶಯದ ಕವನ ಸದಾ ಮನದಲ್ಲಿ ಅನುರಾಗದ ಅಲೆಯ ಮಮತೆಯ ಬಿಂಬ ಹೊತ್ತು ಸಾಗುತ್ತಿರು ಎಂದು ಮನಕ್ಕೆ ಆದೇಶ, ಆತ್ಮಾವಲೋಕನದ ಅಗತ್ಯದ ಸಂದೇಶ ನೀಡುವ ಈ ಕವನ ತುಂಬಾ ಮಾರ್ಮಿಕವಾಗಿದೆ.

೧೩. ಕೆ.ಎನ್.ಮಹಾಬಲ – 'ಡಾ. ರಾಜ್ ಚಿತ್ರಗೀತೆಗಳಲ್ಲಿ ಬಾಂಧವ್ಯದ ನೆಲೆಗಳು' – ಪುಸ್ತಕ ಪರಿಚಯ

ಡಾ. ಡಿ ಸತೀಶ್ ಚಂದ್ರ ಅವರ "ಡಾಕ್ಟರ್ ರಾಜ್ ಚಿತ್ರಗೀತೆಗಳಲ್ಲಿ ಬಾಂಧವ್ಯದ ನೆಲೆಗಳು" ಎಂಬ ಪುಸ್ತಕದ ಪರಿಚಯ ಮಾಡಿಕೊಡುತ್ತಾರೆ. ಪುಸ್ತಕದ ವಿವಿಧ ಭಾಗಗಳನ್ನು ವಿವರಿಸುತ್ತಾ ವಿವಿಧ ರೀತಿಯ ಕೌಟುಂಬಿಕ ನಾಡು ನುಡಿ, ಭಕ್ತಿ ಭಾವ, ಸಾಮಾಜಿಕ ಸಂಬಂಧ – ಈ ರೀತಿಯಲ್ಲಿ ವಿಂಗಡಣೆಯಾಗಿ ಉದಾಹರಣೆ ಸಮೇತ ವಿಶದವಾದ ವಿವರಣೆ ಇದೆ ಎಂಬುದನ್ನು ತಿಳಿಸಿಕೊಡುತ್ತಾರೆ .ಹಾಗೂ ಕೃತಿಯ ಉದ್ದೇಶ ಸಾರ್ಥಕ ಎಂದು ಹೇಳುತ್ತಾರೆ. ಒಟ್ಟಿನಲ್ಲಿ ಪುಸ್ತಕ ಓದಬೇಕೆಂಬ ಆಸೆಯನ್ನು ಮೂಡಿಸುವಂತಹ ಲೇಖನ. ಈ ನಿಟ್ಟಿನಲ್ಲಿ ಮಹಾಬಲ ಅವರ ಉದ್ದೇಶವೂ ಸಾರ್ಥಕವಾಯಿತು ಅಲ್ಲವೇ ?

೧೪. ಜಿ ವಿ ನಿರ್ಮಲ – 'ವಿಜ್ಞಾನದ ಜಾಡು ಬದಲಿಸಿದ ಜಾಣೆಯರು' – ಪುಸ್ತಕ ಪರಿಚಯ

ಶ್ರೀಮತಿ ಸರೋಜಾ ಪ್ರಕಾಶ್ ಅವರ "ವಿಜ್ಞಾನದ ಜಾಡು ಬದಲಿಸಿದ ಜಾಣೆಯರು" ಪುಸ್ತಕ ಪರಿಚಯ ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ಲೇಖಕಿಯವರು ಸ್ವೀಡನ್ ಗೆ ಹೋಗಿ ಮಾಹಿತಿ ಸಂಗ್ರಹಿಸಿ ಬಂದು ಈ ಪುಸ್ತಕ ಬರೆದಿದ್ದಾರೆ ಎಂದು ತಿಳಿಸುತ್ತಾರೆ. ಜನ ಪ್ರಪಂಚದಾದ್ಯಂತದ ೧೩ ಮಹಿಳಾ ವಿಜ್ಞಾನಿಗಳ ಸಂಕ್ಷಿಪ್ತ ಪರಿಚಯವು ಪುಸ್ತಕದ ಬಗ್ಗೆ ಅತೀವ ಆಸಕ್ತಿ ಮೂಡಿಸುತ್ತದೆ. ಮಹಿಳೆಯರ ಸಾಧನೆಗಳನ್ನು ಅಲಕ್ಷ್ಯ ಮಾಡುವುದು ಸರಿಯಲ್ಲ ಎಂಬ ಸಂದೇಶದೊಂದಿಗಿನ ಲೇಖನ ತುಂಬಾ ಅರ್ಥಪೂರ್ಣ ಹಾಗೂ ಮಾಹಿತಿಪೂರ್ಣ. ಧನ್ಯವಾದಗಳು ಮೇಡಂ, ನನ್ನ ಓದಲೇ ಬೇಕಾದ ಪುಸ್ತಕದ ಪಟ್ಟಿಗೆ ಇದೊಂದು ಸೇರ್ಪಡೆ.

೧೫. ಪೋಲೇನಹಳ್ಳಿ ರಮೇಶ್ – 'ಬರಲಿ ಹೊಸತೆ' (ಕವನ)

'ಪೋರ' ಸಂಕ್ಷಿಪ್ತ ಕಾವ್ಯನಾಮದ ಪೋ;ಲೇನಹಳ್ಳಿ ರಮೇಶ್ ಅವರ "ಬರಲಿ ಹೊಸತೆ" ಕವನ, ಇದುವರೆಗೆ ಬರೆದ ಬರಹಗಳು ಏಕೋ ಬರಡು ಎಂಬುದನ್ನು 'ಭಾವ ಬತ್ತಿದ ಒರತೆ', 'ಎಸರು ಕುದಿಯುವ ಮುನ್ನ ಅನ್ನ ಸಂತರ್ಪಣೆ' ಎಂಬ ರೂಪಕಗಳ ಮೂಲಕ ತೋರಿಸುವ ಕವಿ ಮುಂದೆ ಬರೆಯುವ ಕವಿತೆಗಳಲ್ಲಿ ಭಾವ ತೀವ್ರತೆ ಹಾಗೂ ನಾವೀನ್ಯತೆಯನ್ನು ಅಪೇಕ್ಷಿಸುತ್ತಾರೆ. ಅದು ಹೇಗಿರಬೇಕು ಎಂದರೆ 'ಹನಿ ಹನಿ ಧ್ವನಿಸಿ ಬಂದ ಮೊದಲ ಮಳೆಯಂತೆ', 'ಹೂವು ನಿಶಬ್ದ ಅರಳಿದಂತೆ', 'ಎಳೆ ಕಂದ ಕನಸಿನಲಿ ನಕ್ಕಂತೆ' ಹೀಗೆ.. ಕವಿತೆಯ ಕಡೆಯ ಸಾಲುಗಳು ಮನಮುಟ್ಟುತ್ತವೆ 'ಮುತ್ತ ಕಸಿದು ಜೋಪಾನ ಎದೆಯಲಿರಿಸುವ ತೆರ ಕವಿತೆ ಬರಲಿ ಹೊಸತೇ'. ಸಶಕ್ತ ಪದ ಮತ್ತು ಉಪಮೆ ರೂಪಕಗಳ ಪ್ರಯೋಗ ಅತೀವ ಭಾವಾಭಿವ್ಯಕ್ತಿ ಇವರ ರಚನೆಯಲ್ಲಿದೆ ಎಂದು ಹೇಳಬಹುದು.

೧೬. ಎಂ.ಆರ್. ರಘುನಾಥ್ – 'ಬೇಗ ಬಾ ಕೃಷ್ಣ' (ಭಕ್ತಿ ಗೀತೆ)

ರಚನೆಯ ಜೊತೆಗೆ ಅದನ್ನು ತುಂಬಾ ಇಂಪಾಗಿ ಹಾಡಿ ಪ್ರಸ್ತುತಗೊಳಿಸಿದ ರೀತಿ ಚೆನ್ನಾಗಿತ್ತು. ಮೋಹನ ರಾಗ ಆದಿತಾಳದಲ್ಲಿ ಶಾಸ್ತ್ರೀಯವಾಗಿ ರಚಿಸಿರುವ ಭಕ್ತಿ ಗೀತೆ "ಬೇಗ ಬಾ ಕೃಷ್ಣಾ. ಕೃಷ್ಣನೆಂದರೆ ಮೋಹನ, ಅವನ ರೂಪವನ್ನು, ಗುಣಗಳನ್ನು ಹೊಗಳುತ್ತಾ ಅವನನ್ನು ಆರಾಧನೆ ಮಾಡುವ ಬಗೆಯನ್ನು ವರ್ಣಿಸುತ್ತಾರೆ. ವಾಗ್ಗೇಯಕಾರರು, ದಾಸವರೇಣ್ಯರು ಅವನನ್ನು 'ಜಗಕ್ಕೆ ನೀನೇ ಒಡೆಯ' ಎಂದು ಸಾರಿ ಹೇಳಿದ್ದನ್ನು ಸ್ಮರಿಸುತ್ತಾ ನಾನೀಗ ನಿನ್ನನ್ನು ಕರೆಯುತ್ತಿರುವೆ ಬಾ ಎಂದು ಭಕ್ತಿ ಭಾವದಿಂದ ಜಗದೋದ್ಧಾರಕನನ್ನು ಕರೆಯುತ್ತಾರೆ. ತುಂಬಾ ಸುಂದರ ಭಕ್ತಿ ಭಾವಪೂರ್ಣ ರಚನೆ ಹಾಗೂ ಗಾಯನ.

ಮತ್ತೊಮ್ಮೆ ಈ ವಿದ್ವತ್ಪೂರ್ಣ ಸಭೆಗೆ ಹಾಗೂ ಅವಕಾಶ ಮಾಡಿಕೊಟ್ಟ ಸಮನ್ವಯ ಸಮಿತಿ ಕನ್ನಡವೇ ಸತ್ಯ ಬಳಗದ ಎಲ್ಲಾ ಸಂಚಾಲಕರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತಾ ವಿರಮಿಸುವೆ.

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 245 ನಡೆದ ದಿನಾಂಕ: 10 ಜನವರಿ 2026
ಸಂಚಿಕೆಯ ಬಿಡುಗಡೆ ದಿನಾಂಕ: 14 ಫೆಬ್ರವರಿ 2026

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)